ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹುಣಸೆ ಸುಗ್ಗಿ ಬಂತೆಂದ್ರ ಕೂಡ್ಲಿಗಿಯಲ್ಲಿ ಸಡಗರದ ವಾತಾವರಣ

ಸುರಂಗ ಕುಸಿತ: ಕಾರ್ಮಿಕರು ಸಿಲುಕಿರುವ ಸ್ಥಳ ಪತ್ತೆ 13
ಭದ್ರತಾ ಪಡೆಗಳಿಗೆ ಸೂಚನೆ ನೀಡಿದ ಅಮಿತ್ ಶಾ
'ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ಹೆಚ್ಚಳ' 6
ಮಣಿಪುರ: ಮುಕ್ತ ಓಡಾಟಕ್ಕೆ ಅನುವು 13

ಸರಾಸರಿ ವಿದ್ಯುತ್ ಬಳಕೆ ಪ್ರಮಾಣ ಪರಿಷ್ಕರಿಸದ ರಾಜ್ಯ ಸರ್ಕಾರ • ಹೆಚ್ಚುವರಿ ಹೊರೆಯ ಆತಂಕ?

ಹೊಸ ಗ್ರಾಹಕರಿಗೆ 'ಅರ್ಧ ಜ್ಯೋತಿ'

• ರಾಜೇಶ್ ರೈ ಚಟ್ಲ

ಬೆಂಗಳೂರು: ಪ್ರತಿ ಗೃಹ ಬಳಕೆದಾರರಿಗೆ ತಿಂಗಳಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ರಾಜ್ಯ ಸರ್ಕಾರದ 'ಗೃಹ ಜ್ಯೋತಿ' ಗ್ಯಾರಂಟಿ ಯೋಜನೆಯ ಪೂರ್ಣ ಲಾಭವು ಹೊಸದಾಗಿ ಮನೆ ಕಟ್ಟಿದವರು ಹಾಗೂ ಬಾಡಿಗೆ ಮನೆ ಬದಲಾಯಿಸಿದವರಿಗೆ ಸಿಗುತ್ತಿಲ್ಲ.

2022–23ರ ಆರ್ಥಿಕ ವರ್ಷದಲ್ಲಿ ಬಳಕೆ ಮಾಡಿದ ವಿದ್ಯುತ್ ಯೂನಿಟ್‌ನ ಸರಾಸರಿ ಪ್ರಮಾಣ ಆಧರಿಸಿ 2023ರ ಜುಲೈ 1ರಿಂದ ಈ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ಅದೇ ವರ್ಷದ ಆಗಸ್ಟ್ 1ರಿಂದ ಯೋಜನೆಯ ಲಾಭ ಗ್ರಾಹಕರಿಗೆ ಸಿಗುತ್ತಿದೆ. ಯೋಜನೆ ಜಾರಿಯಾದ ಬಳಿಕ, ವಿದ್ಯುತ್ ಬಳಕೆಯ ಸರಾಸರಿ ಪ್ರಮಾಣವನ್ನು ಪರಿಷ್ಕರಿಸದೇ ಇದ್ದುದರಿಂದಾಗಿ, ಹೊಸತಾಗಿ ವಿದ್ಯುತ್ ಸಂಪರ್ಕ ಪಡೆದ ಗ್ರಾಹಕರು ಯೋಜನೆಯ ಪೂರ್ಣ ಲಾಭದಿಂದ ವಂಚಿತ-ರಾಗಿದ್ದಾರೆ.

ಈ ಯೋಜನೆ ಜಾರಿಗೆ 2024ರ ಜುಲೈ ತಿಂಗಳಿಗೆ ವರ್ಷ ತುಂಬಿದೆ. ಒಂದು ವರ್ಷ ಪೂರ್ಣಗೊಂಡ ಬಳಿಕ ಸರಾಸರಿ ವಿದ್ಯುತ್ ಯೂನಿಟ್ ಬಳಕೆಯನ್ನು ಪರಿಷ್ಕರಿಸಲಾಗುವುದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಪ್ರಕಟಿಸಿದ್ದರು. ಆದರೆ, ಈವರೆಗೂ ಪರಿಷ್ಕರಣೆ ಆಗಿಲ್ಲ.

ಹೊಸ ಸಂಪರ್ಕ ಪಡೆದ ಗ್ರಾಹಕರಿಗೆ 'ಬಳಕೆ ಇತಿಹಾಸ' ಇಲ್ಲದೇ ಇರುವುದರಿಂದ ಅಂತಹ ಬಳಕೆದಾರರು, ರಾಜ್ಯದ ಒಟ್ಟು ಗ್ರಾಹಕರು ಬಳಕೆ ಮಾಡುತ್ತಿದ್ದ ವಿದ್ಯುತ್ ಪ್ರಮಾಣದ ಸರಾಸರಿ ಲೆಕ್ಕ ಹಾಕಿ, ತಿಂಗಳಿಗೆ ಗರಿಷ್ಠ 53 ಯೂನಿಟ್ ಮತ್ತು ಅದಕ್ಕೆ ಶೇ 10ರಷ್ಟು ಹೆಚ್ಚುವರಿ ಸೇರಿ ಒಟ್ಟು 58 ಯೂನಿಟ್ 'ಉಚಿತ ವಿದ್ಯುತ್' ಯೋಜನೆಯ ಸೌಲಭ್ಯ ಪಡೆಯಲು ಅವಕಾಶವಿದೆ. ಅಂದರೆ, 58 ಯೂನಿಟ್ ಮೀರಿ, 200 ಯೂನಿಟ್ ಬಳಕೆಯ ಮಿತಿಯ ಒಳಗೆ ವಿದ್ಯುತ್ ಬಳಕೆ ಮಾಡುತ್ತಿದ್ದರೂ, ಬಳಸಲಾದ ಹೆಚ್ಚುವರಿ ಯೂನಿಟ್‌ನ ಶುಲ್ಕವನ್ನು ಪಾವತಿಸಲೇಬೇಕಿದೆ.

13ನೇ ಪುಟ ನೋಡಿ

'ಗೃಹ ಜ್ಯೋತಿ'ಯ ಪೂರ್ಣ ಲಾಭ ಏಕಿಲ್ಲ?

1 ಪ್ರತಿಯೊಂದು ಮನೆಗೆ ನೀಡಿರುವ ಆರ್ ಆರ್ ಸಂಖ್ಯೆಯಲ್ಲಿ ಒಂದು ವರ್ಷದ ಅವಧಿಯಲ್ಲಿ ಎಷ್ಟು ಯೂನಿಟ್ ವಿದ್ಯುತ್ ಬಳಕೆ ಆಗಿದೆ ಎಂಬುದರ ಸರಾಸರಿ ಲೆಕ್ಕ ಹಾಕಿ 'ಗೃಹ ಜ್ಯೋತಿ' ಫಲಾನುಭವಿಯ ಉಚಿತ ಯೂನಿಟ್ ಎಷ್ಟು ಎಂದು ನಿರ್ಧರಿಸಲಾಗಿದೆ.

2 ಹೀಗೆ ಸರಾಸರಿ ನಿಗದಿ ಮಾಡಿ ಒಂದೂವರೆ ವರ್ಷ ಕಳೆದಿದೆ. ಹೊಸ ಮನೆ ಕಟ್ಟಿದವರು ಒಂದು ವರ್ಷವಾದ ಬಳಿಕ, ಉಚಿತ ವಿದ್ಯುತ್‌ನ ಪೂರ್ಣ ಲಾಭ ಪಡೆಯಲು ಅರ್ಜಿ ಸಲ್ಲಿಸಿದರೆ ಆ ಹಿಂದಿನ ಒಂದು ವರ್ಷದ ಬಳಕೆಯ ಪ್ರಮಾಣ ಆಧರಿಸಿ, ಉಚಿತ ವಿದ್ಯುತ್‌ನ ಅರ್ಹತಾ ಯೂನಿಟ್‌ನ ಪ್ರಮಾಣ ನಿಗದಿ ಮಾಡಬೇಕಾಗಿತ್ತು. ಅದಕ್ಕೂ ಸರ್ಕಾರ ಅವಕಾಶ ಕೊಟ್ಟಿಲ್ಲ.

3 ಯೋಜನೆ ಜಾರಿಯಾದ ಬಳಿಕ, ಹೊಸ ಮನೆ ನಿರ್ಮಿಸಿದ-ವರಿಗೆ 58 ಯೂನಿಟ್ ಉಚಿತವಾಗಿ ಸಿಗುತ್ತಿದೆ. ಗ್ರಾಹಕರು ತಿಂಗಳಿಗೆ 135– 199 ಯೂನಿಟ್ ಬಳಸಿದರೆ ವರ್ಷದ ಬಳಕೆಯ ಸರಾಸರಿ ಆಧರಿಸಿ, ಉಚಿತ ವಿದ್ಯುತ್‌ನ ಯೂನಿಟ್ ಪ್ರಮಾಣವನ್ನು ಹೆಚ್ಚಿಸಬೇಕಿತ್ತು. ಅದನ್ನು ಸರ್ಕಾರ ಮಾಡದೇ ಇರುವುದರಿಂದ 58 ಯೂನಿಟ್‌ಗಿಂತ ಮೇಲಿನ ಬಳಕೆಗೆ ಶುಲ್ಕ ಪಾವತಿಸಬೇಕಾಗಿದೆ. ಇದರಿಂದಾಗಿ, ಉಚಿತ ಸೌಲಭ್ಯ ಎಲ್ಲರಿಗೂ ಸಿಗುತ್ತಿಲ್ಲ.

4 ಯೋಜನೆ ಜಾರಿಯಾದಾಗ ಬಾಡಿಗೆ ಮನೆಯಲ್ಲಿದ್ದ ಗ್ರಾಹಕ, 98 ಯೂನಿಟ್ ಬಳಸುತ್ತಿದ್ದು, ಅದಕ್ಕೆ ಬಿಲ್ ಬರುತ್ತಿರಲಿಲ್ಲ. ಆ ಮನೆಗೆ ಹೊಸತಾಗಿ ಹೋದ ಬಾಡಿಗೆದಾರರು 150 ಯೂನಿಟ್ ಬಳಸಿದರೆ ಅವರಿಗೆ ಉಚಿತದ ಪೂರ್ಣ ಲಾಭ ಸಿಗುತ್ತಿಲ್ಲ. 98 ಯೂನಿಟ್ ಉಚಿತ ವಾಗಿದ್ದರೆ, 52 ಯೂನಿಟ್‌ಗೆ ಪಾವತಿ ಮಾಡಬೇಕಾಗಿದೆ. ಈ ಮನೆಗೆ ಸರಾಸರಿಯನ್ನು 2022–23ರಲ್ಲಿ ನಿಗದಿ ಮಾಡಿದ್ದೇ ಸಮಸ್ಯೆಯಾಗಿದೆ.

1.58 ಕೋಟಿ 'ಗೃಹಜ್ಯೋತಿ' ಬಳಕೆದಾರರು

5 ಹಿಂದೆ ಇದ್ದ ಬಾಡಿಗೆದಾರನೊಬ್ಬ ತಿಂಗಳಿಗೆ 250 ಯೂನಿಟ್ ಬಳಸುತ್ತಿದ್ದರೆ, ಅದೇ ಮನೆಗೆ ಹೋದ ಹೊಸ ಬಾಡಿಗೆದಾರ ಕೇವಲ 150 ಯೂನಿಟ್ ಬಳಸಿದರೂ ಆತನಿಗೆ 'ಗೃಹ ಜ್ಯೋತಿ'ಯ ಲಾಭ ಸಿಗುತ್ತಿಲ್ಲ. ಆ ಮನೆಯ ಆರ್‌ಆರ್ ನಂಬರ್‌ನಲ್ಲಿ 2022-23ರ ಆರ್ಥಿಕ ವರ್ಷದಲ್ಲಿ ಪ್ರತಿ ತಿಂಗಳು ಎಷ್ಟು ಯೂನಿಟ್ ಖರ್ಚಾಗಿತ್ತು ಎಂಬ ಆಧಾರದಲ್ಲೇ ಸರಾಸರಿ ನಿಗದಿ ಮಾಡಲಾಗಿದೆ.

6 2023-24ರಲ್ಲಿ ಬಳಕೆಯಾದ ಯೂನಿಟ್‌ಗಳ ಸರಾಸರಿ ಲೆಕ್ಕ 2025-26ರಲ್ಲಿ ಪರಿಷ್ಕರಣೆ ಆದರಷ್ಟೇ, 200 ಯೂನಿಟ್‌ನೊಳಗೆ ಬಳಸುವ ಎಲ್ಲರಿಗೂ ಯೋಜನೆಯ ಪೂರ್ಣ ಲಾಭ ಸಿಗಲಿದೆ.

ಪ್ರತಿಕ್ರಿಯೆಗೆ ಸಿಗದ ಸಚಿವ, ಎಸಿಎಸ್

ಗೃಹ ಜ್ಯೋತಿ ಯೋಜನೆ ಫಲ ಎಲ್ಲರಿಗೂ ಪೂರ್ಣ ಪ್ರಮಾಣದಲ್ಲಿ ಸಿಗದೇ ಇರುವುದರ ಬಗ್ಗೆ ಪ್ರತಿಕ್ರಿಯೆ ಪಡೆಯಲು ಇಂಧನ ಸಚಿವ ಕೆ.ಜೆ. ಜಾರ್ಜ್ ಹಾಗೂ ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ಅವರನ್ನು ಸಂಪರ್ಕಿಸಲು ಯತ್ನಿಸಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಹಿಮಕುಸಿತದಲ್ಲಿ ಸಿಲುಕಿರುವ ಕಾರ್ಮಿಕರ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಸಿಬ್ಬಂದಿ —ಪಿಟಿಐ ಚಿತ್ರ

ಉತ್ತರಾಖಂಡ: ಐವರಿಗಾಗಿ ಮುಂದುವರಿದ ಶೋಧ

ಹಿಮಕುಸಿತ: ನಾಲ್ವರು ಮೃತ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಚಮೋಲಿ ಜಿಲ್ಲೆಯ ಮಾಣಾ ಗ್ರಾಮದಲ್ಲಿ ಹಿಮಕುಸಿತ ಉಂಟಾದ ಸ್ಥಳದಲ್ಲಿ ಸಿಲುಕಿದ್ದ ಕಾರ್ಮಿಕರ ಪೈಕಿ 50 ಜನರನ್ನು ಹೊರಕ್ಕೆ ಕರೆತರಲಾಗಿದ್ದು, ಅವರಲ್ಲಿ ನಾಲ್ಕು ಮಂದಿ ಶನಿವಾರ ಮೃತಪಟ್ಟಿದ್ದಾರೆ. ಇನ್ನುಳಿದ 5 ಮಂದಿಯನ್ನು ರಕ್ಷಿಸಲು ಸಮರೋಪಾದಿಯಲ್ಲಿ ಕಾರ್ಯಾಚರಣೆ ನಡೆದಿದೆ.

ಮುಖ್ಯಾಂಶಗಳು
- ಮಾಣಾ, ಬದರೀನಾಥದ ನಡುವೆ ಇರುವ ಬಿಆರ್‌ಒ ಶಿಬಿರದಲ್ಲಿ ಹಿಮಕುಸಿತ
- ರಕ್ಷಣಾ ಕಾರ್ಯಕ್ಕೆ ಮಳೆಯಿಂದ ತೀವ್ರ ಅಡ್ಡಿ

ಮಾಣಾ ಮತ್ತು ಬದರೀನಾಥದ ನಡುವೆ ಇರುವ ಗಡಿ ರಸ್ತೆಗಳ ಸಂಸ್ಥೆಯ (ಬಿಆರ್‌ಒ) ಶಿಬಿರದಲ್ಲಿ ಶುಕ್ರವಾರ ಮುಂಜಾನೆ ಹಿಮಕುಸಿತ ಉಂಟಾಯಿತು. ಶಿಬಿರದಲ್ಲಿದ್ದ ಕಂಟೇನರ್‌ಗಳು ಹಾಗೂ ಶೆಡ್ ಒಂದರಲ್ಲಿ ಒಟ್ಟು 55 ಮಂದಿ ಸಿಲುಕಿದ್ದರು.

ಮಳೆ ಮತ್ತು ಹಿಮಪಾತದ ಕಾರಣದಿಂದಾಗಿ ಶುಕ್ರವಾರ ರಕ್ಷಣಾ ಕಾರ್ಯಕ್ಕೆ ಅಡ್ಡಿ ಉಂಟಾಗಿತ್ತು. ಶನಿವಾರ ಬೆಳಿಗ್ಗೆ ಹವಾಮಾನವು ಅನುಕೂಲಕರವಾದ ಕಾರಣ ಸೇನಾ ಸಿಬ್ಬಂದಿ ಮತ್ತು ಇಂಡೊ–ಟಿಬೆಟನ್ ಗಡಿ ಪೊಲೀಸ್ ಸಿಬ್ಬಂದಿ ರಕ್ಷಣಾ ಕಾರ್ಯವನ್ನು ಮತ್ತೆ ಆರಂಭಿಸಿದರು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ಎನ್.ಕೆ. ಜೋಷಿ ತಿಳಿಸಿದ್ದಾರೆ.

ರಕ್ಷಣಾ ಕಾರ್ಯದಲ್ಲಿ ಆರು ಹೆಲಿಕಾಪ್ಟರ್‌ಗಳನ್ನು ಬಳಸಿಕೊಳ್ಳಲಾಗಿದೆ ಎಂದು ಸೇನೆಯ ವಕ್ತಾರರು ತಿಳಿಸಿದ್ದಾರೆ. ಗಾಯಗೊಂಡವರ ಪೈಕಿ ಇಬ್ಬರು ಕಾರ್ಮಿಕರನ್ನು ಹೆಚ್ಚಿನ ಚಿಕಿತ್ಸೆಗಾಗಿ ಏಮ್ಸ್–ರಿಷಿಕೇಶಕ್ಕೆ ಕರೆದೊಯ್ಯಲಾಗಿದೆ ಎಂದು ಗೊತ್ತಾಗಿದೆ.

ರಕ್ಷಣಾ ಕಾರ್ಯಾಚರಣೆಯ ಉಸ್ತುವಾರಿಗಾಗಿ ಸೇನೆಯ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದಾರೆ.

ಬಿಆರ್‌ಒ ಶಿಬಿರದಲ್ಲಿ ಎಂಟು ಕಂಟೇನರ್‌ಗಳು ಇದ್ದವು. ಆ ಪೈಕಿ ಐದು ಕಂಟೇನರ್‌ಗಳು ಪತ್ತೆಯಾಗಿವೆ, ಮೂರು ಕಂಟೇನರ್‌ಗಳು ನಾಪತ್ತೆಯಾಗಿವೆ. ರಕ್ಷಿಸಲಾಗಿರುವ ಕಾರ್ಮಿಕರ ಪೈಕಿ ಹೆಚ್ಚಿನವರು ಈ ಐದು ಕಂಟೇನರ್‌ಗಳಲ್ಲಿ ಇದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಬದರೀನಾಥದಿಂದ ಮೂರು ಕಿ.ಮೀ. ದೂರದಲ್ಲಿ ಇರುವ ಮಾಣಾ ಗ್ರಾಮವು ಭಾರತ–ಟಿಬೆಟ್ ಗಡಿಯಲ್ಲಿನ ಕೊನೆಯ ಗ್ರಾಮ.

ಹಿಮಕುಸಿತ ಉಂಟಾಗಿರುವ ಸ್ಥಳದ ವೈಮಾನಿಕ ಸಮೀಕ್ಷೆ ನಡೆಸಿರುವ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ರಕ್ಷಣಾ ಕಾರ್ಯಾಚರಣೆಯನ್ನು ಚುರುಕುಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಧಾಮಿ ಅವರ ಜೊತೆ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಎಲ್ಲ ರೀತಿಯ ನೆರವು ಒದಗಿಸುವುದಾಗಿ ಭರವಸೆ ನೀಡಿದ್ದಾರೆ.

ಅಮೆರಿಕ– ಉಕ್ರೇನ್ ಅಧ್ಯಕ್ಷರ 'ಸಮರ'

ವಾಷಿಂಗ್ಟನ್ (ಎ.ಪಿ): ಜಗತ್ತಿನ ಪ್ರಭಾವಿ ರಾಷ್ಟ್ರ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಯುದ್ಧದಿಂದ ನಲುಗಿರುವ ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ನಡುವೆ ಶುಕ್ರವಾರ ನಡೆದ ಚರ್ಚೆ, ವಾಕ್ಸಮರಕ್ಕೆ ತಿರುಗಿತು. ಉಕ್ರೇನ್–ರಷ್ಯಾ ಯುದ್ಧ ಮತ್ತು ಅಮೆರಿಕವು ಉಕ್ರೇನ್ ಮೇಲೆ ಹೊಂದಿರುವ ಪ್ರಭಾವದ ಹಿನ್ನೆಲೆಯಲ್ಲಿ ಈ ಭೇಟಿಯು ಮಹತ್ವದ್ದಾಗಿತ್ತು. ಉಭಯ ನಾಯಕರು 45 ನಿಮಿಷ ಚರ್ಚೆ ನಡೆಸಿದರು. ಈ ಪೈಕಿ 10 ನಿಮಿಷ ವಾಕ್ಸಮರ ನಡೆದು, ಚರ್ಚೆ ಅಕ್ಷರಶಃ ಜಗಳದ ಸ್ವರೂಪ ತಳೆಯಿತು. ಉಭಯ ದೇಶಗಳ ರಾಜತಾಂತ್ರಿಕ ಸಿಬ್ಬಂದಿ ಹಾಗೂ ಮಾಧ್ಯಮದ ಎದುರೇ ಬಿಸಿ ಬಿಸಿ ವಾಗ್ವಾದ ನಡೆಯಿತು. ಈ ಚರ್ಚೆಗೆ ಸಂಬಂಧಿಸಿದಂತೆ ಶ್ವೇತಭವನವು ಟ್ರಂಪ್ ಅವರ ಬೆನ್ನಿಗೆ ನಿಂತರೆ, ಯುರೋಪಿಯನ್ ಸ್ನೇಹಕೂಟದ ರಾಷ್ಟ್ರಗಳು ಝೆಲೆನ್‌ಸ್ಕಿ ಅವರ ಪರ ದನಿ ಎತ್ತಿದವು.

ವಿವರ 12

ಮಾತುಕತೆ ಮೊಟಕುಗೊಂಡ ಬೆನ್ನ ಹಿಂದೆಯೇ ರಷ್ಯಾ, ಉಕ್ರೇನ್ ಮೇಲಿನ ದಾಳಿಯನ್ನು ತೀವ್ರಗೊಳಿಸಿದೆ

ಝೆಲೆನ್‌ಸ್ಕಿ ಹೇಳಿದ್ದು
- ಯುದ್ಧದ ಸಂದರ್ಭಗಳಲ್ಲೂ ನಿಯಮಗಳು ಇರುತ್ತವೆ. ಯುದ್ಧಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ರಷ್ಯಾ ಉಲ್ಲಂಘಿಸಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಯೋತ್ಪಾದಕ. ಕೊಲೆಗಡುಕನ ಜತೆ ರಾಜಿಯಾಗಬಾರದು
- ಉಕ್ರೇನ್‌ನ ಪ್ರಾಕೃತಿಕ ಸಂಪನ್ಮೂಲಗಳ ಬಳಕೆ ಒಪ್ಪಂದಕ್ಕೆ ಪ್ರತಿಯಾಗಿ ರಷ್ಯಾದ ಅತಿಕ್ರಮಣ ವಿರುದ್ಧ ಉಕ್ರೇನ್‌ಗೆ ಭದ್ರತೆಗೆ ಸ್ಪಷ್ಟ ಭರವಸೆ ನೀಡಬೇಕು

ಟ್ರಂಪ್ ಹೇಳಿದ್ದು
- ನೀವು (ಝೆಲೆನ್‌ಸ್ಕಿ) ಲಕ್ಷಾಂತರ ಜನರ ಜೀವನದ ಜತೆ ಹಾಗೂ 3ನೇ ಜಾಗತಿಕ ಸಮರಕ್ಕೆ ಆಸ್ಪದವಾಗುವಂತೆ ಆಟವಾಡುತ್ತಿದ್ದೀರಿ. ಈ ನಡೆ ನಿಮ್ಮ ದೇಶ ಹಾಗೂ ನಿಮಗೆ ಬೆಂಬಲಿಸಿದ್ದ ಅಮೆರಿಕಕ್ಕೆ ತೋರುತ್ತಿರುವ ಅಗೌರವವಾಗಿದೆ
- ನಿಮ್ಮ ನಡೆಯು ಕೃತಜ್ಞತಾ ಪೂರಕವಾಗಿಲ್ಲ. ಒಮ್ಮೆ ಒಪ್ಪಂದ ಆದ ಬಳಿಕ ಯುದ್ಧ, ಅತಿಕ್ರಮಣದ ಸಾಧ್ಯತೆಗಳು ಇಲ್ಲ. ನಿಮಗೆ ನ್ಯಾಯಯುತ ಅನ್ನಿಸುವ ಪ್ರಸ್ತಾಪಗಳಿವೆ. ಅದು, ಅಮೆರಿಕ ನೀಡಲಿರುವ ಅತಿ ದೊಡ್ಡ ಭರವಸೆ



ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಬಳಕೆ: ತನಿಖೆಗೆ ನಿರ್ದೇಶನ

ನವದೆಹಲಿ (ಪಿಟಿಐ): ಕರ್ನಾಟಕದ ಕೆಲವು ಹೋಟೆಲ್‌ಗಳಲ್ಲಿ ಇಡ್ಲಿ ಬೇಯಿಸಲು ಪ್ಲಾಸ್ಟಿಕ್ ಹಾಳೆಗಳನ್ನು ಬಳಸಲಾಗುತ್ತಿದೆ ಎಂಬ ವರದಿಗಳ ಬಗ್ಗೆ ತನಿಖೆ ನಡೆಸುವಂತೆ ಭಾರತದ ಆಹಾರ ಸುರಕ್ಷತೆ ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ), ಕರ್ನಾಟಕ ಆಹಾರ ಸುರಕ್ಷತೆ ಇಲಾಖೆಗೆ ನಿರ್ದೇಶಿಸಿದೆ.

'ರಾಜ್ಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯು ಈ ವಿಷಯದ ಬಗ್ಗೆ ತಕ್ಷಣವೇ ಗಮನಹರಿಸುವಂತೆ ಮತ್ತು ಆಹಾರ ತಯಾರಿಕೆಯಲ್ಲಿ ಪ್ಲಾಸ್ಟಿಕ್ ಬಳಸುತ್ತಿರುವ ಹೋಟೆಲ್‌ಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ' ಎಂದು ಎಫ್‌ಎಸ್‌ಎಸ್‌ಎಐ ಪ್ರಕಟಣೆ ತಿಳಿಸಿದೆ.

13ನೇ ಪುಟ ನೋಡಿ

ಬಳ್ಳಾರಿ: 8,000 ಕೋಳಿ ಸಾವು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿ ಹೊರ ವಲಯದ ಕಪ್ಪಗಲ್ಲು ಗ್ರಾಮದ ಕೋಳಿ ಫಾರಂವೊಂದರಲ್ಲಿ ವಾರದಿಂದ ಈಚೆಗೆ 8 ಸಾವಿರ ಕೋಳಿಗಳು ಸಾವಿಗೀಡಾಗಿದ್ದು, ಹಕ್ಕಿ ಜ್ವರ ಕಾರಣವಾಗಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಹಕ್ಕಿ ಜ್ವರ ಶಂಕೆ

'ರವಿ ಎಂಬುವರಿಗೆ ಸೇರಿದ ಕೋಳಿ ಫಾರಂನಲ್ಲಿ ಮೊದಲು 15 ಸಾವಿರ ಕೋಳಿಗಳಿದ್ದವು. ಈವರೆಗೆ 8 ಸಾವಿರ ಕೋಳಿಗಳು ಮೃತಪಟ್ಟಿವೆ. ಸದ್ಯ 7 ಸಾವಿರ ಕೋಳಿಗಳು ಮಾತ್ರವೇ ಉಳಿದಿವೆ. ಇನ್ನೂ, ಹೆಚ್ಚಿನ ಪ್ರಮಾಣದಲ್ಲಿ ಕೋಳಿಗಳು ಸಾಯುವ ಸಾಧ್ಯತೆಗಳಿವೆ' ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಮೃತ ಕೋಳಿಗಳ ಮಾದರಿಗಳನ್ನು ಬೆಂಗಳೂರಿಗೆ ಕಳುಹಿಸಲಾಗಿದೆ. ಅದನ್ನು ಭೋಪಾಲ್‌ನಲ್ಲಿರುವ 'ರಾಷ್ಟ್ರೀಯ ಉನ್ನತ ಭದ್ರತಾ ಪ್ರಾಣಿ ರೋಗಗಳ ಸಂಸ್ಥೆ'ಗೆ ರವಾನಿಸಿ ಪರೀಕ್ಷೆ ಮಾಡಿಸಲಾಗುತ್ತದೆ. ಸೋಮವಾರದ ವೇಳೆಗೆ ಪರೀಕ್ಷಾ ವರದಿ ಬರಬಹುದು. ಹಕ್ಕಿ ಜ್ವರ ಇರುವುದು ದೃಢಪಟ್ಟರೆ, ಉಳಿದ ಕೋಳಿಗಳನ್ನೂ ವಧೆ ಮಾಡಲಾಗುವುದು' ಎಂದು ಇಲಾಖೆಯ ಉಪನಿರ್ದೇಶಕ ಡಾ. ಕಾರಬಾರಿ 'ಪ್ರಜಾವಾಣಿ'ಗೆ ತಿಳಿಸಿದರು.

13ನೇ ಪುಟ ನೋಡಿ

ಖಾಸಗಿ ಕಾಲೇಜು ಪ್ರಾಚಾರ್ಯ ಆರೋಗ್ಯ ವಿ.ವಿ.ಯ ಕುಲಪತಿ

ಪ್ರಜಾವಾಣಿ ವಾರ್ತೆ

ಡಾ.ಭಗವಾನ್ ಬಿ.ಸಿ.

ಬೆಂಗಳೂರು: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯಾಗಿ ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಕಿಮ್ಸ್) ಪ್ರಾಂಶುಪಾಲ ಡಾ.ಭಗವಾನ್ ಬಿ.ಸಿ. ಅವರನ್ನು ನೇಮಕ ಮಾಡಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ.

ಆರೋಗ್ಯ ವಿಶ್ವವಿದ್ಯಾಲಯ ಸ್ಥಾಪನೆ-ಯಾದಾಗಿನಿಂದ ಇಲ್ಲಿಯವರೆಗೆ, ಸರ್ಕಾರಿ ವೈದ್ಯ ಕಾಲೇಜು ಅಥವಾ ಸರ್ಕಾರಿ ಕರ್ತವ್ಯದಲ್ಲಿರುವ ವೈದ್ಯರನ್ನೇ ಈ ಹುದ್ದೆಗೆ ನೇಮಕ ಮಾಡಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಖಾಸಗಿ ಕಾಲೇಜಿನ ವೈದ್ಯರೊಬ್ಬರನ್ನು ಕುಲಪತಿಯನ್ನಾಗಿ ನೇಮಕ ಮಾಡಲಾಗಿದೆ.

'ಕುಲಪತಿ ಆಯ್ಕೆ ಸಂಬಂಧ ರಚಿಸಲಾಗಿದ್ದ ಪ್ರೊ. ಎಂ. ರಾಮಚಂದ್ರಗೌಡ ಅಧ್ಯಕ್ಷತೆಯ ಶೋಧನಾ ಸಮಿತಿಯು ಹಾಸನ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ.ರವಿಕುಮಾರ್ ಬಿ.ಸಿ ಹಾಗೂ ಬೆಂಗಳೂರಿನ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕಿ ಡಾ. ನಳಿನಿ ಜಿ.ಕೆ. ಹಾಗೂ ಭಗವಾನ್ ಹೆಸರನ್ನು ಶಿಫಾರಸು ಮಾಡಿತ್ತು.

ರಾಜ್ಯ ಸರ್ಕಾರ ಮತ್ತು ಆರೋಗ್ಯ ಇಲಾಖೆಯಲ್ಲಿ ಭಾರಿ ಪ್ರಭಾವ ಹೊಂದಿರುವ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರೊಬ್ಬರ ಒತ್ತಡದ ಮೇರೆಗೆ ಭಗವಾನ್ ಅವರ ನೇಮಕ ನಡೆದಿದೆ ಎಂದು ಹೇಳಲಾಗುತ್ತಿದೆ.

ಒಳ ಪುಟಗಳು
ಪಾಸ್‌ಪೋರ್ಟ್: ಜನನ ಪ್ರಮಾಣಪತ್ರವೇ ಆಧಾರ 13
ಚಿತ್ರನಗರಿಗೆ 150 ಎಕರೆ ಭೂಮಿ: ಸಿ.ಎಂ 7
ತಾಕತ್ತಿದ್ದರೆ ಡಿಕೆಶಿ ಸಸ್ಪೆಂಡ್ ಮಾಡಿ: ಅಶೋಕ 6

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಒಳನೋಟ

ಮುಕ್ಕಾದ ಇತಿಹಾಸದ ಕೊಂಡಿ 4



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Banashankari

BDA SITE for SALE/ Joint Venture
@ BSK 6th Stage 4th Block, 'B' Block FE. 50x80 South Facing. Brokers Excuse.
-:Contact: -
9483696801

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 6TH Stage 9th Block 50x80 Commercial Site Sale, North, 100 Feet Road, 9972720488/ 9880448478.

BANASHANKARI 6TH Stage,3000 Sqft, Semi - Commercial N/E Corner 60' Road/9th Block 40x60,10th Block 30x40 :9663393533

Anjanapura

SITE FOR Sale 20X30 North Facing 30 Feet Road at Anjanapura 2nd Block Contact:98450 73796

SITE FOR Sale 30X40 at Anjanapura 11th Block North Facing 40 Feet Road Contact:98450 73796

Bannerghatta Road

BANNERGHATTA ROAD North facing Residential 40x40 E-Katha BBMP near Hulimavu metro station 1,76,00000/-, Jeevitha-9739995042

MORE Classifieds IN MAIN ISSUE

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 96322-37557/ 96065-47557

Basavanagudi

30X48 CORNER, Residential/ Semi-commercial property for sale at N.R.Colony Basavanagudi, Bangalore. Call:9980747256

Chandapura

SALE SITES 'E' Khatha @ Attibelle Near Toll 30x40 Rs 54,00,000/-. Chandapura 30x40 Rs.43,50,000/- Call:7892531744

HBR Layout

FOR SALE HBR BDA SITE CLASS 1, LOCATION NORTH FACING 50,X80, GENUINE BUYERS CONTACT:- 9972999925

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Jayanagar

JAYANAGAR 1ST Blk Facing Madhavan Park 4596sqft`Site Excellent Location BDA_Property Clear Titles Call_For_Price 8897683059 9845302589.

J P Nagar

J.P.NAGAR_1ST Phase Off_Kanakapura Road, Navodaya Layout 40x51 Corner E-Katha, near Metro Station, 3,57,00000/-, Jeevitha-9739995042

Kanakapura Road

"SITES FOR-SALE 60x40, Premium plots ₹12500/-P.sft slightly_negotiable @_Vakil_Garden. Call:_7022022065"

BANASHANKARI ANJANAPURA BDA Sites Sale. 3,900 Sqft Site Sale Jayanagar Housing Layout 7,000/- Call-9740150364 /8884707773

Kempegowda Layout

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact: Kumar 9945119449

SALE 50X80 Kempegowda Layout, 7th J sector, 80 ft road, North, 8500/- Psqft negotiable. 9731151366.

Mallathalli

SALE, RAILWAY layout 1st-stage Mallathahalli 40*60 west facing 60ft road near Vidyaniketan early years. 9591805278

SITE ULLAL road, near SVK Choultry Mallathahalli 30*40 (SF) Ring road commercial Backsite Owner- 9591805278

Rajajinagar

SALE 15X35, West facing, Rajajinagar 2nd stage A block, Good location, Near Orion mall. 9845527196.

Malleshwaram

WANTED 30X50/ 40X60 Site In Malleshwaram Vyalikaval Kumarapark/ Palace Road/ Vasanthnagar/ Jayamahal, Site Owners-Please Call:9900001973

Nagarabhavi

NAGARBHAVI 40X61 Site for Sale South facing NGEF Layout(BDA appvd) Nagarbhavi Call 8660065216

30X45 SITE For Sale.East Facing.NGEF Layout Nagarabhavi 2nd stage.18,500 per sft Non-Negotiable.Call:7022662105

Outskirts

FOR SALE Nandi hills Road 2.05 acre in Nandi hills Road, 200 meter from 60 Ft. Road, Contact: 9964485388

ಮಾ. 9ಕ್ಕೆ ವಧು–ವರರ ಸಮಾವೇಶ

ಬೆಂಗಳೂರು: ಶ್ರೀನಿವಾಸ ಬಲಿಜ ಸಂಘ, ಐಟಿಐ ವತಿಯಿಂದ 18ನೇ ವಧು–ವರರ ಸಮಾವೇಶ, ಸಂಘದ 45ನೇ ವಾರ್ಷಿಕೋತ್ಸವವನ್ನು ಮಾರ್ಚ್ 9ರಂದು 9 ಗಂಟೆಗೆ ಪುರಭವನದಲ್ಲಿ ಆಯೋಜಿಸಲಾಗಿದೆ. ಶ್ರೀನಿವಾಸ ಬಲಿಜ ಸಂಘ ವಧು–ವರಾನ್ವೇಷಣ ಕೇಂದ್ರ, ಎರಡನೇ ಮಹಡಿ, ಮಹಾಲಕ್ಷ್ಮೀ ಕಾಂಪ್ಲೆಕ್ಸ್, ಉಮಾ ಚಿತ್ರ ಮಂದಿರ. ಇಲ್ಲಿ ನೋಂದಣಿ ಮಾಡಿಕೊಳ್ಳಬಹುದು ಎಂದು ಸಂಘದ ಅಧ್ಯಕ್ಷ ಡಿ.ತುಳಸೀದಾಸ್ ತಿಳಿಸಿದ್ದಾರೆ. ಮಾಹಿತಿಗೆ: 9886403409, 9243120511 ಸಂಪರ್ಕಿಸಬಹುದು.

ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ ವತಿಯಿಂದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಓದುತ್ತಿರುವ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು

ಕರ್ನಾಟಕ ರಾಜ್ಯದ್ಯಾಂತ ಇರುವ ಯಾವುದೇ ವೈದ್ಯಕೀಯ / ದಂತ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸರ್ಕಾರಿ ಕೋಟಾದಲ್ಲಿ ಪ್ರವೇಶ ಪಡೆದಿರುವ, ಆರ್ಥಿಕವಾಗಿ ಹಿಂದುಳಿದಿರುವ ಸಾಧು ಲಿಂಗಾಯತ ಸಮಾಜದ ವಿದ್ಯಾರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು ಹೆಚ್ಚಿನ ಮಾಹಿತಿಗಾಗಿ ಈ ಕೆಳಕಂಡ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9481182711 / 9242443909

ಅರ್ಜಿ ನಮೂನೆಯನ್ನು ಮತ್ತು ಅರ್ಜಿ ಸಲ್ಲಿಸಲು ಸಂಬಂಧ ಪಟ್ಟ ನಿಬಂಧನೆಗಳನ್ನು ಈ ಕೆಳಕಂಡ ವೆಬ್ ಸೈಟ್‌ನಲ್ಲಿ ಡೌನ್ಲೋಡ್ ಮಾಡಿಕೊಂಡು ಆನ್‌ಲೈನ್‌ನಲ್ಲಿಯೂ ಅರ್ಜಿ ಸಲ್ಲಿಸಬಹುದಾಗಿದೆ.

ವೆಬ್‌ಸೈಟ್ ವಿಳಾಸ: mbpt.org

email: sharanamaganurbasappaprati@gmail.com

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 15-03-2025

ಅಧ್ಯಕ್ಷರು :

ಶರಣ ಎಂ.ಬಿ. ಸಂಗಮೇಶ್ವರ ಗೌಡರು

ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನ (ರಿ), ದಾವಣಗೆರೆ.

Centenary Celebrated Sharnbasveshwar Vidya Vardhak Sangha's

SHARNBASVESHWAR

Residential Public School, Montessori Nursery, I to X and Composite P.U. College Kalaburagi

WANTED

1) Experienced Montessori-trained and Nursery-trained fluent English speaking teachers
2) Experienced trained Graduate Primary Teachers
3) Experienced trained Graduate Post-graduate Teachers for High School
4) Experienced Post-graduate Lecturers to teach P.U. Classes for Physics Chemistry, Biology and Maths. Also, expert and motivational Lecturers to prepare students for NEET, IIT, JEE and KCET exams

Salary for Montessori and Nursery Teachers	: 15-25K
Salary for Primary Teachers	: 20-30K
Salary for High School Teachers	: 25-40K
Salary for P.U. Lecturers	: 30-50K
Salary for NEET, IIT, JEE and KCET Lecturers	: 50-80K

Salary negotiable for the deserving candidates

Hostel Facility for Single Teachers. TO and FRO charges will be given

Apply and Send in your Resume by email before 7th March 2025 to sbrpucollege.glb2004@gmail.com sbrs_glb2004@yahoo.co.in

Contact Nos : 9901455232, 9986131542, 9845891829

Vidya Bhandari Pooya Dr. Sharnbaswappa Appaji
8th Mahadasoha Peethadhipati, Sharnbasveshwar Samsthan, Kalaburagi
President, Sharnbasveshwar Vidya Vardhak Sangha, Kalaburagi
& Chancellor, Sharnbasva University, Kalaburagi

‘ಸಂಯುಕ್ತ ಹೋರಾಟ – ಕರ್ನಾಟಕ’ ಮುಖಂಡರ ಆಗ್ರಹ

‘ಜನವಿರೋಧಿ ಕಾಯ್ದೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ತಂದಿದ್ದ ಜನವಿರೋಧಿ ಕಾಯ್ದೆಗಳನ್ನು ರದ್ದು ಮಾಡಬೇಕು. ಜನಪರ ನೀತಿಗಳನ್ನು ರೂಪಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತಿನಲ್ಲಿ ಜನಪರವಾಗಿರುವ ಬದಲು ಕೃತಿಯಲ್ಲಿ ತೋರಿಸಬೇಕು. ಈ ಬಾರಿಯ ಬಜೆಟ್‌ನಲ್ಲಿ ಅದು ಪ್ರತಿಫಲಿಸಬೇಕು ಎಂದು ಸಂಯುಕ್ತ ಹೋರಾಟ – ಕರ್ನಾಟಕದ ಮುಖಂಡ ಬಡಗಲಪುರ ನಾಗೇಂದ್ರ ಆಗ್ರಹಿಸಿದರು.

ಸಂಯುಕ್ತ ಹೋರಾಟ – ಕರ್ನಾಟಕ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ‘ಹಿಂದಿನ ಬಿಜೆಪಿ ಸರ್ಕಾರ ಮಾಡಿದ್ದ ಭೂಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ, ಜಾನುವಾರು ತಿದ್ದುಪಡಿ ಕಾಯ್ದೆಗಳನ್ನು ರದ್ದುಗೊಳಿಸುವುದಾಗಿ ಕಾಂಗ್ರೆಸ್ ಹೇಳಿದ್ದರೂ ಮಾಡಿಲ್ಲ. ಇವುಗಳನ್ನು ಕೂಡಲೇ ರದ್ದುಗೊಳಿಸಬೇಕು. ಕೇಂದ್ರ ಸರ್ಕಾರವು ಜಾರಿ ಮಾಡಿರುವ ಕೃಷಿ ಮಾರುಕಟ್ಟೆ ಕುರಿತ ರಾಷ್ಟ್ರೀಯ ನೀತಿ ಚೌಕಟ್ಟಿನ ಕರಡನ್ನು ತಿರಸ್ಕರಿಸಬೇಕು’ ಎಂದು ಒತ್ತಾಯಿಸಿದರು.

‘ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡುವ ನೀತಿಯನ್ನು ಕೈಬಿಡಬೇಕು. ವಿದ್ಯುತ್ ಸಂಪರ್ಕದ ಆರ್ಥಿಕ ಹೊರೆಯನ್ನು ರೈತರು ಹಾಗೂ ಜನಸಾಮಾನ್ಯರ ಮೇಲೆ ಹೊರಿಸಬಾರದು. ಬಗರ್ ಹುಕುಂ ರೈತರ ಭೂಮಿಗಳನ್ನು ಮಂಜೂರು ಮಾಡಬೇಕು. ಕಾನೂನಿನ ತೊಡಕು ನಿವಾರಣೆ ಮಾಡಬೇಕು. ಅರ್ಜಿಗಳನ್ನು ತಿರಸ್ಕರಿಸಬಾರದು. ಒಕ್ಕಲೆಬ್ಬಿಸಬಾರದು’ ಎಂದು ಹೇಳಿದರು.

ಸಿಐಟಿಯು ಅಧ್ಯಕ್ಷೆ ಎಸ್. ವರಲಕ್ಷ್ಮೀ ಮಾತನಾಡಿ, ‘ದುಡಿಮೆಯ ಅವಧಿಯನ್ನು ದಿನಕ್ಕೆ 12 ಗಂಟೆಗೆ ಏರಿಸಿರುವ ಕಾರ್ಮಿಕ ವಿರೋಧಿ ತಿದ್ದುಪಡಿ ಕಾಯ್ದೆಯನ್ನು ರದ್ದು ಮಾಡಬೇಕು. ಗುತ್ತಿಗೆ ಪದ್ಧತಿ ರದ್ದು ಮಾಡಿ ಕಾಯಂಗೊಳಿಸಬೇಕು. ಕನಿಷ್ಠ ವೇತನವನ್ನು ₹36 ಸಾವಿರಕ್ಕೆ ಏರಿಸಬೇಕು. ಕೇಂದ್ರ ಸರ್ಕಾರ ಜಾರಿ ಮಾಡಲು ಹೊರಟಿರುವ ಕಾರ್ಮಿಕರ ಕುರಿತ ನಾಲ್ಕು ಕೋಡ್‌ಗಳನ್ನು ತಿರಸ್ಕರಿಸಬೇಕು’ ಎಂದು ಒತ್ತಾಯಿಸಿದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ಮಾತನಾಡಿ, ‘ಎಸ್‌ಸಿಎಸ್‌ಪಿ–ಟಿಎಸ್‌ಪಿ ನಿಧಿ ದುರುಪಯೋಗ ತಡೆಯಬೇಕು. ಗ್ಯಾರಂಟಿ ಯೋಜನೆ ಒಳಗೊಂಡಂತೆ ಬೇರೆ ಉದ್ದೇಶಗಳಿಗೆ ಬಳಸಬಾರದು. ಸಮುದಾಯದ ಯುವಜನರ ಉದ್ಯೋಗ ಸೃಷ್ಟಿ ಮತ್ತು ಶೈಕ್ಷಣಿಕ ನೆರವಿಗೆ ಮೀಸಲಿಡಬೇಕು’ ಎಂದು ತಿಳಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ದೇವಿ ಮಾತನಾಡಿ, ‘ಮೈಕ್ರೊ ಫೈನಾನ್ಸ್ ಕಂಪನಿಗಳ ಹಾವಳಿಯಿಂದ ಮಹಿಳೆಯರನ್ನು ಪಾರುಮಾಡಲು ಸಮಗ್ರ ನೀತಿ ರೂಪಿಸಬೇಕು. ಹೈಕೋರ್ಟ್ ನ್ಯಾಯಮೂರ್ತಿ ಅಧ್ಯಕ್ಷತೆಯಲ್ಲಿ ರೈತ ಋಣ ಆಯೋಗವನ್ನು ರಚಿಸಬೇಕು. ರಾಷ್ಟ್ರೀಯ ಬ್ಯಾಂಕುಗಳ ಮೂಲಕ ಸ್ವಸಹಾಯ ಸಂಘಗಳಿಗೆ ₹10 ಲಕ್ಷದವರೆಗೆ ದೀರ್ಘಕಾಲೀನ ಬಡ್ಡಿ ರಹಿತ ಸಾಲ ಒದಗಿಸಬೇಕು’ ಎಂದು ಆಗ್ರಹಿಸಿದರು.

ಸಂಯುಕ್ತ ಹೋರಾಟ ಕರ್ನಾಟಕದ ಎಚ್.ಎಸ್. ಸುನಂದಾ, ಚಂದ್ರಪ್ಪ ಹೊಸ್ಕೆರ, ಶಿವಪ್ಪ, ಎಚ್.ಪಿ. ಶಿವಪ್ರಕಾಶ್ ಉಪಸ್ಥಿತರಿದ್ದರು.

12,13ಕ್ಕೆ ಅಧಿವೇಶನ

ರಾಜ್ಯ ಸರ್ಕಾರದ ಬಜೆಟ್ ಬಗ್ಗೆ ವಿಶ್ಲೇಷಣೆ ನಡೆಸಲು ಸಂಯುಕ್ತ ಹೋರಾಟ ಕರ್ನಾಟಕದ ವತಿಯಿಂದ ಮಾರ್ಚ್ 12 ಮತ್ತು 13ರಂದು ಗಾಂಧಿಭವನದಲ್ಲಿ ‘ಜನಚಳವಳಿಗಳ ಬಜೆಟ್’ ಅಧಿವೇಶನ ಹಮ್ಮಿಕೊಳ್ಳಲಾಗಿದೆ. ಸರ್ಕಾರದ ಬಜೆಟ್ ಕುರಿತು ವಿವಿಧ ಕೋನಗಳಿಂದ ಚರ್ಚೆ ನಡೆಸಿ ಸಮಗ್ರ ನಿಲುವನ್ನು ತೆಗೆದುಕೊಂಡು ಮುಂದಿನ ಹೋರಾಟದ ಸ್ವರೂಪದ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಕರ್ನಾಟಕ ಜನಶಕ್ತಿಯ ನೂರ್ ಶ್ರೀಧರ್ ತಿಳಿಸಿದರು.

Inners for Winners

RAMRAJ VESTS BRIEFS • TRUNKS

ಎರಡನೇ ಚರ್ಮದಂತೆ ಭಾಸವಾಗುವ ಅನುಭವವನ್ನು ಪಡೆಯಿರಿ.

ಅತ್ಯಂತ ಆರಾಮದಾಯಕವಾದ ನವೋತ್ಸಾಹವು ನಿಮ್ಮೊಳಗೆ ಮೂಡುತ್ತದೆ. ರಾಮ್‌ರಾಜ್ ಒಳ ಉಡುಪುಗಳನ್ನು ಶೇಕಡಾ 100ರಷ್ಟು ಉತ್ತಮವಾದ ಹತ್ತಿಯಿಂದ ತಯಾರಿಸಲಾಗುತ್ತದೆ ಮತ್ತು ಚೆನ್ನಾಗಿ ಗಾಳಿಯಾಡುವ ಹಾಗೂ ಬೆವರನ್ನು ಹೀರಿಕೊಳ್ಳುವ ಇದರ ಲಕ್ಷಣದಿಂದ ನೀವು ಇದನ್ನು ಧರಿಸುವ ಎಲ್ಲಾ ಸಮಯಗಳಲ್ಲೂ ಅತ್ಯಂತ ತಂಪಾದ ಅನುಭವವನ್ನು ಪಡೆಯುವಿರಿ. ಒಳ ಉಡುಪುಗಳ ಹಬ್ಬವನ್ನು ಆಚರಿಸಿ, ಏಕೆಂದರೆ ಅದು ನಿಮಗಾಗಿಯೇ ತಯಾರಿಸಲಾಗಿದೆ ಎಂಬ ಭಾವವನ್ನು ನಿಮ್ಮೊಳಗೆ ಮೂಡಿಸುತ್ತದೆ.

STORE LOCATION

SUKRA | ROMEX | RISE-UP | ACOSTE | Breeze Eye Let Vests | WinStripe Striped Banians | ARCHERY Gym Vest | COMPACT Premium Cotton Rib Vests | LITTLE STARS Kids Innerwears

RAMRAJ COTTON SHOWROOMS

BENGALURU : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD SS PLAZA, 10TH B MAIN ROAD • KORAMANGALA • RAJAJI NAGAR • R.T. NAGAR • VIJAYANAGAR • BANASHANKARI • YESHWANTHPUR YELACHENAHALLI • UTTARAHALLI • HSR LAYOUT • RAMAMURTHY NAGAR • J.P. NAGAR • RR NAGAR • MARATHAHALLI • KR PURAM KENGERI • HESARAGATTA • YELHANKA • NELAMANGALA • DEVANAHALLI • CHINTAMANI • KANAKAPURA • RAMNAGARA • TUMKUR CHANDAPURA • CHAMBENAHALLI (SARJAPUR) • ATTIBELE • SINGANAIKANAHALLI • NEW THIPPASANDRA • CHIKKAGOLLARAHATTI

Available at Ramraj Showrooms and All Leading Textile Shops | Shop Online at www.ramrajcotton.in

ಬಿಬಿಎಂಪಿಗೆ ಅನುದಾನ ವಿಚಾರ ● ಸಾರಿಗೆ ಸಚಿವ ಕಿಡಿ

‘ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ.ಎಸ್. ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಬಿಬಿಎಂಪಿಗೆ ₹8 ಸಾವಿರ ಕೋಟಿ ಅನುದಾನ ಕೊಟ್ಟಿಲ್ಲ. ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು ‘ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದ ಅವಧಿಯಲ್ಲಿ (2018) ಮತ್ತು ಸಮ್ಮಿಶ್ರ ಸರ್ಕಾರದಲ್ಲಿ (2019) ಸಿದ್ದರಾಮಯ್ಯ ಮತ್ತು ಕುಮಾರಸ್ವಾಮಿ ಸೇರಿ ₹7 ಸಾವಿರ ಕೋಟಿ ಘೋಷಿಸಿದ್ದರು. ಬಿಜೆಪಿಯವರು ಅಧಿಕಾರಕ್ಕೆ ಬಂದು ನಾವು ಕೊಟ್ಟಿದ್ದ ಆ ₹7 ಸಾವಿರ ಕೋಟಿಯನ್ನು ಹಂಚಿ ಕೊಂಡಿದ್ದರು’ ಎಂದು ಅಂಕಿಅಂಶಗಳನ್ನು ನೀಡಿದರ

‘ಆಗ ಕಾಂಗ್ರೆಸ್ ಶಾಸಕರಿಗೆ ಕೇವಲ ₹1,600 ಕೋಟಿ ಮಾತ್ರ ಹಂಚಿಕೆ ಮಾಡಿದ್ದ ಬಿಜೆಪಿ ಸರ್ಕಾರ, ಬಿಜೆಪಿ ಶಾಸಕರಿಗೆ ₹5,400 ಕೋಟಿ ಅನುದಾನ ಹಂಚಿಕೆ ಮಾಡಿತ್ತು. ಬಿಜೆಪಿಯವರು ಅಧಿಕಾರಕ್ಕೆ ಬಂದ ಬಳಿಕ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಅನುದಾನ ಕಡಿಮೆ ಮಾಡಿದ್ದಾರೆ’ ಎಂದು ಆರೋಪಿಸಿದರು.

‘ಬಿಜೆಪಿಯವರು ಅಧಿಕಾರ ಬಿಟ್ಟು ಹೋಗುವಾಗ ಬಿಬಿಎಂಪಿಯಲ್ಲಿ ₹6 ಸಾವಿರ ಕೋಟಿ ಬಿಲ್ ಪಾವತಿಗೆ ಬಾಕಿ ಇಟ್ಟಿದ್ದರು. ಈಗ ನಮ್ಮ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಬಿಜೆಪಿಯವರು ಬಿಬಿಎಂಪಿಗೆ ಯಾಕೆ ಚುನಾವಣೆ ನಡೆಸಲಿಲ್ಲ’ ಎಂದೂ ಪ್ರಶ್ನಿಸಿದರು.

‘ಬೆಂಗಳೂರನ್ನು ಗಾರ್ಡನ್ ಸಿಟಿಯಿಂದ ಗಾರ್ಬೇಜ್ ಸಿಟಿ ಮಾಡಿದ್ದು ಬಿಜೆಪಿಯವರು. ಅವರ ಅವಧಿಯಲ್ಲಿ ಅನೇಕ ಕಟ್ಟಡಗಳನ್ನು ಅಡಮಾನ ಇಟ್ಟಿದ್ದರು. ಅದನ್ನೆಲ್ಲ ನಾವು ಬಿಡಿಸಿದ್ದೇವೆ. ಪ್ರತಿವರ್ಷ ₹8 ಸಾವಿರ ಕೊಟ್ಟಿದ್ದೇವೆ ಎಂದು ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ’ ಎಂದು ಕಿಡಿಕಾರಿದರು.

‘ಮೇ 30ಗಳಲ್ಲಿ ಚುನಾವಣೆ’



ರಾಮಲಿಂಗಾ ರೆಡ್ಡಿ

‘ಬಿಬಿಎಂಪಿ ಚುನಾವಣೆಯು ಮೇ ತಿಂಗಳಲ್ಲಿ ನಡೆಯಬಹುದು’ ಎಂದು ರಾಮಲಿಂಗಾ ರೆಡ್ಡಿ ವಿಶ್ವಾಸ ವ್ಯಕ್ತಪಡಿಸಿದರು.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಗೆ ಸಂಬಂಧಿಸಿದ ಮಸೂದೆಯು ವಿಧಾನ ಮಂಡಲದಲ್ಲಿ ಅಂಗೀಕಾರಗೊಳ್ಳಲಿದೆ. ನಂತರ ವಾರ್ಡ್‌ಗಳ ಸಂಖ್ಯೆ ಹೆಚ್ಚಬಹುದು. 2-3 ಪಾಲಿಕೆ ರಚನೆ ಆಗಬಹುದು’ ಎಂದರು.

ವಿಧಾನಸೌಧದ ಪಶ್ಚಿಮದ್ವಾರದಲ್ಲಿ ನಿರ್ಮಾಣ

ಸಿ.ಎಂಗಾಗಿ ವಿಶೇಷ ರ‍್ಯಾಂಪ್

ಪ್ರಜಾವಾಣಿ ವಾರ್ತೆ

ವಿಧಾನಸೌಧದ ಕೆಂಗಲ್ ದ್ವಾರದ ಬಳಿ ಮುಖ್ಯಮಂತ್ರಿ ಓಡಾಟಕ್ಕಾಗಿ ರ‍್ಯಾಂಪ್ ಅಳವಡಿಸಲಾಗಿದೆ

ಬೆಂಗಳೂರು: ವಿಧಾನ ಮಂಡಲ ಅಧಿವೇಶನ ಇದೇ 3ರಂದು ಆರಂಭಗೊಳ್ಳಲಿದ್ದು, ಮಂಡಿ ಚಿಪ್ಪು ನೋವಿನಿಂದ ಬಳಲುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಧಿವೇಶನದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ವಿಧಾನಸೌಧದ ಪಶ್ಚಿಮದ್ವಾರದಲ್ಲಿ (ಕೆಂಗಲ್ ಗೇಟ್) ವಿಶೇಷ ರ‍್ಯಾಂಪ್ ಸಿದ್ಧಪಡಿಸಲಾಗಿದೆ.

ಅನೇಕ ದಿನಗಳಿಂದ ಮಂಡಿ ಚಿಪ್ಪು ನೋವಿನಿಂದ ಬಳಲುತ್ತಿರುವ ಸಿದ್ದರಾಮಯ್ಯ ಅವರಿಗೆ ನಡೆದಾಡಲು ಸಾಧ್ಯವಾಗುತ್ತಿಲ್ಲ. ಆರು ವಾರಗಳ ವಿಶ್ರಾಂತಿ ಪಡೆಯುವಂತೆ ವೈದ್ಯರು ಸೂಚಿಸಿದ್ದಾರೆ. ಹೀಗಾಗಿ, ಅವರು ಗಾಲಿ ಕುರ್ಚಿಯಲ್ಲೇ ತೆರಳಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ.

ವಿಧಾನಸೌಧದ ಒಳಗೆ ಗಾಲಿ ಕುರ್ಚಿಯಲ್ಲಿಯೇ ಪ್ರವೇಶಿಸಲು ಅವಕಾಶ ಮಾಡಿಕೊಡಲು ಈ ರ‍್ಯಾಂಪ್ ನಿರ್ಮಿಸಲಾಗಿದೆ. ಮಾರ್ಚ್ 7ರಂದು ಅವರು 2025–26ನೇ ಸಾಲಿನ ಬಜೆಟ್ ಮಂಡಿಸಲಿದ್ದಾರೆ..

‘ವಿಧಾನಸೌಧಲ್ಲಿರುವ ನಾಲ್ಕು ಪ್ರವೇಶ ದ್ವಾರಗಳ ಪೈಕಿ, ಪಶ್ಚಿಮ ದ್ವಾರ ಹೊರತುಪಡಿಸಿ ಉಳಿದ ಮೂರೂ ದ್ವಾರಗಳಲ್ಲಿ ರ‍್ಯಾಂಪ್ ವ್ಯವಸ್ಥೆಯಿದೆ. ಸಾಮಾನ್ಯವಾಗಿ ಪಶ್ಚಿಮ ದ್ವಾರದ ಮೂಲಕವೇ ಮುಖ್ಯಮಂತ್ರಿ ವಿಧಾನಸೌಧ ಪ್ರವೇಶಿಸುತ್ತಾರೆ. ಹೀಗಾಗಿ, ಈ ದ್ವಾರದಲ್ಲಿ ರ‍್ಯಾಂಪ್ ವ್ಯವಸ್ಥೆ ಮಾಡಲಾಗಿದೆ’ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

PRM/KA/RERA/1251/472/PR/250225/007524

Launching

DS-MAX SKYSHLOKAM

LUXURIOUS 2 & 3-BHK APARTMENTS | G+14 FLOORS

ON AIRPORT ROAD (Navarathna Agrahara)

LESS THAN

03 mins Prestige Tech Cloud IT Park
05 mins Upcoming Airport Metro
10 mins International Airport
20 mins Hebbal

When Everything Is "LESS THAN" A Few Minutes Away, Your Returns, Joy & Happiness Will Be "MORE THAN" You Ever Imagined!

2-BHK STARTS @ ₹ 64L* | 3-BHK STARTS @ ₹ 87L*

LAUNCH OFFER PRICES (For Limited Period Only)

2, 3 & 4-BHK APARTMENTS FOR SALE IN VARIOUS LOCATIONS

MYSORE ROAD NEAR CHALLAGHATTA METRO ₹ 56.25 - 79.66 Lakhs*	BANNERGHATTA RD. NEAR KOPPA GATE ₹ 44.01 - 77.62 Lakhs*	WHITEFIELD 15 MINS - HOPEFARM METRO ₹ 60.84 L - 1.14 Cr*	SILKBOARD NEAR SINGASANDRA METRO ₹ 73.02 L - 1.20 Cr*
YELAHANKA 5 MINS - RAJANUKUNTE ₹ 43.88 - 76.38 Lakhs*	BANASHANKARI OPP. NATIONAL PUBLIC SCHOOL ₹ 98.00 L - 1.74 Cr*	TUMKUR ROAD 10 MINS - MADAVARA METRO ₹ 55.99 - 78.37 Lakhs*	ELECTRONIC CITY NEAR HOSA ROAD METRO ₹ 56.60 L - 1.15 Cr*
CHANDAPURA 10 MINS. BOMMASANDRA METRO ₹ 37.60 - 49.60 Lakhs*	HENNUR ROAD NEAR HENNUR DECATHLON ₹ 76.50 - 95.70 Lakhs*	K R PURAM NEAR GARDEN CITY UNIVERSITY ₹ 75.18 - 95.97 Lakhs*	SARJAPURA SARJAPUR - ATTIBELE ROAD ₹ 38.72 - 43.44 Lakhs*

FOR PROJECT SPECIFIC INFORMATION 7022 791 222 www.dsmaxproperties.com

CREDAI BENGALURU

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ

ಅಧಿಕ ಇಳುವರಿಗಾಗಿ ಸೂಕ್ಷ್ಮ ನೀರಾವರಿ

ಮಾನ್ಯ ಕೃಷಿ ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಫಲಾನುಭವಿಗಳಿಗೆ ತುಂತುರು ನೀರಾವರಿ ಘಟಕಗಳನ್ನು ವಿತರಿಸುತ್ತಿರುವುದು.

ರೈತರಿಗೆ ಶೇಕಡ 90ರಷ್ಟು ಸಹಾಯಧನ

ಅರ್ಜಿ ಸಲ್ಲಿಸಿದ ಪರಿಶಿಷ್ಟ ಜಾತಿಯ ರೈತರಿಗೆ 48 ಗಂಟೆಗಳಲ್ಲಿ ಕಾರ್ಯಾದೇಶ

ಹೆಚ್ಚು ಇಳುವರಿಗಾಗಿ ಹನಿ/ತುಂತುರು ನೀರಾವರಿ ಘಟಕ ಅಳವಡಿಸಿ

ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸಿ ಅಥವಾ “ರೈತ ಕರೆ ಕೇಂದ್ರ 18004253553” ಗೆ ಕರೆ ಮಾಡಬಹುದಾಗಿದೆ

ಕರ್ನಾಟಕ ರಾಜ್ಯ ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

II VISHWA VIDYAPEETH II
GROUP OF SCHOOLS

ADMISSION OPEN
AY 2025-26 Pre Primary to Grade 10

We **GUIDE** your child to choose the Path for a **Changing World**

Affiliated to The Central Board of Secondary Education, Govt. of India, New Delhi

CBSE Affiliation No. 831350
Varthur, Whitefield

We work with the best minds

MADHAVA GANITHA KALAKSHETRA

"Vishwa Vidyapeeth Institution is dedicated to moulding the students to be Future Ready in a comprehensive manner, while not losing sight of Foundational Values and Ideals."
-Padma Shri Sujatha Ramdorai

Headed by
Dr. Pankaj Jain
PhD | Molecular Biophysics (MBU) | IISc | Founder, Seed2Sapling Education

The Madhava Ganitha Kalakshetra at our school is a dedicated space fostering mathematical exploration and discovery. **Named after the ancient Indian mathematician Madhava of Sangamagrama**, this lab aims to cultivate a deep understanding of mathematical concepts among students. Equipped with state-of-the-art resources, the lab provides an interactive and immersive learning environment. The students are facilitated by **professional trainers coming from the Seed2Sapling organisation for such mathematical explorations.**

NAMBI ANTARIKSHA KALAKSHETRA



Headed by
Ms Nikhitha Chadde
Aerospace Engineer who has **created educational content** for the **Indian Space Research Organization (ISRO)**

The Nambi Antariksha Kalakshetra, our state-of-the-art space lab, was recently inaugurated by **ISRO legend Dr. Nambi Narayanan.** This innovative lab offers students hands-on experience in space science, from satellite design to space mission simulations. Powered by **Genex Space**, it's a groundbreaking step towards nurturing future space explorers. Vishwa Vidyapeeth is proud to be at the forefront of space education, inspiring the next generation of scientists and innovators.

GNANAVATIKA
Experiential Learning - Learning in the nature with Real Life Situations

Leh & Ladakh

Uttarakhand

Chamba

& many more...

Sports Programme
No Additional Cost

Skating | Cricket | Football | Basketball | Volleyball
Table Tennis | Taekwondo | Yoga | Carrom | Chess

Highlights of our programme

Bhagavad Gita
Offered for all grades to support overall personality development

Neural Education
The First School to include Neural Science into the Teaching Learning Process

Step N Learn
Interactive Platform to enhance Students Application Skills

Inhouse Kitchen & Dining
Caters nutritious, healthy & balanced breakfast & lunch for all students

Math Carpentry
Integrating carpentry with Math to remove math phobia and make abstract concepts more relatable

Computer Lab with Robotics
Nurtures young minds to build, program and customize their own robots

Mother on Duty
Transparency at the core . We allow the mother of each student to take a tour of the school and evaluate the atmosphere that the children study in.

CONTACT US
7022009757 / 7676227483

REGISTER NOW
SCAN HERE →

1ST HIGH HAPPINESS QUOTIENT SCHOOL
EDUCATION WORLD GRAND JURY RANKING

1ST TOP CBSE EMERGING SCHOOL
EDUCATION TODAY

1ST MOST INNOVATIVE SCHOOL WITH QUALITY EDUCATION IN KARNATAKA
TOPNOTCH FOUNDATION

ಕೊನೆ ದಿನವೂ ಜನಸಾಗರ...

ತೋಟಗಾರಿಕಾ ಮೇಳಕ್ಕೆ ತೆರೆ; ಪ್ರಗತಿಪರ ರೈತರಿಗೆ 'ಅತ್ಯುತ್ತಮ ರೈತ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಪ್ರಗತಿಪರ ರೈತರಿಗೆ 'ಅತ್ಯುತ್ತಮ ರೈತ ಪ್ರಶಸ್ತಿ' ಪ್ರದಾನ ಮಾಡಲಾಯಿತು

ಹೆಸರಘಟ್ಟ: ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ ಆವರಣದಲ್ಲಿ ಮೂರು ದಿನಗಳ ತೋಟಗಾರಿಕೆ ಮೇಳ ಶನಿವಾರ ಮುಕ್ತಾಯಗೊಂಡಿತು. ಕೊನೆಯ ದಿನ 50 ಸಾವಿರಕ್ಕೂ ಹೆಚ್ಚು ಜನರು ಭೇಟಿ ನೀಡಿದ್ದರು.

'ವಿಕಸಿತ ಭಾರತಕ್ಕಾಗಿ ತೋಟಗಾರಿಕೆ ಪೋಷಣೆ, ಸಬಲೀಕರಣ ಮತ್ತು ಜೀವನೋಪಾಯ' ಶೀರ್ಷಿಕೆ ಅಡಿಯಲ್ಲಿ ಈ ಬಾರಿ ಮೇಳವನ್ನು ಆಯೋಜಿಸಲಾಗಿತ್ತು.

ಕೊನೆಯ ದಿನ ರೈತರು, ಯುವಕರು, ವಿದ್ಯಾರ್ಥಿಗಳು ಮತ್ತು ಮಹಿಳೆಯರು ಸೇರಿದಂತೆ ಹೆಚ್ಚು ಸಂಖ್ಯೆಯಲ್ಲಿ ಮೇಳದಲ್ಲಿ ಕಾಣಿಸಿಕೊಂಡರು. ಆಧುನಿಕ ಕೃಷಿ ಉಪಕರಣಗಳು ಸೋಲಾರ್ ಪಂಪ್, ಸೆಟ್ ಅಳವಡಿಕೆ, ಕೃಷಿ ಡ್ರೋನ್ ಉಪಕರಣ, ಮಣ್ಣು ರಹಿತ ತರಕಾರಿ, ಕೃಷಿ ಪ್ರಾತ್ಯಕ್ಷಿಕೆಗಳ ಮಳಿಗೆಗಳಲ್ಲಿ ಹೆಚ್ಚು ಜನರು ಮಾಹಿತಿ ಪಡೆದರು. ಬಗೆ ಬಗೆಯ ನೈಜ ಹಣ್ಣುಗಳಿಂದ ಮಾಡಿದ ಐಸ್ ಕ್ರೀಮ್ ಸವಿದು ಹಲವರು ದಣಿವಾರಿಸಿಕೊಂಡರು.

ಕೃಷಿಯನ್ನು ಲಾಭದಾಯಕ ಉದ್ಯಮವಾಗಿ ಮಾಡಲು ಗೊಂಬೆ ಆಟದ ಮೂಲಕ ರೈತರಿಗೆ ಅರಿವು ಮತ್ತು ತಂತ್ರಜ್ಞಾನದ ಬಗ್ಗೆ ತಿಳಿವಳಿಕೆ ಮೂಡಿಸಲಾಯಿತು.

ಮೇಳದಲ್ಲಿ ಮೊದಲ ಬಾರಿಗೆ ಕಿತ್ತಳೆ ಬಣ್ಣದ ಕಲ್ಲಂಗಡಿಯನ್ನು ರೈತರಿಗೆ ಪರಿಚಯಿಸಲಾಗಿತ್ತು. ಇದರಲ್ಲಿ ಹೆಚ್ಚಿನ ಪೋಷಕಾಂಶ, ವಿಟಮಿನ್ ಸಿ ಹೇರಳವಾಗಿದೆ. ಈ ಕಿತ್ತಳೆ ಬಣ್ಣದ ಕಲ್ಲಂಗಡಿಯು ಬಿತ್ತನೆ ಮಾಡಿದ ದಿನದಿಂದ 75ರಿಂದ 80 ದಿನಗಳೊಳಗೆ ಕೊಯ್ಲಿಗೆ ಬರುತ್ತದೆ. ಮಾಗಿದ ಹಣ್ಣಿನಿಂದಲೇ ಬೀಜ ಉತ್ಪಾದನೆಯನ್ನು ಮಾಡಬಹುದು. ಇದು ಇನ್ನೂ ಹೊಸ ತಳಿಯಾಗಿರುವುದರಿಂದ ಬೀಜವನ್ನು ಆರು ತಿಂಗಳ ನಂತರ ಮಾರುಕಟ್ಟೆಗೆ ಬಿಡಲಾಗುವುದು ಎಂದು ಉಸ್ತುವಾರಿ ಯಶವಂತ್ ತಿಳಿಸಿದರು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಸಂಸದ ಡಾ. ಸಿ.ಎನ್ ಮಂಜುನಾಥ್, ರೈತರ ಮನಸ್ಥಿತಿ ಬದಲಾಗಬೇಕು. ಆಧುನಿಕ ತಂತ್ರಜ್ಞಾನಗಳ ಫಲ ಪಡೆದುಕೊಳ್ಳಬೇಕು' ಎಂದರು.

ಕಾರ್ಯಕ್ರಮದಲ್ಲಿ 15 ಪ್ರಗತಿಪರ ರೈತರಿಗೆ ಅತ್ಯುತ್ತಮ ರೈತ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೇಳದಲ್ಲಿ ವಿವಿಧ ಬಗೆಯ ಹಣ್ಣುಗಳ ಪ್ರಾತ್ಯಕ್ಷಿಕೆಗಳನ್ನು ಜನರು ವೀಕ್ಷಿಸಿದರು

ಐಐಎಚ್‌ಆರ್‌ಗೆ ಡೀಮ್ಡ್ ವಿ.ವಿ ಸ್ಥಾನಮಾನ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಗೆ(ಐಐಎಚ್‌ಆರ್) ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನ ನೀಡುವ ಬಗ್ಗೆ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರೊಂದಿಗೆ ಶೀಘ್ರವೇ ಚರ್ಚೆ ನಡೆಸಲಾಗುತ್ತದೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಐಐಎಚ್‌ಆರ್ ಹಮ್ಮಿಕೊಂಡಿದ್ದ ರಾಷ್ಟ್ರೀಯ ತೋಟಗಾರಿಕಾ ಮೇಳ-2025ರ ಸಮಾರೋಪದಲ್ಲಿ ಅವರು ಶನಿವಾರ ಮಾತನಾಡಿದರು.

'ಕೃಷಿ ಸಂಶೋಧನೆ, ತಂತ್ರಜ್ಞಾನ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಇದಕ್ಕಾಗಿ ಕೃಷಿ ಸಂಶೋಧನಾ ಸಂಸ್ಥೆಗಳಿಗೆ ಹೆಚ್ಚು ಶಕ್ತಿ ತುಂಬುವ ಕೆಲಸ ನಡೆಯುತ್ತಿದೆ.



ಕುಮಾರಸ್ವಾಮಿ

ಇದರ ಭಾಗವಾಗಿ ಐಐಎಚ್‌ಆರ್‌ಗೆ ಡೀಮ್ಡ್ ವಿ.ವಿ ಸ್ಥಾನಮಾನ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಕೇಂದ್ರ ಕೃಷಿ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರೊಂದಿಗೂ ಚರ್ಚೆ ನಡೆಸಲಾಗುವುದು' ಎಂದು ತಿಳಿಸಿದರು.

'ಕೃಷಿ ನಿರ್ಲಕ್ಷ್ಯ ಮಾಡಬೇಡಿ': 'ನಾನು ಗ್ಯಾರಂಟಿ ಯೋಜನೆಗಳನ್ನು ವಿರೋಧ ಮಾಡುವುದಿಲ್ಲ. ಆದರೆ, ಗ್ಯಾರಂಟಿ ಕೊಟ್ಟು ಅದೇ ಗ್ರಾಮೀಣ ಜನರ ಜೀವನಾಡಿ ಆಗಿರುವ ಕೃಷಿಯನ್ನು ನಿರ್ಲಕ್ಷ್ಯ ಮಾಡಬೇಡಿ ಎಂದು ಹೇಳಿದ್ದೇನೆ. ರಾಜ್ಯದ ಜನರು ಕಷ್ಟಕಾಲದಲ್ಲಿಯೂ ತೆರಿಗೆ ಕಟ್ಟಿ ಸರ್ಕಾರದ ಖಜಾನೆ ತುಂಬಿಸಿದ್ದಾರೆ. ವರ್ಷಕ್ಕೆ ರಾಜ್ಯ ಸರ್ಕಾರ ₹52,000 ಕೋಟಿ ಹಣವನ್ನು ಗ್ಯಾರಂಟಿಗಳಿಗೆ ವೆಚ್ಚ ಮಾಡುತ್ತಿದೆ. ಅಷ್ಟು ಹಣವನ್ನು ಒಂದು ವರ್ಷದ ಮಟ್ಟಿಗೆ ಕೃಷಿ, ತೋಟಗಾರಿಕೆ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲಿ. ಎರಡೂ ಕ್ಷೇತ್ರಗಳಿಗೆ ಕಾಯಕಲ್ಪ ಮಾಡಿದರೆ ಕರ್ನಾಟಕ ಇಡೀ ದೇಶಕ್ಕೆ ಮಾದರಿ ಆಗಲಿದೆ' ಎಂದು ಕುಮಾರಸ್ವಾಮಿ ಹೇಳಿದರು.

'ಗ್ಯಾರಂಟಿ ಹಣದಿಂದ ಕೃಷಿಕರ ಬದುಕು ಹಸನಾಗುವುದಿಲ್ಲ. ಆದರೆ, ಕೃಷಿ, ತೋಟಗಾರಿಕೆಗೆ ಶಕ್ತಿ ತುಂಬಿದರೆ, ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದರೆ ಇಂಥ ನೂರು ಗ್ಯಾರಂಟಿ ಕೊಡುವುದಕ್ಕೆ ಸಮವಾಗುತ್ತದೆ' ಎಂದರು.

ಭೂವಿಜ್ಞಾನಿ ಮೇಲೆ ಹಲ್ಲೆ: ಎಫ್‌ಐಆರ್

ಕೊಪ್ಪಳ: ತಾಲ್ಲೂಕಿನ ಹಿರೇಸಿಂದೋಗಿ ಸಮೀಪದಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದ ಕುರಿತು ಪ್ರಶ್ನೆ ಮಾಡಿದ್ದಕ್ಕೆ ಭೂ ವಿಜ್ಞಾನಿ ನಾಗರಾಜು ಈ. ಮತ್ತು ಅವರ ವಾಹನ ಚಾಲಕ ಸಚಿನ್ ಗೌರಿಪುರ ಅವರ ಮೇಲೆ ಹಲ್ಲೆಯಾಗಿದೆ.

ಹಿರೇಸಿಂದೋಗಿ ಪಕ್ಕದ ಹಿರೇಹಳ್ಳದಲ್ಲಿ ಮರಳು ಅಕ್ರಮವಾಗಿ ಸಾಗಣೆ ನಡೆಯುತ್ತಿದ್ದ ಸ್ಥಳಕ್ಕೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿ ಹಾಗೂ ಮೂವರು ಸಿಬ್ಬಂದಿ ಸ್ಥಳಕ್ಕೆ ಬಂದು, ಟ್ರ್ಯಾಕ್ಟರ್ ಮತ್ತು ಟಿಪ್ಪರ್‌ಗಳಲ್ಲಿ ಮರಳು ತುಂಬಿಕೊಂಡು ಸಾಗಿಸುತ್ತಿದ್ದುದ್ದನ್ನು ಚಿತ್ರೀಕರಿಸಿ, ವಶಕ್ಕೆ ಪಡೆಯಲು ಹೋದಾಗ ಪುಂಡರು ದಾಳಿ ಮಾಡಿ ಮೊಬೈಲ್‌ಗಳನ್ನು ಕಸಿದುಕೊಂಡಿದ್ದಾರೆ.

ಚಿಕ್ಕಸಿಂದೋಗಿಯ ಗುಡದಪ್ಪ ಕಾಸಲೇರ, ಶಬ್ಬೀರಸಾಬ್ ವಾಲಿಕಾರ, ಮಲ್ಲಪ್ಪ ಚಿಕ್ಕೇನಕೊಪ್ಪ, ವೀರಯ್ಯ ಹಿರೇಮಠ ಮತ್ತು ಚಿಕ್ಕೇನಕೊಪ್ಪದ ಯಲ್ಲಪ್ಪ ತಲ್ಲೂರ ವಿರುದ್ಧ ದೂರು ದಾಖಲಾಗಿದೆ.

ಹುಮನಾಬಾದ್ ಪುರಸಭೆ: ರೇಷ್ಮಾ ಸದಸ್ಯತ್ವ ರದ್ದು

ಹುಮನಾಬಾದ್ (ಬೀದರ್ ಜಿಲ್ಲೆ): ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿರುವುದು ರುಜುವಾತು ಆಗಿರುವುದರಿಂದ ಇಲ್ಲಿನ ಪುರಸಭೆ ಸದಸ್ಯೆ ರೇಷ್ಮಾ ಶ್ರೀಧರ ಅವರ ಸದಸ್ಯತ್ವವನ್ನು ರದ್ದುಗೊಳಿಸಿ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಆದೇಶ ಹೊರಡಿಸಿದ್ದಾರೆ.

ಸುಳ್ಳು ಜಾತಿ ಪ್ರಮಾಣ ಪತ್ರ ಸಲ್ಲಿಸಿರುವ ಬಗ್ಗೆ ಜೆಡಿಎಸ್ ಮುಖಂಡ ಶಿವಪುತ್ರ ಮಾಳಗೆ ಎಂಬುವರು ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದ್ದರು. ಈ ಬಗ್ಗೆ ಜಿಲ್ಲಾಧಿಕಾರಿ ವಿಚಾರಣೆ ನಡೆಸಿ ಸದಸ್ಯತ್ವ ರದ್ದುಪಡಿಸಿ ಆದೇಶಿಸಿದ್ದಾರೆ.

ಪುಸ್ತಕ ಬಿಡುಗಡೆ

ನಗರದಲ್ಲಿ ಶನಿವಾರ ಕಿರಂ ಪ್ರಕಾಶನ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕುಸುಮ ಅಬ್ಬೂರು ಅವರ 'ದೂರ ತೀರ ಯಾನ' ಕಾದಂಬರಿ ಬಿಡುಗಡೆ ಮಾಡಿದರು. ಸುಧಾ ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ, ಸಾಹಿತಿಗಳಾದ ಹಿ.ಚಿ. ಬೋರಲಿಂಗಯ್ಯ, ಅಗ್ರಹಾರ ಕೃಷ್ಣಮೂರ್ತಿ ಮತ್ತು ಎಚ್.ಎಲ್. ಪುಷ್ಪ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರಾಜ್ಯ ಸರ್ಕಾರದಿಂದ ಮೋಜು, ದುಂದುವೆಚ್ಚ: ಎಚ್. ವಿಶ್ವನಾಥ್

ಬೆಂಗಳೂರು: 'ನಾಡಿನ ಜನರ ಬೆವರ ಶ್ರಮದ ಹಣವನ್ನು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮೋಜಿಗೆ ಬಳಸುತ್ತಿದ್ದು, ಇಲ್ಲದ ಹುದ್ದೆಗಳನ್ನು ಸೃಷ್ಟಿಸಿ ಸಂಪುಟ ದರ್ಜೆ ಸಚಿವರ ಸ್ಥಾನಮಾನ ಒದಗಿಸಲಾಗಿದೆ. ಈ ಮೂಲಕ ಖಜಾನೆಯಲ್ಲಿನ ಹಣವನ್ನು ದುಂದುವೆಚ್ಚ ಮಾಡಲಾಗುತ್ತಿದೆ' ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪರಮೋಚ್ಚ ಅಧಿಕಾರ ಬಳಸಿ, ಇಷ್ಟ ಬಂದಂತೆ ಹಣ ಖರ್ಚು ಮಾಡುವ ಧೋರಣೆ ಸರಿಯಲ್ಲ. ಸದನದ ಒಪ್ಪಿಗೆಯಿಲ್ಲದೆ ಹಣ ಖರ್ಚು ಮಾಡಲು ಯಾರಿಗೂ ಅಧಿಕಾರವಿಲ್ಲ. ಆದರೆ, ಸಂಪುಟದಲ್ಲಿ 34 ಸಚಿವರ ಜತೆಗೆ ಹೆಚ್ಚುವರಿಯಾಗಿ 64 ಮಂದಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ. ಮುಖ್ಯಮಂತ್ರಿ ಅವರ ಕಚೇರಿಯಲ್ಲಿಯೇ 250 ಸಿಬ್ಬಂದಿ ಇದ್ದಾರೆ. ಮುಖ್ಯಮಂತ್ರಿ ಸಚಿವಾಲಯದಲ್ಲೇ ಹಲವರಿಗೆ ಸಂಪುಟ ದರ್ಜೆ ಸಚಿವರ ಸ್ಥಾನಮಾನ ನೀಡಲಾಗಿದೆ. ಮಂತ್ರಿಗಳ ಮನೆಗೆಲಸದವರೂ ಕಚೇರಿಗಳಲ್ಲಿ ಇದ್ದಾರೆ. ಅವರ ಸಂಬಳ, ಸಾರಿಗೆ, ಮತ್ತಿತರ ಸೌಲಭ್ಯಗಳಿಗೆ ಸದನ ಅಧಿಕಾರ ನೀಡಿಲ್ಲ. ವಿರೋಧ ಪಕ್ಷದವರು ಇದನ್ನು ಪ್ರಶ್ನಿಸದ ಕಾರಣ ದುಂದುವೆಚ್ಚ ಮುಂದುವರಿದಿದೆ' ಎಂದರು.

'ಅಮೆರಿಕದಂತಹ ದೈತ್ಯ ಆರ್ಥಿಕ ಶಕ್ತಿಯೇ ಅನವಶ್ಯಕ ವೆಚ್ಚಕ್ಕೆ ಕಡಿವಾಣ ಹಾಕಿದೆ. ರಾಜ್ಯದ ಆಡಳಿತ ನಮ್ಮದು ಎಂದೋ, ನಮ್ಮನ್ನು ಪ್ರಶ್ನಿಸುವವರು ಯಾರೂ ಇಲ್ಲವೆಂದೋ ಸರ್ಕಾರ ನಡೆಯುತ್ತಿದೆ. ಬಜೆಟ್ ಮಂಡನೆಯಾಗುವ ಮುನ್ನ ವಿಧಾನಸಭೆ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ತಿನ ಸಭಾಪತಿ ಅವರು ತಮ್ಮ ವಿವೇಚನೆಯಲ್ಲಿ ಸಂವಿಧಾನಾತ್ಮಕ ಕೆಲವು ತೀರ್ಮಾನಗಳನ್ನು ತೆಗೆದುಕೊಂಡು, ಜನಹಿತ ಕಾಪಾಡಬೇಕು' ಎಂದು ಆಗ್ರಹಿಸಿದರು.

ಎಐಡಿಎಸ್‌ಒ ನೇತೃತ್ವದಲ್ಲಿ ಪ್ರತಿಭಟನೆ

'ಅರ್ಹರಿಗೆ ವಿದ್ಯಾರ್ಥಿವೇತನ ವಿತರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಹರಿಗೆ ವಿದ್ಯಾರ್ಥಿವೇತನ ವಿತರಣೆಯೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ಸ್ ಆರ್ಗನೈಸೇಷನ್(ಎಐಡಿಎಸ್‌ಒ) ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ವಿದ್ಯಾರ್ಥಿಗಳು ಶನಿವಾರ ಪ್ರತಿಭಟನೆ ನಡೆಸಿದರು.

ಯಾವುದೇ ಕಾರಣಕ್ಕೂ ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು. ಸರ್ಕಾರಿ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸಬೇಕು ಎಂದು ವಿದ್ಯಾರ್ಥಿಗಳು ಆಗ್ರಹಿಸಿದರು

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅವರು, 'ಸರ್ಕಾರ ಕೊಟ್ಟ ಮಾತಿಗೆ ತಪ್ಪಬಾರದು. ಅರ್ಹರಿಗೆ ವಿದ್ಯಾರ್ಥಿ ವೇತನ ವಿತರಣೆ ಮಾಡಬೇಕು' ಎಂದು ಆಗ್ರಹಿಸಿದರು. 'ಸರ್ಕಾರ ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕು. ಶಾಲಾ–ಕಾಲೇಜುಗಳಿಗೆ ದಾಖಲಾತಿ ಪಡೆದುಕೊಳ್ಳುವ ಸಮಯದಲ್ಲಿ ಆರ್ಥಿಕ ಸೌಲಭ್ಯ ಕಲ್ಪಿಸುತ್ತೇವೆ ಎಂಬುದಾಗಿ ಸರ್ಕಾರ ಭರವಸೆ ಕೊಟ್ಟಿದೆ. ಆ ಭರವಸೆ ಯನ್ನು ಈಡೇರಿಸಬೇಕು' ಎಂದೂ ಆಗ್ರಹಿಸಿದರು.

'ಕಡಿಮೆ ದಾಖಲಾತಿಯಿದೆ ಎನ್ನುವ ಕಾರಣಕ್ಕೆ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿಲ್ಲ. ಮೂಲಸೌಲಭ್ಯಗಳನ್ನು ಒದಗಿಸದೇ ಇರುವುದು ಸರ್ಕಾರಿ ಶಾಲೆಗಳು ಬಂದ್ ಆಗಲು ಪ್ರಮುಖ ಕಾರಣವಾಗಿದೆ' ಎಂದು ಹೇಳಿದರು.

ಹೋರಾಟಗಾರ ನರಸಿಂಹೇಗೌಡ ಅವರು, ವಿದ್ಯಾರ್ಥಿಗಳ ನ್ಯಾಯಯುತ ಬೇಡಿಕೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈಡೇರಿಸಬೇಕು ಎಂದು ಆಗ್ರಹಿಸಿದರು. ಸುಭಾಷ್ ಬೆಟ್ಟದಕೊಪ್ಪ, ಅಭಯಾ ದಿವಾಕರ್, ಕೆ.ಎಸ್.ಅಶ್ವಿನಿ, ಅಜಯ್ ಕಾಮತ್, ಮಹಾಂತೇಶ್ ಬೀಳೂರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ಸ್ ಆರ್ಗನೈಸೇಷನ್(ಎಐಡಿಎಸ್‌ಒ) ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ವಿದ್ಯಾರ್ಥಿಗಳು ಶನಿವಾರ ಪ್ರತಿಭಟನೆ ನಡೆಸಿದರು

ರೈಲಿನಲ್ಲಿ ನಗರಕ್ಕೆ ಬಂದು ಕಳ್ಳತನ ಮಾಡಿ ಬಸ್‌ನಲ್ಲಿ ಉತ್ತರ ಪ್ರದೇಶಕ್ಕೆ ಪ್ರಯಾಣ

ಇಬ್ಬರು ಅಂತರ ರಾಜ್ಯ ಕಳ್ಳರ ಬಂಧನ

ಪ್ರಜಾವಾಣಿ ವಾರ್ತೆ

ತಜೀಂ ಅಲಿ

ಸದ್ದಾಂ

ಬೆಂಗಳೂರು: ಹೊರ ರಾಜ್ಯದಿಂದ ರೈಲಿನ ಮೂಲಕ ನಗರಕ್ಕೆ ಬಂದು, ಮನೆಗಳಿಗೆ ನುಗ್ಗಿ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ ಇಬ್ಬರು ಅಂತರರಾಜ್ಯ ಕಳ್ಳರನ್ನು ತಿಲಕ್‌ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಪ್ರದೇಶದ ತಜೀಂ ಅಲಿ ಹಾಗೂ ಸದ್ದಾಂ ಬಂಧಿತರು.

‘ಬಂಧಿತರಿಂದ 186 ಗ್ರಾಂ ಚಿನ್ನಾಭರಣ, ಎರಡು ದ್ವಿಚಕ್ರ ವಾಹನ, ₹15 ಸಾವಿರ ನಗದು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳನ್ನು ವಿಚಾರಣೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ನ್ಯಾಯಾಲಯವು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಕಳ್ಳರನ್ನು ಜೈಲಿಗೆ ಕಳುಹಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಠಾಣಾ ವ್ಯಾಪ್ತಿಯಲ್ಲಿ ವಾಸವಾಗಿದ್ದ ದೂರುದಾರರ ಕುಟುಂಬವು ಡಿ.13ರಂದು ಮಂತ್ರಾಲಯಕ್ಕೆ ತೆರಳಿತ್ತು. ಮನೆಯ ಬಾಗಿಲು ಹಾಕಿದ್ದನ್ನು ಗಮನಿಸಿದ್ದ ಕಳ್ಳರು, ಬೀಗ ಒಡೆದು ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿದ್ದರು. ಚಿನ್ನಾಭರಣ ಕಳ್ಳತನ ಮಾಡಿಕೊಂಡು ತೆರಳುತ್ತಿದ್ದ ವೇಳೆ ಗೋವಿಂದರಾಜ ನಗರದಲ್ಲಿ ದ್ವಿಚಕ್ರ ವಾಹನವೊಂದನ್ನೂ ಕದ್ದಿದ್ದರು. ವಾಹನವನ್ನು ನಗರದ ವ್ಯಕ್ತಿಯೊಬ್ಬರಿಗೆ ಮಾರಾಟ ಮಾಡಿದ್ದರು. ನಂತರ, ಬಸ್‌ನಲ್ಲಿ ವಿವಿಧ ನಗರಗಳಿಗೆ ಪ್ರಯಾಣಿಸಿ ಉತ್ತರ ಪ್ರದೇಶ ತಲುಪಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಯಿತು. ತನಿಖೆ ವೇಳೆ ಸಿ.ಸಿ.ಟಿ.ವಿ. ಕ್ಯಾಮೆರಾಗಳ ಒಂದು ಸಾವಿರಕ್ಕೂ ಹೆಚ್ಚು ದೃಶ್ಯಗಳನ್ನು ಪರಿಶೀಲನೆ ನಡೆಸಲಾಯಿತು. ಪರಿಶೀಲನೆ ವೇಳೆ ಲಭಿಸಿದ ಸುಳಿವು ಆಧರಿಸಿ ಉತ್ತರ ಪ್ರದೇಶದ ಹಾಪೂರ್ ಹಾಗೂ ಮೀರತ್‌ನಲ್ಲಿ ತಲೆಮರೆಸಿಕೊಂಡಿದ್ದ ಇಬ್ಬರನ್ನು ಬಂಧಿಸಿ ನಗರಕ್ಕೆ ಕರೆತರಲಾಯಿತು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ತಜೀಂ ಅಲಿ ವಿರುದ್ಧ ಉತ್ತರ ಪ್ರದೇಶ, ರಾಜಸ್ಥಾನ, ದೆಹಲಿ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಕಳ್ಳತನ, ದರೋಡೆ, ಸುಲಿಗೆಯಂತಹ ಪ್ರಕರಣಗಳು ದಾಖಲಾಗಿವೆ. ಕಳ್ಳತನ ಮಾಡಿದ ವಸ್ತುಗಳನ್ನು ಮಾರಾಟ ಮಾಡಿ ಅದರಿಂದ ಬಂದ ಹಣದಿಂದ ಮೋಜು–ಮಸ್ತಿಗಾಗಿ ಬಳಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

ಸಲೂನ್ ಪರವಾನಗಿಗೆ ಲಂಚ, ಬಂಧನ

ಬೆಂಗಳೂರು: ಸಲೂನ್ ಒಂದಕ್ಕೆ ಪರವಾನಗಿ ನೀಡುವ ಸಂಬಂಧ ₹40,000 ಲಂಚ ಪಡೆಯುವಾಗ ಬಿಬಿಎಂಪಿಯ ಆರೋಗ್ಯ ವಿಭಾಗದ ಅಧಿಕಾರಿ ನಿರ್ಮಲಾ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಆಡುಗೋಡಿ ನಿವಾಸಿ ಎಂ.ಕೆ.ಸುಬ್ರಹ್ಮಣ್ಯ ಅವರು ಇಂದಿರಾನಗರದಲ್ಲಿ ಸಲೂನ್ ಆರಂಭಿಸುತ್ತಿದ್ದು, ಅದಕ್ಕೆ ಅಗತ್ಯವಿದ್ದ ಪರವಾನಗಿ ಪಡೆಯಬೇಕಿತ್ತು. ಈ ಸಂಬಂಧ ಬಿಬಿಎಂಪಿ ದೊಮ್ಮಲೂರು ಉಪವಿಭಾಗದ ಆರೋಗ್ಯ ನಿರೀಕ್ಷಕಿ ನಿರ್ಮಲಾ ಅವರಿಗೆ ಅರ್ಜಿ ಸಲ್ಲಿಸಿದ್ದರು. ಈ ಕೆಲಸಕ್ಕಾಗಿ ₹40,000 ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಲೋಕಾಯುಕ್ತ ಪೊಲೀಸರು ಮಾಹಿತಿ ನೀಡಿದ್ದಾರೆ.

ಈ ಸಂಬಂಧ ಸುಬ್ರಹ್ಮಣ್ಯ ಅವರು ನೀಡಿದ್ದ ದೂರಿನ ಆಧಾರದಲ್ಲಿ ಕಾರ್ಯಾಚರಣೆ ರೂಪಿಸಲಾಗಿತ್ತು. ಅದರಂತೆ ಅವರು ಶನಿವಾರ ನಿರ್ಮಲಾ ಅವರ ಕಚೇರಿಗೆ ತೆರಳಿ ಲಂಚ ನೀಡಿದ್ದರು. ಆಗಲೇ ದಾಳಿ ನಡೆಸಿ ಅವರನ್ನು ಬಂಧಿಸಲಾಯಿತು. ನಗದು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರೆಸಲಾಗಿದೆ ಎಂದು ತಿಳಿಸಿದ್ದಾರೆ.

ಹೈದರ್ ಅಲಿ ಕೊಲೆ ಪ್ರಕರಣ: ಹೊಂಚು ಹಾಕಿ ಕೃತ್ಯ

ಕೊಲೆಗೂ ಮೊದಲು ನಡೆದಿತ್ತು ಸಂಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೌಡಿ ಶೀಟರ್, ಆನೆಪಾಳ್ಯದ ನಿವಾಸಿ ಹೈದರ್ ಅಲಿ ಹಾಗೂ ನಾಜ್ ತಂಡದ ಮಧ್ಯೆ ಕೆಲವು ತಿಂಗಳ ಹಿಂದೆ ಸಂಧಾನ ನಡೆದಿತ್ತು. ಸಂಧಾನದ ಬಳಿಕವೂ ಕೊಲೆಗೆ ಸಂಚು ರೂಪಿಸಿದ್ದ ಆರೋಪಿಗಳು, ಹೊಂಚು ಹಾಕಿ ಹೈದರ್ ಅಲಿಯನ್ನು ಕೊಲೆ ಮಾಡಿದ್ದಾರೆ’ ಎಂಬುದು ಪೊಲೀಸ್ ತನಿಖೆಯಿಂದ ಗೊತ್ತಾಗಿದೆ.

ಎರಡು ರೌಡಿ ತಂಡಗಳ ಮಧ್ಯೆ ನಡೆದಿದ್ದ ಸಂಧಾನ ಸಭೆಯ ವಿಡಿಯೊವೊಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಆ ವಿಡಿಯೊವನ್ನು ಜಪ್ತಿ ಮಾಡಿಕೊಂಡಿರುವ ತನಿಖಾಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಗೊತ್ತಾಗಿದೆ.

‘ಇದು ಐತಿಹಾಸಿಕ ದಿನ. ಕರ್ನಾಟಕದ ಇತಿಹಾಸದಲ್ಲಿ ನೆನಪಿನಲ್ಲಿ ಇಡಬೇಕಾದ ದಿನವಾಗಿದೆ. ಎಲ್ಲರೂ ಒಂದಾಗಿದ್ದೇವೆ. ನಾಜ್, ಹೈದರ್, ಅಬ್ಬಾಸ್ ಎಲ್ಲರೂ ಇಲ್ಲಿ ಇದ್ದೇವೆ. ಈ ದಿನ ಮರೆಯಲು ಸಾಧ್ಯವಿಲ್ಲ’ ಎಂದು ವ್ಯಕ್ತಿಯೊಬ್ಬ ಹೇಳುತ್ತಾ ಎಲ್ಲರೂ ಊಟ ಮಾಡುತ್ತಿರುವ ದೃಶ್ಯವು ವಿಡಿಯೊದಲ್ಲಿ ದಾಖಲಾಗಿದೆ.

ಅಶೋಕನಗರದ ಫುಟ್‌ಬಾಲ್ ಮೈದಾನದ ಬಳಿ ಶುಕ್ರವಾರ ಮಧ್ಯರಾತ್ರಿ ಹೈದರ್ ಅಲಿಯ ಕೊಲೆ ನಡೆದಿತ್ತು. ಕೊಲೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಶಿವಮೊಗ್ಗದ ಹಾಗೂ ಆನೆಪಾಳ್ಯದ ನಾಲ್ವರು ರೌಡಿಗಳೂ ಸೇರಿದಂತೆ ಏಳು ಮಂದಿಯನ್ನು ಬಂಧಿಸಿದ್ದಾರೆ.

‘20 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದೇನೆ. ಬಿಬಿಎಂಪಿ ಚುನಾವಣೆಗೆ ವಾರ್ಡ್‌ವೊಂದರಿಂದ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದೆ. ಸಹೋದರ ಹೈದರ್ ಅಲಿ ಸಹ ನನಗೆ ಬೆಂಬಲ ನೀಡುತ್ತಿದ್ದ. ರಾಜಕೀಯ ಕಾರಣಕ್ಕೆ ತಮ್ಮನ ಕೊಲೆ ಮಾಡಲಾಗಿದೆ. ಕೊಲೆಯ ಹಿಂದೆ ವ್ಯಕ್ತಿಯೊಬ್ಬರ ಕೈವಾಡವಿದೆ’ ಎಂದು ಹೈದರ್ ಅಲಿ ಅವರ ಅಣ್ಣ ಸೈಯದ್ ಸಲೀಂ ಮತ್ತು ಅತ್ತಿಗೆ ಅಬೀದಾ ಆರೋಪ ಮಾಡಿದ್ದಾರೆ.

‘2017ರಲ್ಲೂ ಹೈದರ್ ಅಲಿ ಮೇಲೆ ವಿರೋಧಿಗಳು ಮಾರಕಾಸ್ತ್ರಗಳಿಂದ ದಾಳಿ ನಡೆಸಿದ್ದರು. ಆಗ ಹೈದರ್ ಪಾರಾಗಿದ್ದ’ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.

‘ಶಾಸಕರ ನೆರವಿನಿಂದ ಕ್ಷೇತ್ರದಲ್ಲಿ ಇಬ್ಬರೂ ಉತ್ತಮ ಕೆಲಸ ಮಾಡುತ್ತಿದ್ದೆವು. ಅದನ್ನು ವಿರೋಧಿಗಳು ಸಹಿಸದೇ ಕೃತ್ಯ ಎಸಗಿದ್ದಾರೆ. ತಮ್ಮ ಮಾತನ್ನೇ ಹೈದರ್ ಕೇಳಬೇಕೆಂದು ನಾಜ್ ಹಾಗೂ ಅಬ್ಬಾಸ್ ಬಯಸುತ್ತಿದ್ದರು. ಆದರೆ, ನನ್ನ ತಮ್ಮ ಕ್ಷೇತ್ರದಲ್ಲಿ ಪ್ರತ್ಯೇಕವಾಗಿ ಕೆಲಸ ಮಾಡುತ್ತಿದ್ದ’ ಎಂದು ಸಲೀಂ ಹೇಳಿದ್ದಾರೆ.

‘ಧರ್ಮ ಗ್ರಂಥದ ಮೇಲೆ ವಿರೋಧಿಗಳು ಆಣೆ ಪ್ರಮಾಣ ಮಾಡಿದ್ದರು. ಆ ಕಾರಣಕ್ಕೆ ಹೈದರ್ ಅಲಿ ಮತ್ತೆ ಸ್ನೇಹ ಬೆಳೆಸಿದ್ದ’ ಎಂದು ಅಬೀದಾ ದೂರಿದ್ದಾರೆ.

ಗಾರ್ಮೆಂಟ್ಸ್ ಭದ್ರತಾ ಸಿಬ್ಬಂದಿ ಕೊಲೆ

ಪ್ರಜಾವಾಣಿ ವಾರ್ತೆ

ಗಣೇಶ್

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ಟಿಂಬರ್ ಯಾರ್ಡ್ ಬಳಿ ಭದ್ರತಾ ಸಿಬ್ಬಂದಿ ಗಣೇಶ್ ಬಹದ್ದೂರ್ ರಾವಲ್ (30) ಎಂಬುವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ವಾಹನ ನಿಲುಗಡೆ ವಿಚಾರಕ್ಕೆ ನಡೆದ ಗಲಾಟೆ ವೇಳೆ ಕೊಲೆ ಮಾಡಿ ಆರೋಪಿ ಪರಾರಿ ಆಗಿದ್ದಾನೆ. ಶುಕ್ರವಾರ ರಾತ್ರಿ ಘಟನೆ ನಡೆದಿದೆ. ಆರೋಪಿ ಫುಡ್ ಡೆಲಿವರಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ. ಆರೋಪಿಯ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಠಾಣಾ ವ್ಯಾಪ್ತಿಯ ಗಾರ್ಮೆಂಟ್ಸ್‌ನಲ್ಲಿ ಬಹದ್ದೂರ್ ರಾವಲ್ ಕೆಲಸ ಮಾಡುತ್ತಿದ್ದರು. ಆರೋಪಿ ಗಾರ್ಮೆಂಟ್ಸ್‌ಗೆ ಗುರುವಾರ ಬಂದಿದ್ದ. ಆಗ ದ್ವಿಚಕ್ರ ವಾಹನ ನಿಲುಗಡೆಯ ವಿಚಾರಕ್ಕೆ ಭದ್ರತಾ ಸಿಬ್ಬಂದಿ ಹಾಗೂ ಆರೋಪಿ ಮಧ್ಯೆ ಗಲಾಟೆ ನಡೆದಿತ್ತು. ಬಳಿಕ ಆರೋಪಿ ಅಲ್ಲಿಂದ ತೆರಳಿದ್ದ. ಗಾರ್ಮೆಂಟ್ಸ್‌ನಿಂದ ನೌಕರರು ಶುಕ್ರವಾರ ರಾತ್ರಿ ಮನೆಗೆ ತೆರಳಿದ ಮೇಲೆ ಸ್ಥಳಕ್ಕೆ ಬಂದಿದ್ದ ಆರೋಪಿ ಮತ್ತೆ ವಾಗ್ವಾದ ನಡೆಸಿದ್ದ. ಆಗ ಚಾಕುವಿನಿಂದ ಇರಿದು ಪರಾರಿ ಆಗಿದ್ದಾನೆ’ ಎಂದು ಪೊಲೀಸರು ಹೇಳಿದರು.

67ನೇ ಸಿಸಿಎಚ್ ನ್ಯಾಯಾಲಯದ ಆದೇಶ

ಇಬ್ಬರ ಕೊಲೆ: ಅಪರಾಧಿಗೆ 10 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಎಂ.ಗಣೇಶ್

ಬೆಂಗಳೂರು: ಚಾಕುವಿನಿಂದ ಇರಿದು ಇಬ್ಬರನ್ನು ಕೊಲೆ ಮಾಡಿದ್ದ ಅಪರಾಧಿ, ಅಂಜನಪ್ಪ ಗಾರ್ಡನ್ ನಿವಾಸಿ ಎಂ.ಗಣೇಶ್ ಎಂಬಾತನಿಗೆ 67ನೇ ಸಿಸಿಎಚ್ ನ್ಯಾಯಾಲಯವು 10 ವರ್ಷ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಆದೇಶಿಸಿದೆ.

ಕಾಟನ್‌ಪೇಟೆ ಪೊಲೀಸ್ ಠಾಣಾ ವ್ಯಾಪ್ತಿಯ ಬಾಳೆಕಾಯಿ ಮಂಡಿಯಲ್ಲಿ 2020ರ ಅಕ್ಟೋಬರ್ 18ರಂದು ಅಂಜನಪ್ಪ ಗಾರ್ಡನ್ ನಿವಾಸಿ ಮಾರಿ(34) ಹಾಗೂ ಮೈಸೂರು ರಸ್ತೆಯ ಫ್ಲವರ್ ಗಾರ್ಡನ್ ನಿವಾಸಿ ರಾಜೇಶ್ ಎಂಬುವರನ್ನು ಕೊಲೆ ಮಾಡಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ಬಾಳೆಕಾಯಿ ಮಂಡಿಯಲ್ಲಿ ಇಬ್ಬರನ್ನು ಕೊಲೆ ಮಾಡಿ, ನಾಲ್ವರನ್ನು ಗಾಯಗೊಳಿಸಿದ್ದ ಆರೋಪವು ಸಾಬೀತಾದ ಹಿನ್ನೆಲೆಯಲ್ಲಿ ಹೆಚ್ಚುವರಿ ನ್ಯಾಯಾಧೀಶ ಎ.ಜಯಪ್ರಕಾಶ್ ಅವರು ಅಪರಾಧಿ ಗಣೇಶ್‌ಗೆ 10 ವರ್ಷ ಜೈಲು ಶಿಕ್ಷೆ, ₹10 ಸಾವಿರ ದಂಡ ವಿಧಿಸಿದ್ದಾರೆ.

ಮೃತಪಟ್ಟ ಇಬ್ಬರ ಕುಟುಂಬಕ್ಕೂ ಪರಿಹಾರ ವಿತರಣೆ ಮಾಡುವಂತೆ ಜಿಲ್ಲಾ ಕಾನೂನು ನೆರವು ಸಮಿತಿಗೆ ನ್ಯಾಯಾಧೀಶರು ಆದೇಶಿಸಿದ್ದಾರೆ. ಸರ್ಕಾರಿ ವಕೀಲರಾಗಿ ಬಿ.ಎಸ್.ಪಾಟೀಲ್ ಅವರು ವಾದ ಮಂಡಿಸಿದ್ದರು.

ನಗರದ ಡಾಲರ್ಸ್ ಕಾಲೊನಿ, ಸಂಜಯ್‌ನಗರ, ಎಜಿಎಸ್ ಬಡಾವಣೆಗಳ 300 ಪೌರ ಕಾರ್ಮಿಕರಿಗೆ ಲೋಹಿಯಾ ವಿಚಾರ ವೇದಿಕೆಯಿಂದ ಶನಿವಾರ ಸೊಳ್ಳೆ ಪರದೆಗಳನ್ನು ವಿತರಿಸಲಾಯಿತು. ವೇದಿಕೆಯ ಅಧ್ಯಕ್ಷ ಬಿ.ಎಸ್.ಶಿವಣ್ಣ, ಪಳನಿ ಲೋಗನಾಥನ್, ಕೆ.ಫಾತಿಮಾ, ಹರಿತಾ, ರಮೇಶ್ ಚಂದ್ರ, ತೇಜಸ್ಕರ್, ವಿನಯ್ ಹಾಗೂ ಪ್ರಸಾದ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ನಿಧನ ವಾರ್ತೆ

ಆರ್.ಯಲ್ಲಪ್ಪ

ರಾಜರಾಜೇಶ್ವರಿ ನಗರ: ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿ ಮಾಜಿ ನಿರ್ದೇಶಕ ಆರ್.ಯಲ್ಲಪ್ಪ (80) ಅವರು ಅನಾರೋಗ್ಯದಿಂದ ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ. ಅಂತ್ಯಕ್ರಿಯೆ ಬೆಂಗಳೂರು ದಕ್ಷಿಣ ತಾಲ್ಲೂಕು ಕೆ.ಗೊಲ್ಲಹಳ್ಳಿಯಲ್ಲಿ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ

‘ಮಕ್ಕಳು ದಾರಿ ತಪ್ಪಲು ಹಿರಿಯರೇ ಕಾರಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವಜನರು ದಾರಿ ತಪ್ಪುವುದಲ್ಲ. ಹೆತ್ತವರು, ಶಿಕ್ಷಕರು ಸೇರಿದಂತೆ ನಾವು ಸರಿದಾರಿ ತೋರದೇ ದಾರಿ ತಪ್ಪುವಂತೆ ಮಾಡುತ್ತಿದ್ದೇವೆ’ ಎಂದು ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು ತಿಳಿಸಿದರು.

ಸರ್ಕಾರಿ ಜಮೀನುಗಳನ್ನು ಭೂಮಾಫಿಯಾದಿಂದ ಸಂರಕ್ಷಿಸಲು, ಸರ್ಕಾರ, ಸರ್ಕಾರಿ ಅಧಿಕಾರಿಗಳು, ನ್ಯಾಯಾಲಯಗಳು ಮತ್ತು ಸಾರ್ವಜನಿಕರ ಪಾತ್ರ ಕುರಿತು ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ ಶುಕ್ರವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಹಿಂದೆ ಮಕ್ಕಳು ತಪ್ಪು ಮಾಡಿದರೆ ಹೆತ್ತವರು ಬುದ್ಧಿ ಹೇಳಿ ಸರಿಪಡಿಸುತ್ತಿದ್ದರು. ಅಗತ್ಯ ಬಿದ್ದರೆ ಶಿಕ್ಷೆಯನ್ನೂ ಕೊಡುತ್ತಿದ್ದರು. ಶಾಲೆಗಳಲ್ಲಿಯೂ ಇದೇ ಪದ್ಧತಿ ಇರುತ್ತಿತ್ತು. ಜೊತೆಗೆ ನೀತಿ ಪಾಠಗಳೂ ಇರುತ್ತಿದ್ದವು. ಸರಿ ಯಾವುದು, ತಪ್ಪು ಯಾವುದು ಎಂಬುದು ಮಕ್ಕಳಿಗೆ ಗೊತ್ತಾಗುತ್ತಿತ್ತು. ಈಗ ಹೆತ್ತವರಿಗೆ ಸಮಯ ಇಲ್ಲ. ಮಕ್ಕಳ ಕೈಗೆ ಮೊಬೈಲ್ ನೀಡಿ ತಮ್ಮ ಕೆಲಸದಲ್ಲಿ ಮುಳುಗಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ರಾಜ್ಯಮಟ್ಟದ ವಿಚಾರಸಂಕಿರಣದಲ್ಲಿ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರೊಂದಿಗೆ ಎ.ಟಿ.ರಾಮಸ್ವಾಮಿ ಚರ್ಚೆಯಲ್ಲಿ ತೊಡಗಿದ್ದರು. ಬಿ.ಎಚ್.ಸುರೇಶ್ ಹಾಗೂ ಕೆ.ಎಚ್.ರಾಮಲಿಂಗಾರೆಡ್ಡಿ ಹಾಜರಿದ್ದರು —ಪ್ರಜಾವಾಣಿ ಚಿತ್ರ

‘ಶಾಲಾ ಕಾಲೇಜುಗಳಲ್ಲಿ ನಮ್ಮ ಕಾಲಕ್ಕಿಂತ ಹತ್ತು ಪಟ್ಟು ಉತ್ತಮ ವಿದ್ಯೆ ನೀಡಲಾಗುತ್ತಿದೆ. ವ್ಯಕ್ತಿತ್ವ ನಿರ್ಮಾಣ ಆಗುತ್ತಿಲ್ಲ. ಆಟಂ ಬಾಂಬ್ ತಯಾರಿಸುವುದು ಹೇಗೆ ಎಂಬುದನ್ನೂ ಹೇಳಿಕೊಡಲಾಗುತ್ತಿದೆ. ಆದರೆ, ಅದರ ಬಳಕೆ ಹೇಗೆ ಎಂಬುದನ್ನು ಕಲಿಸುತ್ತಿಲ್ಲ’ ಎಂದು ಸಂತೋಷ್ ಹೆಗ್ಡೆ ಅವರು ಹೇಳಿದರು.

ರಾಜ್ಯದ ವಿವಿಧೆಡೆ ಭೂ ಕಬಳಿಕೆಯ ವಿರುದ್ಧ ಹೋರಾಟ ಮಾಡಿರುವ ಸ್ನೇಹಮಯಿ ಕೃಷ್ಣ, ಬಿ.ಎಚ್. ಸುರೇಶ್, ಎ.ಆರ್. ಶಶಿಕುಮಾರ್, ಸೋಮನಾಥ ನಾಯಕ್, ರಂಜನ್ ರಾವ್, ನಳಿನಗೌಡ, ದೊರೆಸ್ವಾಮಿ, ದಯಾನಂದ, ಶ್ರೀನಿವಾಸ್, ರಾಜಾನುಕುಂಟೆ ಲೋಕೇಶ್ ಗೌಡ, ಮಂಗಳೂರಿನ ಲೋಕೇಶ್ ಗೌಡ, ಟಿ.ಎಸ್. ಮುರಳೀಧರ, ವೆಂಕಟೇಶ್ ಭೋವಿ, ಪುರುಷೋತ್ತಮ, ಮುನಿಯಪ್ಪ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ಭೂ ಕಬಳಿಕೆ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ ಎ.ಟಿ. ರಾಮಸ್ವಾಮಿ, ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ ಅಧ್ಯಕ್ಷ ಕೆ.ಎಚ್. ರಾಮಲಿಂಗಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಭಾಗವಹಿಸಿದ್ದರು.

ಜನರಿಗೆ ತೃಪ್ತಿ ಇಲ್ಲದಿರುವುದೇ ಭ್ರಷ್ಟಾಚಾರಕ್ಕೆ ಕಾರಣ. ಇದ್ದಿದ್ದರಲ್ಲಿ ಸಂತೋಷ ಪಡುವುದನ್ನು ಕಲಿಯಬೇಕು. ಕನಸು ಇರುವುದು ತಪ್ಪಲ್ಲ. ಯಾರ ಜೇಬಿಗೂ ಕೈ ಹಾಕದೇ ಸರಿದಾರಿಯಲ್ಲಿ ಸಾಗುವುದು ಮುಖ್ಯ

ಎನ್. ಸಂತೋಷ್ ಹೆಗ್ಡೆ
ನಿವೃತ್ತ ನ್ಯಾಯಮೂರ್ತಿ

ಮೈಲಹಳ್ಳಿ ರೇವಣ್ಣ, ವೆಂಕಟೇಶ ಇಂದ್ವಾಡಿಗೆ 'ಜಾನಪದ ತಜ್ಞ' ಪ್ರಶಸ್ತಿ • ಮಾರ್ಚ್ 15ರಂದು ಬೀದರ್‌ನಲ್ಲಿ ಪ್ರದಾನ

30 ಕಲಾವಿದರಿಗೆ ಜಾನಪದ ಅಕಾಡೆಮಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯು 2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಪ್ರಕಟಿಸಿದ್ದು, ಜಾನಪದ ವಿದ್ವಾಂಸರಾದ ಮೈಸೂರಿನ ಮೈಲಹಳ್ಳಿ ರೇವಣ್ಣ ಹಾಗೂ ವಿಜಯನಗರ ಜಿಲ್ಲೆಯ ವೆಂಕಟೇಶ ಇಂದ್ವಾಡಿ ಅವರು 'ಜಾನಪದ ತಜ್ಞ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತಾ ಅವರು ಪ್ರಶಸ್ತಿಗೆ ಆಯ್ಕೆಯಾದವರ ಪಟ್ಟಿಯನ್ನು ಇಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

'ವಾರ್ಷಿಕ ಗೌರವ ಪ್ರಶಸ್ತಿಗೆ 30 ಜಿಲ್ಲೆಗಳಿಂದ 30 ಕಲಾವಿದರನ್ನು ಆಯ್ಕೆ ಮಾಡಲಾಗಿದೆ. 'ಜಾನಪದ ತಜ್ಞ ಪ್ರಶಸ್ತಿ'ಯು ತಲಾ ₹50 ಸಾವಿರ ನಗದು ಹಾಗೂ 'ಗೌರವ ಪ್ರಶಸ್ತಿ'ಯು ತಲಾ ₹25 ಸಾವಿರ ನಗದು ಒಳಗೊಂಡಿದೆ' ಎಂದು ಗೊಲ್ಲಹಳ್ಳಿ ಶಿವಪ್ರಸಾದ್ ಹೇಳಿದರು.

ಗೊಲ್ಲಹಳ್ಳಿ ಶಿವಪ್ರಸಾದ್

'2024ನೇ ಸಾಲಿನ ವಾರ್ಷಿಕ ಪ್ರಶಸ್ತಿ ಜತೆಗೆ ಈ ಹಿಂದೆ ಘೋಷಿಸಲಾಗಿರುವ 2023ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾರ್ಚ್ 15ರಂದು ಬೀದರ್ ಜಿಲ್ಲೆಯ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 10 ಗಂಟೆಯಿಂದ ಜಾನಪದ ಕಲಾ ಪ್ರದರ್ಶನ ನಡೆಯಲಿದ್ದು, ಮಧ್ಯಾಹ್ನ 2 ಗಂಟೆಯಿಂದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಪ್ರಶಸ್ತಿ ಪ್ರದಾನ ಮಾಡುತ್ತಾರೆ' ಎಂದು ತಿಳಿಸಿದರು.

ಮೈಲಹಳ್ಳಿ ರೇವಣ್ಣ

ವೆಂಕಟೇಶ ಇಂದ್ವಾಡಿ

ಅಕಾಡೆಮಿ ಸದಸ್ಯರಾದ ಉಮೇಶ್, ಶಂಕ್ರಣ್ಣ ರಾಮಪ್ಪ ಸಂಕಣ್ಣನವರ, ರಂಗಪ್ಪ, ಕೆಂಕೆರೆ ಮಲ್ಲಿಕಾರ್ಜುನ, ಸಿ.ಎನ್. ಮಂಜೇಶ್ ಚೆನ್ನಾಪುರ, ಹುಲಿಕುಂಟೆ ಮೂರ್ತಿ ಹಾಗೂ ದೇವಾನಂದ ವರಪ್ರಸಾದ್ ಉಪಸ್ಥಿತರಿದ್ದರು.

ಗೌರವ ಪ್ರಶಸ್ತಿ: ಬೆಂಗಳೂರಿನ ಜೋಗಿಲ ಸಿದ್ದರಾಜು (ಜಾನಪದ ಗಾಯನ), ಬೆಂಗಳೂರು ಗ್ರಾಮಾಂತರದ ಸಿದ್ದಯ್ಯ ಸಿ.ಎಚ್. (ತತ್ವಪದ ಮತ್ತು ಗೀಗಿ ಪದ), ರಾಮನಗರದ ಎಂ.ಮಹೇಶ್ (ಡೊಳ್ಳು ಕುಣಿತ), ಕೋಲಾರದ ಸುಬ್ಬಮ್ಮ (ಕೋಲಾಟ), ಚಿಕ್ಕಬಳ್ಳಾಪುರದ ವೆಂಕಟರಾಮಪ್ಪ (ಅರೆವಾದ್ಯ, ತಮಟೆ), ತುಮಕೂರಿನ ಸಿದ್ದಪ್ಪ (ಕಿನ್ನರಿ ಜೋಗಿ), ದಾವಣಗೆರೆಯ ಮಾತಂಗಪ್ಪ (ಭಜನೆ), ಚಿತ್ರದುರ್ಗದ ಎ. ಶ್ರೀನಿವಾಸ (ಹಗಲು ವೇಷ), ಶಿವಮೊಗ್ಗದ ಗೌರಮ್ಮ (ಹಸೆ ಚಿತ್ತಾರ), ಮೈಸೂರಿನ ಸಿ. ಮಂಜುನಾಥ (ಚಾಮರವಾದ್ಯ ನಗಾರಿ) ಹಾಗೂ ಮಂಡ್ಯದ ಹುರುಗಲವಾಡಿ ರಾಮಯ್ಯ (ಜಾನಪದ ಗಾಯನ).

ಹಾಸನದ ಬಿ.ಟಿ.ಮಾನವ (ಕೋಲಾಟ), ಚಿಕ್ಕಮಗಳೂರಿನ ಬಿ.ಪಿ. ಪರಮೇಶ್ವರಪ್ಪ (ಭಜನೆ), ಚಾಮರಾಜನಗರದ ಸಿದ್ದರಾಜು ಆರ್. (ತಂಬೂರಿ ಪದ), ದಕ್ಷಿಣ ಕನ್ನಡದ ಜಯಂತಿ (ಪಾಡ್ದನ), ಉಡುಪಿಯ ಎನ್. ಗಣೇಶ್ ಗಂಗೊಳ್ಳಿ (ಜಾನಪದ ಗಾಯನ), ಕೊಡಗಿನ ಎಸ್.ಆರ್. ಸರೋಜ (ಬುಡಕಟ್ಟು ಕೋಲಾಟ, ಚೀನಿ ಕೊಯ್ಯುವ ಹಾಡು ಮತ್ತು ನೃತ್ಯ), ಬೆಳಗಾವಿಯ ಕಮಲಾ ಮರಗನ್ನವರ (ಚೌಡಕಿ ಪದ), ಧಾರವಾಡದ ಪ್ರಭು ಬಸಪ್ಪ ಕುಂದರಗಿ (ಜಾನಪದ ಸಂಗೀತ), ವಿಜಯಪುರದ ಸೋಮಣ್ಣ ದುಂಡಪ್ಪ ಧನಗೊಂಡ (ಡೊಳ್ಳು ಕುಣಿತ).

ಬಾಗಲಕೋಟೆಯ ಗಂಗಪ್ಪ ಮ. ಕರಡಿ (ಕರಡಿ ಮಜಲು), ಉತ್ತರ ಕನ್ನಡದ ಗಣಪು ಬಡವಾ ಗೌಡ (ಹಾಲಕ್ಕಿ ಸುಗ್ಗಿ ಕುಣಿತ), ಹಾವೇರಿಯ ಗಿರಿಜವ್ವ ಹನುಮಪ್ಪ ಬಣಕಾರ (ಸಂಪ್ರದಾಯದ ಪದ, ಸೋಬಾನೆ ಪದ), ಗದಗ ಗೋವಿಂದಪ್ಪ ರಾಮಚಂದ್ರಪ್ಪ ವೇಷಗಾರ (ಹಗಲು ವೇಷ), ಕಲಬುರಗಿಯ ಬೋರಮ್ಮ (ತತ್ವಪದ), ಬೀದರ್‌ನ ಮಾರುತಿ ಕೋಳಿ (ಜನಪದ ಗಾಯನ), ರಾಯಚೂರಿನ ಯಲ್ಲಮ್ಮ (ತತ್ವಪದ), ಕೊಪ್ಪಳದ ಎಚ್. ಚಂದ್ರಶೇಖರ ಹಡಪದ (ಭಜನೆ), ಬಳ್ಳಾರಿಯ ಕೆ. ಶಂಕರಪ್ಪ (ಹಗಲುವೇಷ) ಹಾಗೂ ಯಾದಗಿರಿಯ ಗೋಪಣ್ಣ (ತತ್ವಪದ, ಭಜನೆ).

ಶಾಸಕ ರಾಜು ಕಾಗೆ ಪುತ್ರಿ ಸಾವು

ಪ್ರಜಾವಾಣಿ ವಾರ್ತೆ

ಕಾಗವಾಡ (ಬೆಳಗಾವಿ ಜಿಲ್ಲೆ): ಕಾಗವಾಡ ಶಾಸಕ ರಾಜು ಕಾಗೆ ಅವರ ಹಿರಿಯ ಪುತ್ರಿ ಕೃತಿಕಾ ಭರಮಗೌಡ ಕಾಗೆ (36) ಅವರು ಶನಿವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟರು. ಅವರಿಗೆ ಪತಿ ಡಾ.ಅನಿಲ ಪಾಟೀಲ ಮತ್ತು ಮೂರು ವರ್ಷದ ಪುತ್ರಿ ಇದ್ದಾರೆ. ಕೆಲ ತಿಂಗಳುಗಳಿಂದ ಅವರು ಹೃದಯ ಸಂಬಂಧಿ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರು ಎಳೆದರು ಎಂದು ಕುಟುಂಬದವರು ತಿಳಿಸಿದ್ದಾರೆ.

ಕೃತಿಕಾ

ಶಾಸಕ ರಾಜು ಕಾಗೆ ಅವರಿಗೆ ಇಬ್ಬರು ಪುತ್ರಿಯರಿದ್ದು, ಕೃತಿಕಾ ಮೊದಲನೆಯವರು. ರಾಜು ಕಾಗೆ ಅವರ ಸ್ವಗ್ರಾಮವಾದ ಉಗಾರದಲ್ಲಿ ಭಾನುವಾರ ಅಂತ್ಯಕ್ರಿಯೆ ನಡೆಯಲಿದೆ.

ಅಧಿಕ ತಾಪಮಾನ, ಮಳೆ ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಉಷ್ಣಾಂಶದ ಗಣನೀಯ ಏರಿಕೆಯಾಗುವ ಸಾಧ್ಯತೆ ಇದ್ದು, ಮಾರ್ಚ್‌ನ ಆರಂಭದಲ್ಲಿ ಕೆಲ ದಿನಗಳು ಬಿಸಿ ಗಾಳಿ ಬೀಸುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಾರ್ಚ್ ತಿಂಗಳು ಉತ್ತರ ಒಳನಾಡಿನ ಬಹುತೇಕ ಕಡೆ ಎರಡರಿಂದ ಐದು ದಿನಗಳು ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ. ಈ ತಿಂಗಳು ರಾಜ್ಯದಾದ್ಯಂತ ವಾಡಿಕೆಗಿಂತ ಅಧಿಕ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.



ಮೂರು ತಿಂಗಳು ಉತ್ತರ ಒಳನಾಡು ಹಾಗೂ ಕರಾವಳಿಯ ಕೆಲವು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಅಧಿಕ ತಾಪಮಾನ ವರದಿಯಾಗಲಿದೆ. ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಬಿಸಿ ಗಾಳಿ ಬೀಸುವ ಸಂಭವವಿದೆ. ಬಿಸಿ ಗಾಳಿ ಸಂದರ್ಭದಲ್ಲಿ ಅಧಿಕ ತಾಪಮಾನವು ವೃದ್ಧರು, ಮಕ್ಕಳು ಹಾಗೂ ಅನಾರೋಗ್ಯ ಪೀಡಿತರನ್ನು ಕಾಡಲಿದೆ. ನಿರ್ಜಲೀಕರಣ, ಆಯಾಸ ಉಂಟಾಗಲಿದೆ. ಈ ಸವಾಲುಗಳನ್ನು ಎದುರಿಸಲು ಅಧಿಕಾರಿಗಳು ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಬೇಕು ಎಂದಿದೆ.

ಬಿಸಿ ಗಾಳಿ ಪರಿಣಾಮಗಳನ್ನು ನಿವಾರಿಸಲು ಕಾರ್ಯತಂತ್ರಗಳನ್ನು ರೂಪಿಸಬೇಕಿದೆ. ಸಾರ್ವಜನಿಕರ ಆರೋಗ್ಯ ಕಾಪಾಡಲು, ಬಿಸಿ ಗಾಳಿ ಪ್ರತಿಕೂಲ ಪರಿಣಾಮವನ್ನು ಕಡಿಮೆ ಮಾಡಲು ಪ್ರಯತ್ನಗಳು ಅತ್ಯಗತ್ಯ ಎಂದು ತಿಳಿಸಿದೆ.

ಸುಳ್ಯದಲ್ಲಿ 40.1 ಡಿಗ್ರಿ ಸೆಲ್ಸಿಯಸ್

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ (ಕೆಎಸ್‌ಎನ್‌ಡಿಎಂಸಿ) ಪ್ರಕಾರ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶನಿವಾರ 39 ಡಿಗ್ರಿ ಸೆಲ್ಸಿಯಸ್‌ನಿಂದ 40.1 ಡಿಗ್ರಿ ಸೆಲ್ಸಿಯಸ್‌ವರೆಗೆ ಉಷ್ಣಾಂಶ ವರದಿಯಾಗಿದೆ. ದಕ್ಷಿಣ ಕನ್ನಡದ ಸುಳ್ಯದಲ್ಲಿ ಅಧಿಕ ಉಷ್ಣಾಂಶ (40.1 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

ಕರಾವಳಿಯ ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ಭಾನುವಾರವೂ ಬಿಸಿ ಗಾಳಿಯ ಮುನ್ಸೂಚನೆ ನೀಡಲಾಗಿದೆ.

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
ಅತ್ಯಧಿಕ ತೆರಿಗೆ ಪಾವತಿದಾರರ ವಿಭಾಗ, 4ನೇ ಮಹಡಿ,ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ ಕಟ್ಟಡ, ಯಶವಂತಪುರ, ಬೆಂಗಳೂರು–560022, ದೂ.ಸಂ: (080)23470479
Email: jcct-ltu@ctd.ka.gov.in
ಸಂಖ್ಯೆ: ವಾತೆಜಂಆ(ಅ.ತೆ.ಪಾ.ವಿ)/ಡಿ.ಇ.ಓ/ಸಿಆರ್–04/2024–25 ದಿನಾಂಕ:01.03.2025

ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಅತ್ಯಧಿಕ ತೆರಿಗೆ ಪಾವತಿದಾರರ ವಿಭಾಗ, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 21 (ಇಪ್ಪತ್ತೊಂದು ಮಾತ್ರ) ದತ್ತಾಂಶ ನಮೂದಕರ ಸೇವೆಯನ್ನು ಒದಗಿಸಲು 1999 ರ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.03.2025.

ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಸಂಪರ್ಕಿಸಿ.
ದೂರವಾಣಿ ಸಂಖ್ಯೆ: 080–23470479
http:// www.kppp.karnataka.gov.in
http://www.ctax.kar.nic.in
ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು,
ಅತ್ಯಧಿಕ ತೆರಿಗೆ ಪಾವತಿದಾರರ ವಿಭಾಗ, ಬೆಂಗಳೂರು

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01 3ನೇ ಮಹಡಿ,
ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ ಕಟ್ಟಡ, ಯಶವಂತಪುರ, ಬೆಂಗಳೂರು–560022,
ದೂ.ಸಂ: (080) 23570382 Email: jcctdgsto1.bng@ctd.ka.gov.in
ಸಂಖ್ಯೆ: ವಾತೆಜಂಆ(ಆ)/ವಿಸ&ಸೇತೆಕ–01/ಎಸ್‌ಟಿಎನ್/ಸಿಆರ್–17/24–25 ದಿನಾಂಕ:28.02.2025

ಟೆಂಡರ್ ಅಧಿಸೂಚನೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಯಶವಂತಪುರ, ಬೆಂಗಳೂರು ಇವರ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು 97 (ತೊಂಬತ್ತೇಳು ಮಾತ್ರ) ದತ್ತಾಂಶ ನಮೂದಕರ ಸೇವೆಯನ್ನು ಒದಗಿಸಲು 1999 ರ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಪ್ರತಿಷ್ಠಿತ ಮಾನವ ಸಂಪನ್ಮೂಲ ಸಂಸ್ಥೆಯಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10.03.2025.

ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಸಂಪರ್ಕಿಸಿ.
ದೂರವಾಣಿ ಸಂಖ್ಯೆ: 080–23570382
http:// www.kppp.karnataka.gov.in
http://www.ctax.kar.nic.in
ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–1, ಬೆಂಗಳೂರು

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)
ಅಧೀಕ್ಷಕರ ಕಾರ್ಯಾಲಯ ಜಿಲ್ಲಾ ಕಾರಾಗೃಹ–ಮಂಗಳೂರು–575003
Phone: 0824-2492303, E-mail: dpmng.prisons-kar@gov.in
ಸಂಖ್ಯೆ:ಜಿಕಾಮಂ:ದರಖಾಸ್ತು:03:2024–25 ದಿನಾಂಕ: 28.02.2025

ದರಖಾಸ್ತು ಪ್ರಕಟಣೆ

2025–26ನೇ ಸಾಲಿಗೆ ಮಂಗಳೂರು ಜಿಲ್ಲಾ ಕಾರಾಗೃಹ ಹಾಗೂ ವ್ಯಾಪ್ತಿಯಲ್ಲಿ ಬರುವ ಉಡುಪಿ ಜಿಲ್ಲಾ ಕಾರಾಗೃಹದಲ್ಲಿ ದಾಖಲಿರುವ ಬಂದಿಗಳಿಗೆ ಊಟ ಮತ್ತು ಉಪಹಾರ ತಯಾರಿಸಲು ಅವಶ್ಯವಿರುವ ಲಾಟ್ ಸಂಖ್ಯೆ: 01 ರಿಂದ 05 ರಲ್ಲಿನ ಆಹಾರ ಧಾನ್ಯಗಳು/ಆಹಾರ ಪದಾರ್ಥಗಳು/ಸೊಪ್ಪು–ತರಕಾರಿ/ಹಣ್ಣು, ಮೀನು ಮತ್ತು ಕುರಿ ಮಾಂಸ, ಕೋಳಿ ಮೊಟ್ಟೆ, ಇತರೆ ವಸ್ತುಗಳ ಖರೀದಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರನ್ವಯ ಕೆಪಿಪಿ ಪೋರ್ಟಲ್ ಮೂಲಕ ದರಖಾಸ್ತನ್ನು ದಿನಾಂಕ: 28.02.2025 ರಂದು ಪ್ರಕಟಣೆ ಮಾಡಲಾಗಿದೆ.

(1) ಲಾಟ್ ಸಂಖ್ಯೆ 01 ರಿಂದ 05 ರವರೆಗಿನ ಲಾಟ್‌ಗಳ ಟೆಂಡರ್ ಪ್ರಕಟಣೆ ದಿನಾಂಕ: 28.02.2025 (2) ಲಾಟ್ ಸಂಖ್ಯೆ 01 ರಿಂದ 05 ರವರೆಗಿನ ಲಾಟ್‌ಗಳ ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 01.03.2025 (3) ಲಾಟ್ ಸಂಖ್ಯೆ 01 ರಿಂದ 05 ರವರೆಗಿನ ಲಾಟ್‌ಗಳ ಟೆಂಡರ್ ಬಗ್ಗೆ ವಿಚಾರಣೆ ಮತ್ತು ಸ್ಪಷ್ಟೀಕರಣ ಕೇಳಲು ಅಂತಿಮ ದಿನಾಂಕ: 07.03.2025 ರಂದು ಸಂಜೆ 5.00 ಗಂಟೆಗೆ (4) ಲಾಟ್ ಸಂಖ್ಯೆ 01 ರಿಂದ 05 ರವರೆಗಿನ ಲಾಟ್‌ಗಳ ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ: 15.03.2025 ರಂದು ಸಂಜೆ 05:00 ರವರೆಗೆ (5) ಲಾಟ್ ಸಂಖ್ಯೆ 01 ರಿಂದ 05 ರವರೆಗಿನ ಲಾಟ್‌ಗಳ ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 17.03.2025 ರಂದು ಬೆಳಿಗ್ಗೆ 11.00 ಗಂಟೆಗೆ (6) ಲಾಟ್ ಸಂಖ್ಯೆ 01 ರಿಂದ 05 ರವರೆಗಿನ ಲಾಟ್‌ಗಳ ಹಣಕಾಸಿನ ಲಕೋಟೆ ತೆರೆಯುವ ದಿನಾಂಕ: ನಂತರ ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ https://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದು. ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0824–2492303 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕರು
ಜಿಲ್ಲಾ ಕಾರಾಗೃಹ ಮಂಗಳೂರು
DIPR/MNG/KSMCA/1511/24-25 dt. 01.03.2025

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2024–25/2364 ದಿ:27.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–3 ಮುಖಾಂತರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ ಕೆ.ಕೆ.ಆರ್.ಡಿ.ಬಿ. ಯೋಜನೆಯಡಿ ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ 01 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 80.68 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 27.02.2025 ರಿಂದ ದಿನಾಂಕ: 06.03.2025 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 08.03.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 11.03.2025 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http:// kppp.karnataka.gov.in ನಲ್ಲಿ ಪಡೆಯಬಹುದು.

ಬೆಂಗಳೂರು: ಕೆಎಸ್‌ಆರ್‌ಟಿಸಿ 'ರಾಷ್ಟ್ರೀಯ ಸಾರ್ವಜನಿಕ ಉದ್ದಿಮೆಗಳ ಪ್ರಶಸ್ತಿ' ಮತ್ತು ವ್ಯವಸ್ಥಾಪಕ ನಿರ್ದೇಶಕರು 'ಪಿಎಸ್‌ಯು ಆತ್ಮನಿರ್ಭರ್ ನಾಯಕತ್ವ ಪ್ರಶಸ್ತಿ' ಪಡೆದಿದ್ದಾರೆ.

ಕರ್ನಾಟಕ ಸಾರಿಗೆ 1,184, ನಗರ ಸಾರಿಗೆ 115, ಐರಾವತ ಕ್ಲಬ್ ಕ್ಲಾಸ್ 15 ಬಸ್ಸುಗಳು ಸೇರಿ ನಿಗಮದಲ್ಲಿ ಒಟ್ಟು 1,314 ಬಸ್ಸುಗಳನ್ನು ಪುನಶ್ಚೇತನಗೊಳಿಸುವ ಮೂಲಕ ನಿಗಮಕ್ಕೆ ₹250 ಕೋಟಿಗೂ ಹೆಚ್ಚು ಉಳಿತಾಯ ಮಾಡಿದ್ದಕ್ಕಾಗಿ ರಾಷ್ಟ್ರೀಯ ಸಾರ್ವಜನಿಕ ಉದ್ದಿಮೆಗಳ ಪ್ರಶಸ್ತಿಯನ್ನು ಕೆಎಸ್‌ಆರ್‌ಟಿಸಿಗೆ ನೀಡಲಾಯಿತು.

ಆತ್ಮನಿರ್ಭರ್ ಭಾರತ್ ಪರಿಕಲ್ಪನೆಯ ಅಡಿ ಸ್ವಾವಲಂಬನೆಯನ್ನು ಉತ್ತೇಜಿಸುವ ಯೋಜನೆಯನ್ನು ಕೈಗೆತ್ತಿಕೊಂಡು ಅತ್ಯುತ್ತಮವಾಗಿ ನಿರ್ವಹಿಸಿದ್ದಕ್ಕಾಗಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಅವರಿಗೆ ಪಿಎಸ್‌ಯು ಆತ್ಮನಿರ್ಭರ್ ನಾಯಕತ್ವ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ದೆಹಲಿಯ 'ಗವರ್ನೆನ್ಸ್ ನೌ' ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಕಲ್ಲಿದ್ದಲು ಸಚಿವ ಸತೀಶ್‌ಚಂದ್ರ ದುಬೆ, ಮಾಜಿ ಸಚಿವ ಸತ್ಯಪಾಲ್ ಸಿಂಗ್ ಪ್ರಶಸ್ತಿ ಪ್ರದಾನ ಮಾಡಿದರು. ಕೆಎಸ್‌ಆರ್‌ಟಿಸಿ ಉಪ ಮುಖ್ಯ ಯಾಂತ್ರಿಕ ಎಂಜಿನಿಯರ್ ಬಿ.ಎಸ್. ನಾಗರಾಜ ಮೂರ್ತಿ ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ 'ಪಿಎಸ್‌ಯು ಆತ್ಮನಿರ್ಭರ್ ನಾಯಕತ್ವ ಪ್ರಶಸ್ತಿ' ಸ್ವೀಕರಿಸಿದರು

ದಲಿತ ಯುವಕನ ಮೇಲೆ ಹಲ್ಲೆ: ಮುಸ್ಲಿಂ ಯುವಕರ ಬಂಧನ

ಕನಕಪುರ: ಕಾಲೇಜು ಮುಗಿಸಿ ಗೆಳತಿ ಜತೆ ಹೋಗುತ್ತಿದ್ದ ದಲಿತ ವಿದ್ಯಾರ್ಥಿ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಮುಸ್ಲಿಂ ಯುವಕರನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕಾಲಕ್ ನಗರದ ವಸೀಂ, ಆತನ ಸ್ನೇಹಿತ ಜಮಾನ್ ಪಾಷಾ ಬಂಧಿತರು.

ಬಿಸಿಲಿನಿಂದ ರಕ್ಷಣೆ ಪಡೆಯಲು ತಲೆಗೆ ಕಪ್ಪು ದುಪ್ಪಟ ಸುತ್ತಿಕೊಂಡಿದ್ದ ಯುವತಿಗೆ ಕಾಲೇಜು ಐ.ಡಿ ಕಾರ್ಡ್ ತೋರಿಸುವಂತೆ ಯುವಕರು ಬೆದರಿಸಿದ್ದಾರೆ. ಯುವತಿಯ ಐ.ಡಿ. ಕಾರ್ಡ್ ನೋಡಿದ ಯುವಕರಿಗೆ ಆಕೆ ತಮ್ಮ ಧರ್ಮಕ್ಕೆ ಸೇರಿದವಳಲ್ಲ ಎಂದು ಗೊತ್ತಾಗುತ್ತಿದ್ದಂತೆ ಸ್ಥಳದಿಂದ ಪರಾರಿಯಾಗಲು ಯತ್ನಿಸಿದ್ದಾರೆ. ಕೂಡಲೇ ಸ್ಥಳದಲ್ಲಿದ್ದ ಸಾರ್ವಜನಿಕರು ಯುವಕರಿಬ್ಬರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

ವಂಡರ್‌ಲಾ ವಿಶೇಷ ಕೊಡುಗೆ

ರಾಮನಗರ: ಮನರಂಜನಾ ತಾಣವಾದ ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್ ಮಹಿಳಾ ದಿನಾಚರಣೆ ಪ್ರಯುಕ್ತ ಮಾರ್ಚ್ 8ರಂದು ಬೆಂಗಳೂರಿನಲ್ಲಿರುವ ತನ್ನ ಪಾರ್ಕ್‌ನಲ್ಲಿ ಮಹಿಳೆಯರಿಗಾಗಿ ವಿಶೇಷ ಕೊಡುಗೆ ಘೋಷಿಸಿದೆ. ಅಂದು ಮಹಿಳೆಯರು ಒಂದು ಟಿಕೆಟ್ ಖರೀದಿಸಿದರೆ ಮತ್ತೊಂದು ಟಿಕೆಟ್ ಉಚಿತವಾಗಿ ಸಿಗಲಿದೆ.

ಆ ಮೂಲಕ ಮಹಿಳಾ ದಿನವನ್ನು ವಿಶೇಷವಾಗಿ ಆಚರಿಸಲು ವಂಡರ್‌ಲಾ ಮುಂದಾಗಿದೆ. ಥೀಮ್ ಆಧಾರಿತ ಅಲಂಕಾರಗಳು, ಫೇಸ್ ಪೇಂಟಿಂಗ್ ಮತ್ತು ವೇವ್ ಪೂಲ್, ಡಿ.ಜೆ ಮ್ಯೂಸಿಕ್ ಸೇರಿದಂತೆ ವಿಶೇಷ ಮಹಿಳಾ ಚಿಂಗಾರಿ ಮೇಳವು ಈ ದಿನದ ವಿಶೇಷವಾಗಿರಲಿದೆ. ಸಂಜೆ ಜುಂಬಾ ಅಧಿವೇಶನ ಇರಲಿದ್ದು, ಟಿಕೆಟ್ ಜೊತೆಗೆ ಬಫೆ ಲಾಭ ಸಹ ಪಡೆಯಬಹುದು.

ಈ ಕೊಡುಗೆಯು ವಂಡರ್‌ಲಾದ ಆನ್‌ಲೈನ್ ಬುಕ್ಕಿಂಗ್ ಪೋರ್ಟಲ್ https://bookings.wonderla.com ನಲ್ಲಿ ಲಭ್ಯವಿದೆ. ಮಾಹಿತಿಗೆ: ಸಂಪರ್ಕ ಸಂಖ್ಯೆ: 80372 30333, 9945557777

'ಸಂಧಾನ ಇಲ್ಲ: 'ಮಾಡು ಇಲ್ಲವೇ ಮಡಿ'

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಚನ್ನರಾಯಪಟ್ಟಣ ಭೂ ಸ್ವಾಧೀನ ವಿರೋಧಿ ಹೋರಾಟ 1,063 ದಿನ ಪೂರೈಸಿದ್ದು ಇನ್ನು ಮುಂದೆ ಸಂಧಾನ ಮಾತುಕತೆ ಏನಿಲ್ಲ, ಏನಿದ್ದರೂ 'ಮಾಡು ಇಲ್ಲವೇ ಮಡಿ' ಹೋರಾಟ ಮಾತ್ರ ಎಂದು ಹೋರಾಟ ಸಮಿತಿ ಸದಸ್ಯರು ಶನಿವಾರ ಎಚ್ಚರಿಕೆ ನೀಡಿದ್ದಾರೆ.

ಚನ್ನರಾಯಪಟ್ಟಣ ಹೋಬಳಿಯ ರೈತರು ಧರಣಿ ಸ್ಥಳದಲ್ಲಿ ಸಭೆ ನಡೆಸಿ ಮಾಡು ಇಲ್ಲವೇ ಮಡಿ ಹೋರಾಟಕ್ಕೆ ಒಮ್ಮತದ ನಿರ್ಧಾರ ಮಾಡಿದರು.

ಕಳೆದ ಡಿಸೆಂಬರ್ 23 ರಂದು ಮುಖ್ಯಮಂತ್ರಿ ನಿವಾಸದಲ್ಲಿ ನಡೆದ ಸಭೆಯಲ್ಲಿ ತಿಂಗಳೊಳಗೆ ಚನ್ನರಾಯಪಟ್ಟಣ ಸಮಸ್ಯೆ ಬಗೆಹರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಆದರೆ, ಅವರು ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಗಡುವುಗಳ ಮೇಲೆ ಗಡುವು ನೀಡುತ್ತ ಹೋರಾಟದ ದಾರಿತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ರೈತರು ಗುಡುಗಿದರು.

'ನಮ್ಮ ಮುಂದಿನ ಹೋರಾಟವನ್ನು ಮಾಡು ಇಲ್ಲವೆ ಮಡಿ ಹಂತಕ್ಕೆ ಕೊಂಡೊಯ್ಯೋಣ. ರೈತರು ಹೋರಾಟ ತೀವ್ರ ಗೊಳಿಸಿದಾಗಲೆಲ್ಲ ಮಧ್ಯಪ್ರವೇಶ ಮಾಡುವ ಉಸ್ತುವಾರಿ ಸಚಿವರು ಕೆಲವೇ ದಿನಗಳಲ್ಲಿ ಸಮಸ್ಯೆ ಬಗೆಹರಿಯುತ್ತದೆ ಎಂದು ಹೇಳುವ ಮೂಲಕ ಹೋರಾಟದ ದಾರಿ ತಪ್ಪಿಸುತ್ತಿದ್ದಾರೆ. ಈ ಬಾ ಅವರ ಯಾವ ಮಾತಿಗೂ ಸೊಪ್ಪು ಹಾಕುವುದಿಲ್ಲ. ಇನ್ನು ಸಂಧಾನ ಮಾತುಕತೆಗಳೆಲ್ಲ ನಡೆಯುವುದಿಲ್ಲ' ಎಂದು ಸಭೆಯಲ್ಲಿ ಭಾಗವಹಿಸಿದ್ದ ರೈತರು, ಸಚಿವ ಕೆ.ಎಚ್. ಮುನಿಯಪ್ಪ ವಿರುದ್ಧ ಆಕ್ರೋಶ ಹೊರಹಾಕಿದರು.

ಆಂಜನೇಯರೆಡ್ಡಿ, ಜಿಜಿ ಹಳ್ಳಿ ನಾರಾಯಣಸ್ವಾಮಿ, ಕಾರಳ್ಳಿ ಶ್ರೀನಿವಾಸ್, ನಲ್ಲಪ್ಪನಹಳ್ಳಿ ನಂಜಪ್ಪ, ಮಾರೇಗೌಡ, ವೆಂಕಟೇಶ್, ಗೋಪಿನಾಥ್, ತಿಮ್ಮರಾಯಪ್ಪ, ಅಶ್ವತ್ಥಪ್ಪ, ಮುಕುಂದ, ಪ್ರಮೋದ್, ಮೋಹನ್, ನಂದನ್, ಕೃಷ್ಣಪ್ಪ, ಲಕ್ಷ್ಮಮ್ಮ, ವೆಂಕಟರಮಣಪ್ಪ, ಲೋಕೇಶ್ ಇದ್ದರು.

ದೇವನಹಳ್ಳಿ ತಾಲ್ಲೂಕು ಚನ್ನರಾಯಪಟ್ಟಣ ಹೋಬಳಿಯ ಧರಣಿ ಸ್ಥಳದಲ್ಲಿ ಭೂ ಸ್ವಾಧೀನ ವಿರೋಧಿ ಹೋರಾಟ ಸಮಿತಿಯ ಸದಸ್ಯರು ವಿವಿಧ ರೈತ ಮುಖಂಡರೊಂದಿಗೆ ಸಭೆ ನಡೆಸಿದರು

ಸ್ವಪಕ್ಷೀಯ ಶಾಸಕರಾದ ನಾರಾಯಣಸ್ವಾಮಿ, ರೂಪಕಲಾ ವಿರುದ್ಧ ದೂರು?

ಡಿಕೆಶಿ ಭೇಟಿಯಾದ ನಂಜೇಗೌಡ ಬಣ

• ಕೆ.ಓಂಕಾರ ಮೂರ್ತಿ

ಕೋಲಾರ: ಎರಡು ಬಣಗಳಲ್ಲಿ ಹಂಚಿ ಹೋಗಿರುವ ಜಿಲ್ಲೆಯ ಕಾಂಗ್ರೆಸ್ ಶಾಸಕರ ಜಗಳ ಬೀದಿಗೆ ಬಂದದ್ದು ದಿನಕ್ಕೊಂದು ತಿರುವು ಪಡೆಯುತ್ತಿದೆ.

ಒಂದು ಬಣದ ಶಾಸಕರು ಶನಿವಾರ ಬೆಂಗಳೂರಿನಲ್ಲಿ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದು ಕುತೂಹಲ ಮೂಡಿಸಿದೆ.

ಮಾಲೂರು ಶಾಸಕ ಕೆ.ವೈ. ನಂಜೇಗೌಡ, ಕೋಲಾರ ಶಾಸಕ ಕೊತ್ತೂರು ಮಂಜುನಾಥ್ ಹಾಗೂ ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್ ಈ ತಂಡದಲ್ಲಿದ್ದರು.

ಜಿಲ್ಲಾ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ವಿದ್ಯಮಾನ, ಡಿಸಿಸಿ ಬ್ಯಾಂಕ್ ಹಾಗೂ ಕೋಚಿಮುಲ್ ಚಟುವಟಿಕೆಗಳ ಬಗ್ಗೆ ಡಿ.ಕೆ.ಶಿವಕುಮಾರ್ ಅವರಿಗೆ ಮಾಹಿತಿ ನೀಡಿದರು ಎಂದು ತಿಳಿದು ಬಂದಿದೆ.

ಈ ಮೂವರು ಶಾಸಕರು ಭೇಟಿ ಮಾಡಿದ ವಿಚಾರವನ್ನು ಡಿ.ಕೆ. ಶಿವಕುಮಾರ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಬಜೆಟ್ ಕುರಿತು ಚರ್ಚಿಸಲು ಹೋಗಿದ್ದೆವು ಎನ್ನುತ್ತಲೇ ಹಲವಾರು ವಿಚಾರಗಳ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಮುಖವಾಗಿ ತಮ್ಮ ಮೇಲೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ವಿರುದ್ಧ ಕಳೆದ ಮೂರ್ನಾಲ್ಕು ದಿನಗಳಿಂದ ವಾಗ್ದಾಳಿ ನಡೆಸುತ್ತಿರುವ ಸ್ವಪಕ್ಷೀಯ ಶಾಸಕರಾದ ಬಂಗಾರಪೇಟೆಯ ಎಸ್.ಎನ್.ನಾರಾಯಣಸ್ವಾಮಿ ಹಾಗೂ ಕೆಜಿಎಫ್ ಶಾಸಕಿ ರೂಪಕಲಾ ಶಶಿಧರ್ ವಿರುದ್ಧ ದೂರು ನೀಡಿದ್ದಾರೆ ಎಂಬುದು ತಿಳಿದುಬಂದಿದೆ.

'ಕೋಲಾರದಲ್ಲಿ ಎರಡು ದಿನ ನಡೆದ ವಿಶೇಷ ಘಟಕದ ರಾಜ್ಯಮಟ್ಟದ ಜನಪರ ಉತ್ಸವಕ್ಕೆ ದಲಿತ ಶಾಸಕರಾದ ತಮ್ಮನ್ನು ಕಡೆಗಣಿಸಲಾಗಿದೆ ಎಂಬ ನೆಪದಲ್ಲಿ ಡಿಸಿಸಿ ಬ್ಯಾಂಕ್ ಹಾಗೂ ಕೋಚಿಮುಲ್ ವಿಚಾರ ಇಟ್ಟುಕೊಂಡು ನಮ್ಮ ವಿರುದ್ಧ ಇಬ್ಬರು ಶಾಸಕರು ಆರೋಪ ಮಾಡುತ್ತಿದ್ದಾರೆ. ಗೋಲ್ಡನ್ ಡೇರಿ, ಸೋಲಾರ್ ಘಟಕ ನಮ್ಮ ಸರ್ಕಾರದ ಯೋಜನೆಗಳು. ನಮ್ಮದೇ ಪಕ್ಷದ ಶಾಸಕರು ಸುಖಾಸುಮ್ಮನೇ ಆರೋಪ ಮಾಡುತ್ತಿದ್ದಾರೆ. ಇದರಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ವಿರೋಧ ಪಕ್ಷಗಳಾದ ಬಿಜೆಪಿ, ಜೆಡಿಎಸ್ ಪಕ್ಷಗಳೇ ಸುಮ್ಮನಿವೆ' ಎಂದು ಈ ಶಾಸಕರು, ಕೆಪಿಸಿಸಿ ಅಧ್ಯಕ್ಷರ ಗಮನಕ್ಕೆ ತಂದರು ಎಂದು ಮೂಲಗಳು ತಿಳಿಸಿವೆ.

ಈಚೆಗೆ ಎಸ್.ಎನ್. ನಾರಾಯಣಸ್ವಾಮಿ, 'ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಅವರನ್ನು ಜಿಲ್ಲೆಯ ಇಬ್ಬರು ಕಾಂಗ್ರೆಸ್ ಶಾಸಕರು ದಾರಿ ತಪ್ಪಿಸುತ್ತಿದ್ದಾರೆ. ಜಿಲ್ಲೆಯಲ್ಲಿ ತುಘಲಕ್ ದರ್ಬಾರ್ ನಡೆಯುತ್ತಿದೆ. ಸಚಿವರೂ ಆ ಮೇದಾವಿ ಶಾಸಕರ ಮಾತು ಕೇಳುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. ಪ್ರಮುಖವಾಗಿ ಕೋಚಿಮುಲ್‌ನಲ್ಲಿ ಭಾರಿ ಅವ್ಯವಹಾರ ನಡೆದಿದ್ದು ಡಿಸಿಸಿ ಬ್ಯಾಂಕ್ ನಂತೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದರು.

ರೂಪಕಲಾ ಶಶಿಧರ್, 'ಎಲ್ಲರೂ ಸೇರಿ ರೈತರ ಸಂಸ್ಥೆ ಡಿಸಿಸಿ ಬ್ಯಾಂಕ್ ಹಾಳು ಮಾಡಿ ದರು. ಸರ್ಕಾರಕ್ಕೆ ತಪ್ಪು ಸಂದೇಶ ನೀಡಿದರು. ಬಡವರು ನೀಡಿದ ಅಧಿಕಾರವನ್ನು ಕೆಲ ಬಲಾಢ್ಯರು ದುರ್ಬಳಕೆ ಮಾಡಿಕೊಂಡಿದ್ದಾರೆ' ಎಂದು ಸ್ವಪಕ್ಷೀಯ ಶಾಸಕರ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಶಾಸಕರಾದ ಕೆ.ವೈ.ನಂಜೇಗೌಡ, ಕೊತ್ತೂರು ಮಂಜುನಾಥ್ ಹಾಗೂ ವಿಧಾನ ಪರಿಷತ್ ಸದಸ್ಯ ಎಂ.ಎಲ್. ಅನಿಲ್ ಕುಮಾರ್ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಬೆಂಗಳೂರಿನಲ್ಲಿ ಶನಿವಾರ ಭೇಟಿಯಾದರು

ಬಜೆಟ್‌ನಲ್ಲಿ ಜಿಲ್ಲೆಗೆ ಆಗಬೇಕಿರುವ ಅನುಕೂಲಗಳ ಬಗ್ಗೆ ಡಿ.ಕೆ.ಶಿವಕುಮಾರ್ ಜತೆ ಚರ್ಚಿಸಿದೆವು. ಯಾರ ಬಗ್ಗೆಯೂ ದೂರು ನೀಡಲು ಹೋಗಿಲ್ಲ

ಎಂ.ಎಲ್.ಅನಿಲ್ ಕುಮಾರ್, ವಿಧಾನ ಪರಿಷತ್ ಸದಸ್ಯ

ಭ್ರಷ್ಟಾಚಾರದ ವಿರುದ್ಧ ಖರ್ಗೆ, ರಾಹುಲ್‌ಗೆ ದೂರು ನೀಡುವ ಎಚ್ಚರಿಕೆ: ಗುತ್ತಿಗೆದಾರರ ಸಂಘದ ಎಚ್ಚರಿಕೆ

‘ಕಾಂಗ್ರೆಸ್ ಸರ್ಕಾರದಲ್ಲಿ ಕಮಿಷನ್ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಹಿಂದಿದ್ದ ಬಿಜೆಪಿ ಸರ್ಕಾರಕ್ಕಿಂತ ಈಗಿನ ಕಾಂಗ್ರೆಸ್ ಸರ್ಕಾರದಲ್ಲಿ, ಅಧಿಕಾರಿಗಳು ಹೆಚ್ಚು ಕಮಿಷನ್ ಪಡೆಯುತ್ತಾರೆ’ ಎಂದು ರಾಜ್ಯ ಗುತ್ತಿಗೆದಾರರ ಸಂಘ ಆರೋಪಿಸಿದೆ.

‘ಡಿ. ಕೆಂಪಣ್ಣ ಅವರ ನೇತೃತ್ವದಲ್ಲಿ ಭ್ರಷ್ಟಾಚಾರದ ವಿರುದ್ಧ ನಡೆದ ಹೋರಾಟದ ಪ್ರತಿಫಲವಾಗಿ ನಿಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಆದರೆ, ನಿಮ್ಮ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಭ್ರಷ್ಟಾಚಾರ ಹೆಚ್ಚಾಗಿದೆ. ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿ, ಭ್ರಷ್ಟಾಚಾರದ ಬಗ್ಗೆ ಗಮನಕ್ಕೆ ತಂದರೂ, ಕಮಿಷನ್ ಹೆಚ್ಚಾಗುತ್ತಿದೆಯೇ ವಿನಾ ಕಡಿಮೆ ಯಾಗುತ್ತಿಲ್ಲ’ ಎಂದು ಸಂಘ ದೂರಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಸಂಘದ ರಾಜ್ಯ ಘಟಕದ ಅಧ್ಯಕ್ಷ ಆರ್. ಮಂಜುನಾಥ್ ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ಅವರು, ‘ಮೂರು ವರ್ಷಗಳಿಂದ ಬಾಕಿಯಿರುವ ₹32 ಸಾವಿರ ಕೋಟಿ ಬಿಲ್ ಬಾಕಿಗೆ ‘ಹಣ ಬಿಡುಗಡೆ ಭಾಗ್ಯ’ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

ಮುಖ್ಯಾಂಶಗಳು

- ಇಲಾಖೆಗಳ ಅಧಿಕಾರಿಗಳಿಂದ ಹೆಚ್ಚಿನ ಕಮಿಷನ್ ಬೇಡಿಕೆ
- ಸಚಿವರ ಗಮನಕ್ಕೆ ತಂದರೂ ಇನ್ನೂ ಕಡಿಮೆಯಾಗದ ಕಮಿಷನ್
- ‘ಹಣ ಬಿಡುಗಡೆ ಭಾಗ್ಯ’ ನೀಡಲು ಆಗ್ರಹ

‘ಕಾಮಗಾರಿ ಮುಕ್ತಾಯಗೊಂಡಿರುವ ಬಿಲ್‌ಗಳ ಪಾವತಿ ಮೂರು ವರ್ಷಗಳಿಂದ ಬಾಕಿ ಉಳಿದಿದೆ. ಗುತ್ತಿಗೆದಾರರ ಸಂಕಷ್ಟಗಳನ್ನು ಸಾಕಷ್ಟು ಬಾರಿ ತಮ್ಮಲ್ಲಿ ಹೇಳಿಕೊಂಡಿದ್ದೇವೆ. ಆದರೂ ತಾವು ಗಂಭೀರವಾಗಿ ಪರಿಗಣಿಸಿಲ್ಲ. ತುರ್ತಾಗಿ ನಮ್ಮ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಸಭೆ ಕರೆದು ಚರ್ಚೆ ನಡೆಸಬೇಕು. ಇಲ್ಲದಿದ್ದರೆ, ರಾಜ್ಯಪಾಲರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಭ್ರಷ್ಟಾಚಾರದ ಬಗ್ಗೆ ಮಾಹಿತಿ ನೀಡಲಾಗುತ್ತದೆ’ ಎಂದು ಹೇಳಿದ್ದಾರೆ.

‘ರಾಜ್ಯದ ಗುತ್ತಿಗೆದಾರರು ಮೂರು ವರ್ಷಗಳಿಂದ ತೆಗೆದುಕೊಂಡಿರುವ ಸಾಲಗಳು ಸುಸ್ತಿಯಾಗಿದ್ದು, ಬ್ಯಾಂಕ್‌ನವರು ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಕಾಮಗಾರಿಗಾಗಿ ಅಡವಿಟ್ಟಿರುವ ಒಡವೆಗಳನ್ನೂ ಬಿಡಿಸಿಕೊಳ್ಳಲು ಆಗುತ್ತಿಲ್ಲ. ಹಲವು ಗುತ್ತಿಗೆದಾರರು ಹಣ ಬಿಡುಗಡೆ ಮಾಡಿ, ಇಲ್ಲ ‘ದಯಾಮರಣ’ ನೀಡಿ ಎಂದೂ ಹೇಳುತ್ತಿರುವುದು ನಿಮ್ಮ ಗಮನಕ್ಕೆ ಬಂದಿದೆ ಎಂದು ಭಾವಿಸುತ್ತೇವೆ. ಆದ್ದರಿಂದ ಕೂಡಲೇ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ಸಿ.ಎಂ ಸ್ಪಂದನೆ: ‘ನಮ್ಮ ಸಂಘದ ಪತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಂದಿಸಿದ್ದು, ಮಾರ್ಚ್ 3ರ ಸೋಮವಾರ ಮಧ್ಯಾಹ್ನ ಸಭೆ ಕರೆದಿದ್ದಾರೆ. ರಾಜ್ಯ ಗುತ್ತಿಗೆದಾರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಜಿಲ್ಲಾ ಸಂಘಗಳ ತಲಾ ಒಬ್ಬರು ಸಭೆಯಲ್ಲಿ ಭಾಗವಹಿಸಲಿದ್ದಾರೆ’ ಎಂದು ಅಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು.

‘ಜಿಎಸ್‌ಟಿ ಕೊಡದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ’

ಕಲಬುರಗಿ: ‘2025ರ ಮಾರ್ಚ್ ಒಳಗಾಗಿ ರಾಜ್ಯ ಸರ್ಕಾರವು ಜಿಎಸ್‌ಟಿ ಹಣ ಪಾವತಿಸದಿದ್ದರೆ ಅನ್ಯ ಮಾರ್ಗವಿಲ್ಲದೆ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತದೆ’ ಎಂದು ಕಲ್ಯಾಣ ಕರ್ನಾಟಕ ಗುತ್ತಿಗೆದಾರರ ಸಂಘದ ಅಧ್ಯಕ್ಷ ಜಗನ್ನಾಥ ಬಿ.ಶೇಗಜಿ ಎಚ್ಚರಿಕೆ ನೀಡಿದರು.

ನಗರದಲ್ಲಿ ಶನಿವಾರ ಕಲ್ಯಾಣ ಕರ್ನಾಟಕ ಗುತ್ತಿಗೆದಾರರ ಸಂಘದ ಸಭೆ ನಡೆಸಿ ಮಾತನಾಡಿದ ಅವರು, ‘2025ರ ಮಾರ್ಚ್ 25ರ ಒಳಗಾಗಿ ಶೇ 8ರಷ್ಟು ಜಿಎಸ್‌ಟಿ ಹಣ ಕಟ್ಟುವಂತೆ ಕೇಂದ್ರ ಸರ್ಕಾರ ಗಡುವು ನೀಡಿದೆ. ಹೈಕೋರ್ಟ್ ಸಹ ಜಿಎಸ್‌ಟಿಯ ವ್ಯತ್ಯಾಸವನ್ನು ಕರ್ನಾಟಕ ಸರ್ಕಾರವೇ ಭರಿಸಬೇಕು ಎಂದು ಆದೇಶ ನೀಡಿದೆ. ಜಿಎಸ್‌ಟಿ ಪಾವತಿಸದಿದ್ದರೆ ಮನ್ನಾ ಮಾಡಿರುವ ಬಡ್ಡಿ ಹಾಗೂ ಚಕ್ರ ಬಡ್ಡಿ ಸೇರಿಸಿ ಕಟ್ಟಬೇಕಾಗುತ್ತದೆ. ಎರಡು ವರ್ಷಗಳಿಂದ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸದಿದ್ದರೂ ಇಲ್ಲಿಯವರೆಗೂ ತಡೆದುಕೊಂಡು ಬಂದಿದ್ದೇವೆ. ಜಿಎಸ್‌ಟಿ ವಿಚಾರದಲ್ಲಿ ಸಹನೆ ಮತ್ತು ತಡೆದುಕೊಳ್ಳುವ ಶಕ್ತಿ ನಮ್ಮಲ್ಲಿ ಇಲ್ಲ’ ಎಂದು ಹೇಳಿದರು.

‘ಗುತ್ತಿಗೆದಾರರ ಯಾವುದೇ ಬಿಲ್ಲುಗಳು ಪಾವತಿಯಾಗಿಲ್ಲ. ಬ್ಯಾಂಕ್‌ಗಳಲ್ಲಿ ತೆಗೆದುಕೊಂಡಿರುವ ‘ಒಡಿ’ಯನ್ನೂ ಕಟ್ಟಿರುವುದಿಲ್ಲ. ಯಂತ್ರೋಪಕರಣಗಳ ಮೇಲೆ ತೆಗೆದಿರುವ ಸಾಲಗಳನ್ನು ಪಾವತಿಸಿಲ್ಲ. ಇವುಗಳ ನಡುವೆ ಪ್ರತಿಯೊಬ್ಬ ಗುತ್ತಿಗೆದಾರ ₹ 2 ಕೋಟಿಯಿಂದ ₹ 3 ಕೋಟಿಯಷ್ಟು ಜಿಎಸ್‌ಟಿ ಕಟ್ಟಬೇಕಾಗಿದೆ. ಜೇವರ್ಗಿಯಲ್ಲಿ ಮಾರ್ಚ್ 8ರಂದು ನಡೆಯುವ ಕಲ್ಯಾಣ ಪಥ ಕಾರ್ಯಕ್ರಮದ ಒಳಗಾಗಿ ರಾಜ್ಯ ಸರ್ಕಾರ ಗುತ್ತಿಗೆದಾರರಿಗೆ ಜಿಎಸ್‌ಟಿ ಹಣ ಪಾವತಿಸಬೇಕು’ ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

‘ಜಿಲ್ಲೆಯೊಂದರಲ್ಲಿ ವೀರಶೈವ ಲಿಂಗಾಯತರ ಸಾಮಾಜಿಕ ಸಮೀಕ್ಷೆ’

ಮೊಳಕಾಲ್ಮುರು (ಚಿತ್ರದುರ್ಗ): ‘ವೀರಶೈವ ಲಿಂಗಾಯತ ಮಹಾಸಭಾದಿಂದ ರಾಜ್ಯದ ಯಾವುದಾದರೂ ಒಂದು ಜಿಲ್ಲೆಯಲ್ಲಿ ಸಾಮಾಜಿಕ ಸಮೀಕ್ಷೆ ನಡೆಸಲಾಗುವುದು. ಅದನ್ನು ರಾಜ್ಯ ಸರ್ಕಾರ ನಡೆಸಿರುವ ಸಾಮಾಜಿಕ ಸಮೀಕ್ಷೆಯೊಂದಿಗೆ ಹೋಲಿಕೆ ಮಾಡಿ ಸಮುದಾಯದ ಜನಸಂಖ್ಯೆ ಎಷ್ಟಿದೆ ಎಂಬುದನ್ನು ತಿಳಿಯಲಾಗುವುದು’ ಎಂದು ಮಹಾಸಭಾದ ಉಪಾಧ್ಯಕ್ಷರೂ ಆಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

‘ಸರ್ಕಾರ ನಡೆಸಿರುವ ಸಮೀಕ್ಷಾ ವರದಿಗೆ ನಮ್ಮ ವಿರೋಧವಿಲ್ಲ. ಆದರೆ ಜನಸಂಖ್ಯೆ ಕುರಿತಂತೆ ಲಿಂಗಾಯತ ಸಮುದಾಯಕ್ಕೆ ಕೆಲವೊಂದು ಅನುಮಾನಗಳಿವೆ. ಅವುಗಳ ನಿವಾರಣೆಗಾಗಿ ಖಾಸಗಿಯಾಗಿ ಸಮೀಕ್ಷೆ ನಡೆಸಿ ತಾಳೆ ಮಾಡಲಾಗುವುದು’ ಎಂದು ಶನಿವಾರ ಸುದ್ದಿಗಾರರಿಗೆ ಹೇಳಿದರು.

‘ಜನಗಣತಿ ವರದಿ ಮಂಡನೆಗೆ ನಮ್ಮ ವಿರೋಧವಿಲ್ಲ, ವರದಿ ಬಹಿರಂಗಗೊಂಡಾಗ ಮಾತ್ರ ಅದರಲ್ಲಿನ ಸತ್ಯಾಸತ್ಯತೆ ಹೊರಬರಲು ಸಾಧ್ಯ. ಯಾವ ಅನ್ಯಾಯವೂ ಆಗದಂತೆ ವರದಿ ಅನುಷ್ಠಾನ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾಸಭಾಕ್ಕೆ ಭರವಸೆ ನೀಡಿದ್ದಾರೆ. ಖಾಸಗಿಯಾಗಿ ಸಮೀಕ್ಷೆ ನಡೆಸುವ ಬಗ್ಗೆ ಸಮುದಾಯದ ಹಿರಿಯರಾದ ಶಾಮನೂರು ಶಿವಶಂಕರಪ್ಪ ಮತ್ತು ಶಂಕರ ಬಿದರಿ ಅವರೊಂದಿಗೆ ಚರ್ಚಿಸಲಾಗಿದೆ’ ಎಂದು ತಿಳಿಸಿದರು.

ಮತಮರು ಎಣಿಕೆ ಪೂರ್ಣ: 4ರಂದು ವಿಚಾರಣೆ

ಚಿಕ್ಕಮಗಳೂರು: ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆದಿದ್ದ ಚುನಾವಣೆಯ ಮತಗಳ ಮರು ಎಣಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಜಿಲ್ಲಾ ಚುನಾವಣಾಧಿಕಾರಿ ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ.

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಮತಗಳ ಎಣಿಕೆ ಕಾರ್ಯವು ಅಭ್ಯರ್ಥಿಗಳ ಸಮ್ಮುಖದಲ್ಲಿ ನಡೆಯಿತು. ಸುಪ್ರೀಂ ಕೋರ್ಟ್‌ನಲ್ಲಿ ಮಾ. 4ರಂದು ಪ್ರಕರಣ ವಿಚಾರಣೆಗೆ ಬರಲಿದ್ದು, ಜಿಲ್ಲಾ ಚುನಾವಣಾಧಿಕಾರಿ ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

2021ರ ಡಿಸೆಂಬರ್ 10ರಂದು ಮತದಾನ ನಡೆದಿತ್ತು. 14ರಂದು ಮತ ಎಣಿಕೆ ಮಾಡಲಾಗಿತ್ತು. ಬಿಜೆಪಿಯ ಎಂ.ಕೆ. ಪ್ರಾಣೇಶ್ ಆರು ಮತಗಳಿಂದ ಗೆಲುವು ಸಾಧಿಸಿದ್ದರು. ಪಟ್ಟಣ ಪಂಚಾಯಿತಿಗಳ 12 ನಾಮನಿರ್ದೇಶಿತ ಸದಸ್ಯರು ಮತದಾನ ಮಾಡಿರುವುದನ್ನು ಪ್ರಶ್ನಿಸಿ ಕಾಂಗ್ರೆಸ್‌ನ ಎ.ವಿ. ಗಾಯತ್ರಿ ಶಾಂತೇಗೌಡ ಅವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಈಗ 12 ಮತಗಳನ್ನು ಪ್ರತ್ಯೇಕವಾಗಿ ಇರಿಸಿ ಮತ ಎಣಿಕೆ ಮಾಡಲಾಗಿದೆ. ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ವರದಿ ಸಲ್ಲಿಕೆಯಾಗಲಿದೆ.

ನೃತ್ಯ ವೈಭವ...
ಹಂಪಿ ಉತ್ಸವದಲ್ಲಿ ಶನಿವಾರ ಮೈಸೂರಿನ ಅಂಜನಾ ಭೂಷಣ್ ಮತ್ತು ತಂಡದವರು ನಡೆಸಿಕೊಟ್ಟ ಶಾಸ್ತ್ರೀಯ ನೃತ್ಯ ಗಮನ ಸೆಳೆಯಿತು
–ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಅಧಿಕಾರದ ವ್ಯಾಮೋಹ ಇಲ್ಲ: ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ

ಅವಿಶ್ವಾಸ ನೋಟಿಸ್ ಕೊಟ್ಟರೆ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಂದೊಮ್ಮೆ ನನ್ನ ವಿರುದ್ಧ ಅವಿಶ್ವಾಸ ನೋಟಿಸ್ ಕೊಟ್ಟರೆ ರಾಜೀನಾಮೆ ನೀಡಿ ಮನೆಗೆ ಹೋಗುತ್ತೇನೆ. ನನಗೆ ಅಧಿಕಾರದ ವ್ಯಾಮೋಹ ಇಲ್ಲ’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.



ಬಸವರಾಜ ಹೊರಟ್ಟಿ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಾಮಾನ್ಯ ಕುಟುಂಬದಿಂದ ಬಂದು ಶಿಕ್ಷಕನಾಗಿದ್ದ ನಾನು ಸಚಿವನಾಗಿ, ಸಭಾಪತಿಯಂಥ ಉನ್ನತ ಹುದ್ದೆಯಲ್ಲಿದ್ದೇನೆ. ನನಗೆ ಈ ಬಗ್ಗೆ ತೃಪ್ತಿ ಇದೆ’ ಎಂದರು.

‘ಇದೇ 3ರಿಂದ ವಿಧಾನಮಂಡಲ ಅಧಿವೇಶನ ಆರಂಭವಾಗಲಿದೆ. ಮೊದಲ ದಿನ ಮಧ್ಯಾಹ್ನ 3 ಗಂಟೆಗೆ ಜಂಟಿ ಕಲಾಪ ಸಲಹಾ ಸಮಿತಿ ಸಭೆ ನಡೆಸುವಂತೆ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ತಿಳಿಸಿದ್ದೇನೆ’ ಎಂದರು.

‘ಮಾದಕ ವಸ್ತುಗಳಿಗೆ ಮಕ್ಕಳು ಬಲಿಯಾಗುತ್ತಿರುವ ಮತ್ತು ಹದಿಹರೆಯದ ಮಕ್ಕಳ ಸಮಸ್ಯೆಗಳ ಬಗ್ಗೆ ಕುರಿತು ವಿಧಾನ ಪರಿಷತ್‌ನಲ್ಲಿ ಚರ್ಚೆಗೆ ಒತ್ತು ನೀಡಲಾಗುವುದು. ಬೆಂಗಳೂರು ನಗರದ ಅಭಿವೃದ್ಧಿ ಕುರಿತು ಚರ್ಚೆಗೆ ಪರಿಷತ್ ಸದಸ್ಯ ಎಚ್ . ವಿಶ್ವನಾಥ್ ಪ್ರಸ್ತಾವ ಕೊಟ್ಟಿದ್ದಾರೆ. ಈ ವಿಷಯದ ಕುರಿತು ವಿಚಾರ ಸಂಕಿರಣ ಏರ್ಪಡಿಸುವ ಚಿಂತನೆಯಿದೆ. ಕಲಾಪವನ್ನು ಸುಗಮವಾಗಿ ನಡೆಸುವ ಬಗ್ಗೆ ವಿರೋಧ ಪಕ್ಷಗಳ ಸದಸ್ಯರ ಜೊತೆಗೂ ಚರ್ಚೆ ಮಾಡಿದ್ದೇನೆ’ ಎಂದರು.

‘ಮಂಡಿಸುವ ಮಸೂದೆಗಳನ್ನು ಮುಂಚಿತವಾಗಿ ಕಳುಹಿಸದಿದ್ದರೆ ಚರ್ಚೆಗೆ ತೆಗೆದುಕೊಳ್ಳುವುದಿಲ್ಲವೆಂದು ಸ್ಪಷ್ಟವಾಗಿ ಸರ್ಕಾರಕ್ಕೆ ತಿಳಿಸಿದ್ದೇನೆ. ಅಧಿಕಾರಿಗಳು ಯಾರ ಮಾತು ಕೇಳುತ್ತಾರೋ, ಕೇಳುವುದಿಲ್ಲವೋ ಗೊತ್ತಾಗುತ್ತಿಲ್ಲ. ವಿಧಾನಸಭೆಯಲ್ಲಿ ಬೆಳಿಗ್ಗೆ, ಪರಿಷತ್ತಿನಲ್ಲಿ ಸಂಜೆ ಮಸೂದೆಗಳ ಕುರಿತು ಚರ್ಚೆ ಎಂಬ ವಾತಾವರಣವಿದೆ. ಇದು ಸರಿಯಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಶಾಸಕರ ವಿಶ್ರಾಂತಿಗೆ ಆರಾಮ ಕುರ್ಚಿ ವ್ಯವಸ್ಥೆ ಮಾಡಿರುವ ಕುರಿತು ಕೇಳಿದ ಪ್ರಶ್ನೆಗೆ, ‘ಪರಿಷತ್‌ನಲ್ಲಿ ಸದಸ್ಯರು ಮಧ್ಯಾಹ್ನ ಭೋಜನದ ನಂತರವೂ ಆಸಕ್ತಿಯಿಂದ ಭಾಗವಹಿಸುತ್ತಿದ್ದಾರೆ. ಹೀಗಾಗಿ, ಆರಾಮ ಕುರ್ಚಿ ವ್ಯವಸ್ಥೆ ಒದಗಿಸುವ ಪರಿಸ್ಥಿತಿ ಬಂದಿಲ್ಲ. ಇನ್ನೊಂದು ಸದನದ ಬಗ್ಗೆ ನಾನು ಮಾತನಾಡುವುದು ಸೂಕ್ತವಲ್ಲ’ ಎಂದರು.

‘ಲಕ್ಷ್ಮಿ–ರವಿ ಮಧ್ಯೆ ಸಂಧಾನಕ್ಕೆ ಯತ್ನ’

‘ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮತ್ತು ಸಿ.ಟಿ. ರವಿ ಇಬ್ಬರನ್ನೂ ಕರೆಸಿ ಪರಸ್ಪರ ಮಾತುಕತೆ ಮೂಲಕ ಬಗೆಹರಿಸಲು ಪ್ರಯತ್ನಿಸುತ್ತೇವೆ’ ಎಂದು ಬಸವರಾಜ ಹೊರಟ್ಟಿ ಹೇಳಿದರು.

‘ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮತ್ತು ಸಿ.ಟಿ. ರವಿ ನಡುವೆ ನಡೆದ ಘಟನೆಯ ವಿಚಾರಣೆಯು ಪರಿಷತ್ ಸದಸ್ಯ ಪಿ.ಎಚ್. ಪೂಜಾರ್ ಅಧ್ಯಕ್ಷತೆಯ ನೀತಿ ನಿರೂಪಣಾ ಸಮಿತಿಯ ಮುಂದೆ ಇದೆ. ಮಾತುಕತೆ ಸಾಧ್ಯವಾಗದೇ ಇದ್ದರೆ ಈ ಸಮಿತಿ ನೀಡುವ ವರದಿಯಂತೆ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು. ಒಂದು ತಿಂಗಳ ಒಳಗೆ ವರದಿ ನೀಡುವಂತೆ ಸಮಿತಿಗೆ ಸೂಚಿಸಿದ್ದೇನೆ’ ಎಂದರು.

ಬೆಂಬಲಿಗರಿಗೆ ಬಿಜೆಪಿ ರಾಜ್ಯ ಘಟಕದ ಬಿ.ವೈ.ವಿಜಯೇಂದ್ರ ಸೂಚನೆ

ವೀರಶೈವ ಲಿಂಗಾಯತರ ಸಭೆ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮತ್ತಿತರರು ತಮ್ಮನ್ನು ಬೆಂಬಲಿಸಿ ನಡೆಸಲು ಹೊರಟಿದ್ದ ವೀರಶೈವ ಲಿಂಗಾಯತ ಪ್ರಮುಖರ ಸರಣಿ ಸಭೆಗಳು ಮತ್ತು ಸಮಾವೇಶವನ್ನು ನಿಲ್ಲಿಸಿ ಎಂದು ಬಿಜೆಪಿ ರಾಜ್ಯ ಘಟಕದ ಬಿ.ವೈ.ವಿಜಯೇಂದ್ರ ಅವರು ಸೂಚಿಸಿದ್ದಾರೆ.

ಬಿಜೆಪಿ ರಾಜ್ಯ ನಾಯಕತ್ವದ ಬದಲಾವಣೆಗೆ ಪಟ್ಟು ಹಿಡಿದಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣದವರು ಈಚೆಗೆ ಲಿಂಗಾಯತ ಸಮುದಾಯದ ರಾಜಕೀಯ ನಾಯಕರ ಸಭೆ ನಡೆಸಿದ್ದರು. ವೀರಶೈವರನ್ನು ಹೊರಗಿಟ್ಟು ಲಿಂಗಾಯತ ಪ್ರತ್ಯೇಕ ಧರ್ಮಕ್ಕೆ ಹೋರಾಟ ನಡೆಸಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತಾದರೂ, ರಾಜ್ಯ ರಾಜಕಾರಣದಲ್ಲಿ ಮತ್ತು ಬಿಜೆಪಿಯಲ್ಲಿ ವಿಜಯೇಂದ್ರ ಅವರ ಬಲ ಕುಂದಿಸುವ ಉದ್ದೇಶದಿಂದ ಆ ಸಭೆ ನಡೆಸಲಾಗಿತ್ತು ಎಂದೂ ಹೇಳಲಾಗಿತ್ತು.

ಆ ಸಭೆಯ ಬೆನ್ನಲ್ಲೇ, ‘ವಿಜಯೇಂದ್ರ ಅವರನ್ನು ಮುಂದಿನ ಮುಖ್ಯಮಂತ್ರಿ ಮಾಡುವುದು ನಮ್ಮ ಗುರಿ. ಇದಕ್ಕಾಗಿ ವೀರಶೈವ ಲಿಂಗಾಯತರ ಸರಣಿ ಸಭೆಗಳನ್ನು ನಡೆಸಲಾಗುವುದು’ ಎಂದು ವಿಜಯೇಂದ್ರ ಬಣದಲ್ಲಿ ಗುರುತಿಸಿಕೊಂಡಿರುವ ಎಂ.ಪಿ. ರೇಣುಕಾಚಾರ್ಯ ಹೇಳಿದ್ದರು. ಬಿ.ಎಸ್. ಯಡಿಯೂರಪ್ಪ ಜನ್ಮದಿನದಂದು ಅವರ ನಿವಾಸದಲ್ಲಿಯೇ, ಲಿಂಗಾಯತ ಪ್ರಮುಖರ ಸಭೆಯನ್ನೂ ನಡೆಸಲಾಗಿತ್ತು. ಶನಿವಾರ ದಾವಣಗೆರೆಯಲ್ಲಿ ‘ವೀರಶೈವ ಲಿಂಗಾಯತರ ಮಹಾಸಂಗಮ ಪೂರ್ವ ಸಿದ್ಧತಾ ಸಭೆ’ಯನ್ನು ಈ ಗುಂಪು ನಡೆಸಿತ್ತು. ದಾವಣಗೆರೆ, ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಗಳ ಪ್ರಮುಖರು ಭಾಗವಹಿಸಿದ್ದರು.

ನಾನು ವೀರಶೈವ ಲಿಂಗಾಯತ ಸಮಾಜದವನು ಎಂಬ ಹೆಮ್ಮೆ ಇದೆ. ಬಸವ ತತ್ವಗಳಲ್ಲಿ ನಂಬಿಕೆ ಇರುವವನು. ಹೀಗಾಗಿ ಸರ್ವ ಸಮಾಜಗಳ ಏಳಿಗೆಗೆ ಚಿಂತಿಸುತ್ತೇನೆ
ಬಿ.ವೈ.ವಿಜಯೇಂದ್ರ, ಬಿಜೆಪಿ ಅಧ್ಯಕ್ಷ

ಈ ಮಧ್ಯೆಯೇ, ಶನಿವಾರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ವಿಜಯೇಂದ್ರ, ‘ಈಚಿನ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕೆಲವು ಹಿತೈಷಿಗಳು, ನಮ್ಮ ಮೇಲಿನ ಅಭಿಮಾನದ ಕಾರಣಕ್ಕಾಗಿ ವೀರಶೈವ ಲಿಂಗಾಯತ ಸಮುದಾಯದ ಸರಣಿ ಸಭೆಗಳನ್ನು ನಡೆಸಲು ಹೊರಟಿರುವ ವಿಷಯ ನನ್ನ ಗಮನಕ್ಕೆ ಬಂದಿದೆ. ಆದರೆ ಅದನ್ನು ತಕ್ಷಣವೇ ನಿಲ್ಲಿಸುವಂತೆ ಅವರಿಗೆ ತಿಳಿಸಿದ್ದೇನೆ’ ಎಂದಿದ್ದಾರೆ.

‘ಪಕ್ಷದ ನಾಯಕರು ಸಮುದಾಯದ ಸಭೆ ನಡೆಸುವುದರಿಂದ ಪಕ್ಷಕ್ಕೂ ಮುಜುಗರವಾಗುತ್ತದೆ. ಹೀಗಾಗಿ ಸಭೆ ನಡೆಸುವುದರ ಬದಲಿಗೆ ಪಕ್ಷ ಸಂಘಟನೆಯತ್ತ ಗಮನ ಹರಿಸಬೇಕು ಎಂದು ವಿನಂತಿ’ ಎಂದು ಪೋಸ್ಟ್‌ನಲ್ಲಿ ಕೋರಿದ್ದಾರೆ.

ಬಿಜೆಪಿ ಮುಖಂಡರ ಸಭೆ ಸ್ವರೂಪ ಬದಲು

ದಾವಣಗೆರೆ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಕೈ ಬಲಪಡಿಸಲು ಪಕ್ಷದ ಮೂರು ಜಿಲ್ಲೆಗಳ ವೀರಶೈವ ಲಿಂಗಾಯತ ನಾಯಕರು ಶನಿವಾರ ಆಯೋಜಿಸಿದ್ದ ಸಭೆಗೆ ಬಿ.ಎಸ್.ಯಡಿಯೂರಪ್ಪ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಸಭೆಯ ಸ್ವರೂಪ ದಿಢೀರ್ ಬದಲಾಯಿತು.

ಸಮುದಾಯವನ್ನು ರಾಜಕೀಯವಾಗಿ ಸಂಘಟಿಸುವ ಉದ್ದೇಶದಿಂದ ಹಮ್ಮಿಕೊಳ್ಳುತ್ತಿರುವ ‘ವೀರಶೈವ ಲಿಂಗಾಯತ ಮಹಾಸಂಗಮ’ ಸಮಾವೇಶದ ಪೂರ್ವಭಾವಿ ಸಭೆಯಾಗಿ ಇದು ಜರುಗಿತು. ರಾಜಕೀಯ ನಾಯಕರ ಬದಲಾಗಿ ಬಸವಣ್ಣ, ಶಿವ ಹಾಗೂ ಗುರು ರೇಣುಕಾಚಾರ್ಯರ ಚಿತ್ರಗಳು ವೇದಿಕೆಯ ಮೇಲಿದ್ದವು.

‘ಬಿ.ಎಸ್.ಯಡಿಯೂರಪ್ಪ ದೂರವಾಣಿ ಕರೆ ಮಾಡಿ ಸಭೆ ನಡೆಸದಂತೆ ಸೂಚನೆ ನೀಡಿದ್ದು ನಿಜ. ರಾಜಕೀಯವಾಗಿ ಆಗಿರುವ ಅನ್ಯಾಯವನ್ನು ಸಮುದಾಯಕ್ಕೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಈ ಸಭೆ ನಡೆಸಿದ್ದೇವೆ. ಸಮುದಾಯವನ್ನು ರಾಜಕೀಯವಾಗಿ ಸಂಘಟಿಸುವ ಪ್ರಯತ್ನ ಮುಂದುವರಿಸುವಂತೆ ಮಠಾಧೀಶರು ನಿರ್ದೇಶನ ನೀಡಿದ್ದಾರೆ. ಶಿವಮೊಗ್ಗ, ಚಿಕ್ಕಮಗಳೂರು, ಬೆಂಗಳೂರು ಸೇರಿ ರಾಜ್ಯದ ಎಲ್ಲೆಡೆ ಪೂರ್ವಭಾವಿ ಸಭೆ ನಡೆಯಲಿದೆ’ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ತಿಳಿಸಿದರು.

ಮಾಜಿ ಸಚಿವ ಎಸ್.ಎ.ರವೀಂದ್ರನಾಥ್, ಮಾಜಿ ಶಾಸಕರಾದ ಮಾಡಾಳ್ ವಿರೂಪಾಕ್ಷಪ್ಪ, ಅರುಣ್‌ಕುಮಾರ್ ಪೂಜಾರ್ ಹಾಜರಿದ್ದರು.

‘ತಾಕತ್ತಿದ್ದರೆ ಡಿಕೆಶಿ ಸಸ್ಪೆಂಡ್ ಮಾಡಿ’

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಬಹಿರಂಗ ಸವಾಲು

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಡಿಸಿಎಂ ಡಿ.ಕೆ. ಶಿವಕುಮಾರ್ ಕಾಂಗ್ರೆಸ್‌ನ ಬೇರೆ ನಾಯಕರಂತಲ್ಲ. ಬೇಕಾಗಿರುವುದನ್ನು ಒದ್ದು ಕಿತ್ತುಕೊಳ್ಳುವ ಜಾಯಮಾನ ದವರು. ಕುಂಭ ಮೇಳಕ್ಕೆ ಹೋಗ ಬೇಡಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದರೂ ಅವರು ಹೋದರು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಹಾಡಿ ಹೊಗಳಿದರು. ನಿಮಗೆ ಧಮ್ಮು, ತಾಕತ್ತಿದ್ದರೆ ಅವರನ್ನು ಪಕ್ಷದಿಂದ ಸಸ್ಪಂಡ್ ಮಾಡಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸವಾಲು ಹಾಕಿದರು.

ಆರ್. ಅಶೋಕ

ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಕೇಂದ್ರ ಗೃಹಸಚಿವ ಅಮಿತ್ ಶಾ ಅವರೊಂದಿಗೆ ಡಿ.ಕೆ.ಶಿವಕುಮಾರ್ ವೇದಿಕೆ ಹಂಚಿಕೊಂಡ ಕುರಿತು ಕಾಂಗ್ರೆಸ್‌ನಲ್ಲಿ ಅಸಮಾಧಾನದ ಮಾತು ಕೇಳಿಬರುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರನ್ನೂ ಅವರು ಭೇಟಿ ಮಾಡಿದ್ದರು. ಒಬ್ಬ ಮುಖ್ಯಮಂತ್ರಿಯೇ ಪ್ರಧಾನಿ ಭೇಟಿ ಮಾಡುವುದು ಕಷ್ಟ. ಅಂದರೆ ಈ ಭೇಟಿಗೆ ಏನರ್ಥ’ ಎಂದರು.

‘ಶಿವಕುಮಾರ್ ಬಿಜೆಪಿಗೆ ಬರುವ ಬಗ್ಗೆ ನಮ್ಮಲ್ಲಿ ಚರ್ಚೆಯಾಗಿಲ್ಲ. ಮೊದಲು ಅವರನ್ನು ಸಸ್ಪೆಂಡ್ ಮಾಡಲಿ, ಮುಂದೆ ನೋಡೋಣ. ನಾವ್ಯಾರು ಅವರನ್ನು ಕರೆದಿಲ್ಲ. ಕೇಂದ್ರದ ನಾಯಕರೇ ಎಲ್ಲವನ್ನೂ ತೀರ್ಮಾನಿಸುತ್ತಾರೆ’ ಎಂದರು.

ಶಾಸಕ ಸಿ.ಎನ್. ಅಶ್ವತ್ಥನಾರಾಯಣ್ ಮಾತನಾಡಿ, ‘ನಮ್ಮ ಪಕ್ಷ ಸದೃಢವಾಗಿದ್ದು, ಯಾರ ಅವಶ್ಯಕತೆಯೂ ಇಲ್ಲ. ರಾಜಕೀಯದಲ್ಲಿ ಯಾರಾದರೂ ಬರಬಹುದು, ಹೋಗಬಹುದು’ ಎಂದರು.

ಉತ್ತಮ ನಾಯಕತ್ವದ ಕೊರತೆ ಇರುವುದರಿಂದ ಬಿಜೆಪಿಯವರು ಕನಸು ಕಾಣುತ್ತಿದ್ದಾರೆ. ಅವರೇ ನಮ್ಮ ಪಕ್ಷಕ್ಕೆ ಬಂದರೆ ಸಂತೋಷ. ಕಾಂಗ್ರೆಸ್ ಭದ್ರವಾಗಿದೆ
ಎನ್.ಚಲುವರಾಯಸ್ವಾಮಿ
ಕೃಷಿ ಸಚಿವ

ಡಿ.ಕೆ.ಶಿವಕುಮಾರ್ ನಮ್ಮ ಅಧ್ಯಕ್ಷರು. ನಾನು ಚಿಕ್ಕವನು, ಮಾತನಾಡೋದಕ್ಕೆ ನನಗೆ ಅಧಿಕಾರ ಇಲ್ಲ. ಬಾಯಿ ಮುಚ್ಚಿಕೊಂಡು ಕೆಲಸ ಮಾಡುವಂತೆ ಹೈಕಮಾಂಡ್ ತಿಳಿಸಿದೆ
ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸುಭದ್ರವಾಗಿದ್ದು, ಅಂತೆ–ಕಂತೆಗಳಿಗೆ ನಮ್ಮಲ್ಲಿ ಉತ್ತರವಿಲ್ಲ. ಡಿಕೆಶಿ ಈಶಾ ಭೇಟಿಗೆ ಹೆಚ್ಚಿನ ಒತ್ತು ನೀಡುವ ಅಗತ್ಯವಿಲ್ಲ
ಡಾ. ಎಚ್.ಸಿ. ಮಹದೇವಪ್ಪ
ಸಮಾಜ ಕಲ್ಯಾಣ ಸಚಿವ

‘ಬಿಜೆಪಿ ಮತ್ತು ಜೆಡಿಎಸ್ ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ ಎಂದು ಸಚಿವ ಜಮೀರ್ ಹೇಳುತ್ತಾರೆ. ಸಂಪರ್ಕದಲ್ಲಿದ್ದರೇ ಏನು ಬೇಕಾದರೂ ಮಾಡಲಿ. ನಿನಗೆ ಅಡ್ಡ ಬಂದವರೂ ಯಾರಪ್ಪ ಜಮೀರ್?’ ಎಂದರು.

‘ನಾನು ಯಾರನ್ನೂ ದ್ವೇಷಿಸುವುದಿಲ್ಲ. ಆದರೆ ಕಾಂಗ್ರೆಸ್ ರೀತಿ ಕೀಳುಮಟ್ಟದ ರಾಜಕಾರಣ ಮಾಡಲ್ಲ. ನಮ್ಮನ್ನು ತೋರಿಸಿ ಸಿದ್ದರಾಮಯ್ಯ ಸಿ.ಎಂ ಸ್ಥಾನ ಭದ್ರ ಮಾಡಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ನಾಯಕರು ಬ್ಲಾಕ್ ಮೇಲ್ ತಂತ್ರ ಮಾಡುತ್ತಿದ್ದಾರೆ. ಮುಂದೆ ಚುನಾವಣೆಗೆ ಹೋಗಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತರುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ರಾಜ್ಯದಲ್ಲಿ ಭಾರಿ ಗಟ್ಟಿಯಾಗಿದ್ದು, 138 ಶಾಸಕರ ಬೆಂಬಲದೊಂದಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾರೆ. ಅದೃಷ್ಟ ಒಲಿದು ಬಂದಾಗ ಡಿ.ಕೆ. ಶಿವಕುಮಾರ್ ಸಹ ಮುಖ್ಯಮಂತ್ರಿಯಾಗಬಹುದು
ಜಿ.ಟಿ.ದೇವೇಗೌಡ, ಜೆಡಿಎಸ್ ಶಾಸಕ

‘ರಾಹುಲ್ ಯಾರು ಎಂದವರೊಂದಿಗೆ ಡಿಕೆಶಿ’

ಹಾಸನ: ‘ರಾಹುಲ್ ಗಾಂಧಿ ಯಾರೆಂದು ಗೊತ್ತಿಲ್ಲ ಎಂದು ಹೇಳಿದ್ದ ಈಶಾ ಫೌಂಡೇಶನ್‌ನ ಜಗ್ಗಿ ವಾಸುದೇವ್ ಅವರ ಕಾರ್ಯಕ್ರಮಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್ ಹೋಗಿರುವುದು ಎಷ್ಟು ಔಚಿತ್ಯಪೂರ್ಣ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಪ್ರಶ್ನಿಸಿದರು.

ಇಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ನಮ್ಮ ನಾಯಕ ರಾಹುಲ್ ಗಾಂಧಿಯವರ ಬಗ್ಗೆ ಲೋಕಸಭೆಯಲ್ಲಿ ಯಾರ್‍ಯಾರು, ಏನೇನು ಮಾತನಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಅಂಥವರ ಜೊತೆ ಡಿ.ಕೆ. ಶಿವಕುಮಾರ್ ವೇದಿಕೆ ಅಲಂಕರಿಸುವುದು ಎಷ್ಟರಮಟ್ಟಿಗೆ ಸರಿ? ಇದಕ್ಕೆ ಅವರೇ ಉತ್ತರ ಹೇಳಬೇಕಷ್ಟೆ. ಇದಕ್ಕೆ ರಾಜಕೀಯ ಬೆರೆಸುವುದು ಬೇಡ’ ಎಂದರು.

ಬಾಲ್ಯ ವಿವಾಹ ಮಾಡಿಸಿದ ಐಪಿಎಸ್ ಅಧಿಕಾರಿ?

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಜಿಲ್ಲೆಯ ಅಥಣಿ ತಾಲ್ಲೂಕಿನ ಗ್ರಾಮವೊಂದರ ಬಾಲಕಿಯನ್ನು ಮದುವೆಯಾಗಿ, ಅತ್ಯಾಚಾರ ಎಸಗಿ, ಗರ್ಭಿಣಿ ಮಾಡಿ, ಮಗು ಜನಿಸಲು ಕಾರಣನಾದ ವ್ಯಕ್ತಿ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯ ಮೇಲ್ವಿಚಾರಕಿ ಶೋಭಾ ಮಗದುಮ್ಮ ಅವರು ಐಗಳಿ ಠಾಣೆಗೆ ಶನಿವಾರ ದೂರು ದಾಖಲಿಸಿದ್ದಾರೆ.

‘ಈ ಬಾಲ್ಯ ವಿವಾಹವನ್ನು ಬೆಳಗಾವಿ ವಿಭಾಗದ ಮಾನವ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಸ್ಪಿ ರವೀಂದ್ರ ಗಡಾದಿ ಅವರೇ ಮುಂದೆ ನಿಂತು ಮಾಡಿಸಿದ್ದಾರೆ’ ಎಂದು ಸಂತ್ರಸ್ತೆ ಹಾಗೂ ಆಕೆಯ ತಾಯಿ ಆರೋಪಿಸಿದ್ದಾರೆ.

‘2008 ಜೂನ್ 1ರಂದು ಬಾಲಕಿ ಜನಿಸಿದ್ದಾಳೆ. ಇದೀಗ 17 ವರ್ಷ ತುಂಬಿದೆ. 2023ರ ಅಕ್ಟೋಬರ್ 23ರಂದು ಐಗಳಿ ಗ್ರಾಮದ ರಾಜೇಂದ್ರ ಸೈದಪ್ಪ ಗಡಾದಿ ಎಂಬಾತ ಮದುವೆ ಮಾಡಿಕೊಂಡಿದ್ದಾನೆ. ಆಗ ಬಾಲಕಿಗೆ 16 ವರ್ಷ ವಯಸ್ಸು ಆಗಿತ್ತು. ಮದುವೆಯು ಐಗಳಿಯ ಹರಿಜನ ಕೇರಿಯಲ್ಲಿರುವ ಅಂಬೇಡ್ಕರ್ ಭವನದಲ್ಲಿ ನೆರವೇರಿದೆ. ಸದ್ಯ ಬಾಲಕಿಗೆ ಮೂರೂವರೆ ತಿಂಗಳಿನ ಗಂಡು ಮಗು ಇದೆ. ಆರೋಪಿ ಪತಿ ವಿರುದ್ಧ ಕ್ರಮ ಜರುಗಿಸಬೇಕು’ ಎಂದು ಶೋಭಾ ದೂರಿನಲ್ಲಿ ತಿಳಿಸಿದ್ದಾರೆ.

ಬಾಲಕಿ ಹಾಗೂ ಆಕೆಯ ಮಗುವನ್ನು ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಲಾಗಿದೆ. ಆರೋಪಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲಾಗಿದೆ. ಮಕ್ಕಳ ಕಲ್ಯಾಣ ಸಮಿತಿ ಕೋಣೆಯಲ್ಲೇ ಇದ್ದುಕೊಂಡು ಸಂತ್ರಸ್ತೆ ಶನಿವಾರ, ವಿಡಿಯೊ ಹೇಳಿಕೆ ಹರಿಬಿಟ್ಟಿದ್ದಾರೆ.

‘ಐಪಿಎಸ್ ಅಧಿಕಾರಿ ರವೀಂದ್ರ ಕಾಶೀನಾಥ ಗಡಾದಿ ಅವರೇ ನನ್ನ ಆಧಾರ್ ಕಾರ್ಡ್‌ನಲ್ಲಿ ಜನ್ಮದಿನಾಂಕ ತಿದ್ದಿದ್ದಾರೆ. ಅವರೇ ಮುಂದೆ ನಿಂತು ಮದುವೆ ಮಾಡಿಸಿದ್ದಾರೆ. ಆದರೆ, ಪೊಲೀಸ್ ಠಾಣೆಗೆ ದೂರು ನೀಡಿದಾಗ ಕೇವಲ ನನ್ನ ಕುಟುಂಬದವರ ಹೆಸರು ಮಾತ್ರ ಬರೆಯುತ್ತಿದ್ದಾರೆ. ಪೊಲೀಸರು ನನ್ನನ್ನು ಹೆದರಿಸುತ್ತಿದ್ದಾರೆ. ರವೀಂದ್ರ ಗಡಾದಿ ಹಾಗೂ ವರ್ಷಾ ಗಡಾದಿ ಎಂಬ ಆರೋಪಿಗಳ ಹೆಸರು ಎಫ್‌ಐಆರ್‌ನಲ್ಲಿ ಬರೆಯುತ್ತಿಲ್ಲ’ ಎಂದೂ ಸಂತ್ರಸ್ತೆ ಆರೋಪಿಸಿದ್ದಾರೆ.

‘ಐಪಿಎಸ್ ಅಧಿಕಾರಿ ರವೀಂದ್ರ ಗಡಾದಿ ಹಾಗೂ ವರ್ಷಾ ಗಡಾದಿ ಅವರೇ ನನ್ನ ಮಗಳ ಜನ್ಮ ದಿನಾಂಕ ತಿದ್ದಿಸಿ ಮದುವೆ ಮಾಡಿಸಿದರು. ನಾವು ಹೆಣ್ಣು ಕೊಡುವುದಿಲ್ಲ ಎಂದು ಹೇಳಿದ್ದೆವು. ಆದರೆ, ಅವರು ನಾನು ಪೊಲೀಸ್ ಅಧಿಕಾರಿಯಾಗಿದ್ದೇನೆ. ಯಾವುದೇ ಸಮಸ್ಯೆ ಆಗದಂತೆ ನೋಡಿಕೊಳ್ಳುವುದಾಗಿ ಹೇಳಿ ಮದುವೆ ಮಾಡಿಸಿದರು’ ಎಂದೂ ತಾಯಿ ದೂರಿದ್ದಾರೆ.

ಈ ಬಾಲ್ಯ ವಿವಾಹದ ವಿಡಿಯೊ, ಫೋಟೊಗಳು ಕೂಡ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದು, ರವೀಂದ್ರ ಗಡಾದಿ ಕೂಡ ಅದರಲ್ಲಿದ್ದಾರೆ.

ಮಹಾರಾಷ್ಟ್ರ ಗಡಿ ಉಸ್ತುವಾರಿಗೆ ಇಬ್ಬರು ಸಚಿವರ ನೇಮಕ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರ ಸರ್ಕಾರವು ತನ್ನ ಗಡಿ ಉಸ್ತುವಾರಿ ಸಚಿವ ಸ್ಥಾನವನ್ನು ಚಂದ್ರಕಾಂತ ಬಚ್ಚು ಪಾಟೀಲ ಮತ್ತು ಶಂಭುರಾಜ್ ದೇಸಾಯಿ ಅವರಿಗೆ ವಹಿಸಿದೆ. ಇದರ ಬಗ್ಗೆ ಶುಕ್ರವಾರ ಆದೇಶ ಹೊರಡಿಸಿದ್ದು, ಗಡಿ ತಂಟೆಯ ವಿಷಯದಲ್ಲಿ ಸಮನ್ವಯ ಸಾಧಿಸುವಂತೆ ತಿಳಿಸಿದೆ.

ಈ ಹಿಂದೆ ಏಕನಾಥ ಶಿಂಧೆ ಅವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲೂ ಇಬ್ಬರೂ ಗಡಿ ಉಸ್ತುವಾರಿ ಸಚಿವರಾಗಿದ್ದರು. ಮಹಾರಾಷ್ಟ್ರದ ಜ್ಯೋತಿರಾವ್ ಫುಲೆ ಜನಾರೋಗ್ಯ ವಿಮೆಯನ್ನು ಕರ್ನಾಟಕದಲ್ಲಿರುವ ಮರಾಠಿಗರಿಗೆ ನೀಡುವಲ್ಲಿ ಯಶಸ್ವಿ ಆಗಿದ್ದರು. ಇದಕ್ಕೆ ಪ್ರತಿಯಾಗಿ ‘ನಾನು ಮರಾಠಿಗ’ ಎಂಬ ಮುಚ್ಚಳಿಕೆಯನ್ನು ಫಲಾನುಭವಿಗಳು ಬರೆದು ಕೊಡಬೇಕು, ಅದಕ್ಕೆ ಮಹಾರಾಷ್ಟ್ರ ಏಕೀಕರಣ ಸಮಿತಿಯ ಅಂಕಿತ ಇರಬೇಕು ಎಂಬ ನಿಯಮ ರೂಪಿಸಿದ್ದರು. ಕನ್ನಡಿಗರ ಸಾಕಷ್ಟು ವಿರೋಧದ ನಡುವೆಯೂ ಈ ಯೋಜನೆ ಮುಂದುವರಿದಿದೆ.

ಎಚ್ಚೆತ್ತುಕೊಳ್ಳದ ಕರ್ನಾಟಕ: ‘ಗಡಿ ವಿಷಯದಲ್ಲಿ ಮಹಾರಾಷ್ಟ್ರ ಸರ್ಕಾರ ಸಾಕಷ್ಟು ಎಚ್ಚರಿಕೆ ವಹಿಸುತ್ತದೆ. ಗಡಿ ಉಸ್ತುವಾರಿಯಾಗಿ ಇಬ್ಬರು ಸಚಿವರನ್ನು ನೇಮಿಸಿದೆ. ಇದು ಬೆಳಗಾವಿಯ ಎಂಇಎಸ್ ನಾಯಕರ ಬೇಡಿಕೆಯಾಗಿತ್ತು. ಗಡಿ ಉನ್ನತಾಧಿಕಾರ ಸಮಿತಿಯ ಜವಾಬ್ದಾರಿಯನ್ನೂ ಇವರಿಗೆ ವಹಿಸಲಾಗಿದೆ. ಪಕ್ಕದ ರಾಜ್ಯದಲ್ಲಿ ಇಷ್ಟೆಲ್ಲ ಗಂಭೀರ ಬೆಳವಣಿಗೆ ನಡೆಯುತ್ತಿವೆ. ಸರ್ಕಾರವು ಈಗಲಾದರೂ ಎಚ್ಚೆತ್ತುಕೊಂಡು ಎಚ್.ಕೆ.ಪಾಟೀಲ ಅವರನ್ನು ಮತ್ತೆ ಗಡಿ ಉಸ್ತುವಾರಿ ಸಚಿವರಾಗಿ ನೇಮಿಸಬೇಕು’ ಎಂದು ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಒತ್ತಾಯಿಸಿದ್ದಾರೆ.

‘ಅಣ್ಣ ಸಿ.ಎಂ ಆಗಬೇಕೆಂಬ ಆಸೆಯಿದೆ’

ಬೆಂಗಳೂರು: ‘ಅಣ್ಣನನ್ನು ಮುಖ್ಯಮಂತ್ರಿ ಮಾಡಬೇಕೆಂಬ ಆಸೆ ಇದೆ. ಅದಕ್ಕೂ ಕಾಲ ಬರಬೇಕು. ಈಗ ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಕುಳಿತಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ತಮ್ಮ, ಮಾಜಿ ಸಂಸದ ಡಿ.ಕೆ. ಸುರೇಶ್ ಇಂಗಿತ ವ್ಯಕ್ತಪಡಿಸಿದರು.

ಡಿ.ಕೆ. ಸುರೇಶ್

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಅವರು ಆ ಸ್ಥಾನದಲ್ಲಿ ಕುಳಿತಿರುವಾಗ ಅವರನ್ನು ಎಳೆದು ಇವರನ್ನು ಕೂರಿಸಲು ಹೇಗಾಗುತ್ತದೆ? ಅವರ ಗೌರವ, ಘನತೆ, ಅವರ ಮೇಲೆ ಇರುವ ನಂಬಿಕೆ ಎಲ್ಲವನ್ನು ಚಿಂತನೆ ಮಾಡಬೇಕು. ಅದೆಲ್ಲವನ್ನು ಪಕ್ಷ ಮಾಡುತ್ತದೆ’ ಎಂದರು.

‘ಅವರು ಮುಖ್ಯಮಂತ್ರಿ ಆಗುತ್ತಾರೆಂಬ ನಂಬಿಕೆ ನಿಮಗೆ ಇದೆಯೇ’ ಎಂದು ಕೇಳಿದಾಗ, ‘ಶಿವಕುಮಾರ್ ಅವರು ಇರುವುದೇ ನಂಬಿಕೆ ಮೇಲೆ. ನಂಬಿಕೆ ಇಲ್ಲದೆ ಬದುಕಲು ಸಾಧ್ಯವೇ? ಎಲ್ಲರೂ ಮತ್ತೊಬ್ಬರನ್ನು ನಂಬಿಯೇ ಜೀವನ ಮಾಡಬೇಕು’ ಎಂದರು.

‘ಪ್ರಧಾನಿ ಭೇಟಿ, ಈಶಾ ಯೋಗಕೇಂದ್ರದ ಕಾರ್ಯಕ್ರಮದಲ್ಲಿ ಭಾಗವಹಿಸುವ ಕುರಿತು ಹೈಕಮಾಂಡ್‌ಗೆ ಶಿವಕುಮಾರ್ ತಿಳಿಸಿದ್ದರು. ಕದ್ದುಮುಚ್ಚಿ ಹೋಗಿಲ್ಲ’ ಎಂದರು.

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ: ಅರಣ್ಯ ಪಡೆ ಮುಖ್ಯಸ್ಥರಿಂದ ಶಿಫಾರಸು

ಡಿಸಿಎಫ್‌ಗಳ ಎಚ್ಚರಿಕೆ ಮಾತಿಗಿಲ್ಲ ಕಿಮ್ಮತ್ತು

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕ ವಿದ್ಯುತ್ ನಿಗಮ ಲಿಮಿಟೆಡ್ (ಕೆಪಿಸಿಎಲ್) ಅನುಷ್ಠಾನಗೊಳಿಸುತ್ತಿರುವ ₹8,005 ಕೋಟಿ ವೆಚ್ಚದ ‘ಶರಾವತಿ ಪಂಪ್ಡ್ ಸ್ಟೋರೇಜ್’ ಯೋಜನೆಗೆ 134 ಎಕರೆ ಕಾಡು ಬಳಸುವ ಪ್ರಸ್ತಾವವನ್ನು ಕರ್ನಾಟಕ ಅರಣ್ಯ ಪಡೆಯ ಮುಖ್ಯಸ್ಥೆ (ಪಿಸಿಸಿಎಫ್) ಮೀನಾಕ್ಷಿ ನೇಗಿ ಅನುಮೋದನೆ ನೀಡಿದ್ದಾರೆ. ಇದೀಗ, ಈ ಶಿಫಾರಸು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಸಲ್ಲಿಕೆಯಾಗಿದೆ.

ಈ ಪ್ರಸ್ತಾವವನ್ನು ಶರಾವತಿ ವನ್ಯಜೀವಿಧಾಮದ ವ್ಯಾಪ್ತಿಯ ಶಿವಮೊಗ್ಗ, ಸಾಗರ ಹಾಗೂ ಹೊನ್ನಾವರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಡಿಸಿಎಫ್) ಜನವರಿಯಲ್ಲಿ ಶಿಫಾರಸು ಮಾಡಿದ್ದರು. ಜತೆಗೆ, ಈ ಯೋಜನೆಯ ಅನುಷ್ಠಾನದಿಂದ ಪಶ್ಚಿಮ ಘಟ್ಟದ ಮೇಲಾಗುವ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಎಚ್ಚರಿಸಿದ್ದರು. ಮೂವರು ಡಿಸಿಎಫ್ ಹಾಗೂ ಕೆನರಾ ಮತ್ತು ಶಿವಮೊಗ್ಗ ವೃತ್ತದ ಸಿಸಿಎಫ್‌ಗಳ ವರದಿಯನ್ನು ಅರಣ್ಯ ಪಡೆಯ ಮುಖ್ಯಸ್ಥರು ಉಲ್ಲೇಖಿಸಿದ್ದಾರೆ. ಆದರೆ, ಯೋಜನೆಯಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ಡಿಸಿಎಫ್‌ಗಳ ಎಚ್ಚರಿಕೆಯ ಮಾತುಗಳನ್ನು ಅರಣ್ಯ ಪಡೆಯ ಮುಖ್ಯಸ್ಥರು ಕೈಬಿಟ್ಟಿದ್ದಾರೆ. ಅರಣ್ಯ ಪಡೆಯ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ವಾರದಲ್ಲೇ ಶರಾವತಿ ಪಂಪ್ಡ್ ಸ್ಟೋರೇಜ್‌ಗೆ ಕಾಡು ಕಡಿಯಲು ಹಸಿರು ನಿಶಾನೆ ತೋರಿದ್ದಾರೆ.

ಯೋಜನೆಗೆ ಬೇಕಿರುವ ಜಾಗ (ಹೆಕ್ಟೇರ್)			
ವಿಭಾಗ	ಅರಣ್ಯ	ಅರಣ್ಯೇತರ	ಒಟ್ಟು
ಶಿವಮೊಗ್ಗ	14.58	0	14.58
ಸಾಗರ	11.64	28.07	39.71
ಹೊನ್ನಾವರ	27.92	60.53	88,46

ವಿದ್ಯುತ್ ಉತ್ಪಾದನೆಗೆ ಬಳಸಿದ ನೀರನ್ನು ಮತ್ತೆ ಮತ್ತೆ ಪಂಪ್‌ಗಳ ಮೂಲಕ ಹಿಂದಕ್ಕೆ ಕೊಂಡೊಯ್ದು, ತಲಾ 250 ಮೆಗಾ ವಾಟ್ ಸಾಮರ್ಥ್ಯದ ಎಂಟು ಜಲ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಬಳಸುವ ಈ ಯೋಜನೆಯ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಕೇಂದ್ರ ವಿದ್ಯುತ್ ಪ್ರಾಧಿಕಾರ 2024ರಲ್ಲಿ ಅನುಮೋದನೆ ನೀಡಿತ್ತು. ಈ ವಿದ್ಯುತ್ ಯೋಜನೆಯನ್ನು ಅಸ್ತಿತ್ವದಲ್ಲಿರುವ ಎರಡು ಜಲಾಶಯಗಳ ನಡುವೆ ನಿರ್ಮಿಸಲಾಗುತ್ತದೆ. ತಲಕಳಲೆ ಅಣೆಕಟ್ಟೆ ಮೇಲಿನ ಜಲಾಶಯ ಆಗಿರಲಿದೆ. ಗೇರುಸೊಪ್ಪ ಅಣೆಕಟ್ಟೆ ಕೆಳಗಿನ ಜಲಾಶಯ ಆಗಿರಲಿದೆ.

ಅಳಿವಿನಂಚಿನಲ್ಲಿರುವ ಸಿಂಹ ಬಾಲದ ಸಿಂಗಳಿಕಗಳ ಆವಾಸಸ್ಥಾನದಲ್ಲೇ ಈ ಜಲವಿದ್ಯುತ್ ಯೋಜನೆ ಅನುಷ್ಠಾನಗೊಳ್ಳಲಿದೆ. ಈ ಯೋಜನೆಯಿಂದ ಪಶ್ಚಿಮ ಘಟ್ಟ ಇನ್ನಷ್ಟು ಹಾನಿ ಉಂಟಾಗಲಿದೆ ಎಂದು ವನ್ಯಜೀವಿ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಜಲವಿದ್ಯುತ್ ಯೋಜನೆ ಕೈಗೆತ್ತಿಕೊಳ್ಳುವಂತಿಲ್ಲ ಎಂದು ಕೇಂದ್ರ ಪರಿಸರ ಸಚಿವಾಲಯ 2011ರಲ್ಲಿ ಸುತ್ತೋಲೆ ಹೊರಡಿಸಿರುವುದು ಮತ್ತು ಈ ಯೋಜನೆಯು ಶರಾವತಿ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ಪ್ರದೇಶದಲ್ಲೇ ಕಾರ್ಯಗತಗೊಳ್ಳುತ್ತಿದೆ ಎಂಬುದು ಹೌದಾದರೂ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಜಲ ವಿದ್ಯುತ್ ಯೋಜನೆಯೊಂದಿಗೆ ಸಮೀಕರಿಸುವುದು ಸರಿಯಲ್ಲ. ಏಕೆಂದರೆ, ಜಲ ವಿದ್ಯುತ್ ಯೋಜನೆ ಎಂಬುದು ಪಂಪ್ಡ್ ಸ್ಟೋರೇಜ್ ಯೋಜನೆಗಿಂತ ವಿಭಿನ್ನವಾಗಿದ್ದು, ಈ ಯೋಜನೆಯಡಿ ಜಲಾಶಯಗಳನ್ನು ನಿರ್ಮಿಸುವ ಅಗತ್ಯ ಇರುವುದಿಲ್ಲ ಎಂದು ಕೆಪಿಸಿಎಲ್ ಸ್ಪಷ್ಟಪಡಿಸಿದೆ.

ವನ್ಯಜೀವಿ ಮಂಡಳಿ: ನಾಳೆ ಚರ್ಚೆ ಸಂಭವ

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಸಭೆ ಇದೇ 3ರಂದು ಗುಜರಾತ್‌ನ ಜುನಾಘಡ್ ಜಿಲ್ಲೆಯ ಸಾಸನ್‌ನಲ್ಲಿ ನಡೆಯಲಿದೆ. ಈ ಸಭೆಯಲ್ಲಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ವನ್ಯಜೀವಿ ಅನುಮೋದನೆಯ ಪ್ರಸ್ತಾವ ಚರ್ಚೆಗೆ ಬರುವ ಸಂಭವ ಇದೆ. ಈ ಯೋಜನೆಗೆ ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ ಕಳೆದ ತಿಂಗಳು ಒಪ್ಪಿಗೆ ನೀಡಿತ್ತು.

16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಅದ್ದೂರಿ ಚಾಲನೆ

ಚಿತ್ರನಗರಿಗೆ 150 ಎಕರೆ ಭೂಮಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣಕ್ಕಾಗಿ ಕೆಐಎಡಿಬಿಯಿಂದ ವಾರ್ತಾ ಇಲಾಖೆಗೆ 150 ಎಕರೆ ಭೂಮಿ ವರ್ಗಾಯಿಸಲಾಗಿದೆ. ಸಿನಿಮಾ ನಿರ್ಮಾಣಕ್ಕೆ ಸಕಲ ಸೌಕರ್ಯ ಹೊಂದಿರುವ ವಿಶ್ವದರ್ಜೆಯ ಫಿಲಂ ಸಿಟಿಯನ್ನು ಪಿಪಿಪಿ ಮಾದರಿಯಲ್ಲಿ ನಿರ್ಮಾಣ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶನಿವಾರ ವಿಧಾನಸೌಧದ ಮುಂಭಾಗದಲ್ಲಿ 16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಚಿತ್ರೋದ್ಯಮದ ಜೊತೆ ಸದಾ ಇರುತ್ತದೆ. ಜನರಿಗೆ ಬೇಕಾದ, ಸಮಾಜಕ್ಕೆ ಬೇಕಾದ ಸಿನಿಮಾಗಳನ್ನು ನಿರ್ಮಿಸಿ. ಮೌಢ್ಯಗಳನ್ನು ಬಿತ್ತುವ ಚಿತ್ರ ಮಾಡಬಾರದು ಎಂದರು.

ತಂತ್ರಜ್ಞಾನಗಳು ಸಾಕಷ್ಟು ಅಭಿವೃದ್ಧಿ ಆಗಿವೆ. ಕೃತಕ ಬುದ್ಧಿಮತ್ತೆಯನ್ನು ಚಿತ್ರೋದ್ಯಮವು ಬಳಸಿಕೊಳ್ಳಬೇಕು. ಬದುಕನ್ನು ಪ್ರತಿಬಿಂಬಿಸುವ ಚಿತ್ರಗಳು ಬರಬೇಕು. ಆಗ ಮಾತ್ರ ಚಲನಚಿತ್ರೋದ್ಯಮ ಬೆಳೆಯಲು ಸಾಧ್ಯ. ಚಲನಚಿತ್ರ ಕಲೆಯಲ್ಲ, ನಮ್ಮ ಸಂಸ್ಕೃತಿ ಕೂಡ ಹೌದು. ನಮ್ಮಲ್ಲಿ ಅಸಹನೆ, ವೈಷಮ್ಯ ಹೆಚ್ಚಾಗಿ ಪ್ರೀತಿ, ಅಭಿಮಾನ ಕಡಿಮೆಯಾಗಿದೆ. ಹೀಗಾಗಿ ಈ ಸಲ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಧ್ಯೇಯದೊಂದಿಗೆ ಚಿತ್ರೋತ್ಸವ ನಡೆಯುತ್ತಿದೆ. ಅಂಥ ವಾತಾವರಣವನ್ನು ಸಮಾಜದಲ್ಲಿ ನಿರ್ಮಿಸಲು ಸಿನಿಮಾ ಮಾಧ್ಯಮ ಸಹಕಾರಿ ಎಂದು ತಿಳಿಸಿದರು.

16ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ನಟಿ ಪ್ರಿಯಾಂಕಾ ಮೋಹನ್, ಇಂಧನ ಸಚಿವ ಕೆ.ಜೆ ಜಾರ್ಜ್, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ರಿಜ್ವಾನ್ ಅರ್ಷದ್, ನಟ ಶಿವರಾಜ್ ಕುಮಾರ್, ನಟಿ ಉಮಾಶ್ರೀ ಮತ್ತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ. ನರಸಿಂಹಲು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನಟ್-ಬೋಲ್ಟ್ ಟೈಟ್ ಮಾಡ್ತೀವಿ: ಡಿ.ಕೆ. ಶಿವಕುಮಾರ್

ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಿತ್ರೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಬೇಕಿದ್ದ ಕಲಾವಿದರು, ಚಿತ್ರೋದ್ಯಮಿಗಳನ್ನು ತರಾಟೆಗೆ ತೆಗೆದುಕೊಂಡರು.

'ಅರಿಂದು ನಟನಟಿಯರು ಮಾತ್ರ ಇಲ್ಲಿ ಕಾಣುತ್ತಿದ್ದಾರೆ. ಚಿತ್ರೋತ್ಸವ ನನ್ನ ಮನೆ ಹಬ್ಬವಲ್ಲ, ಸರ್ಕಾರದ ಕಾರ್ಯಕ್ರಮವಲ್ಲ, ಚಿತ್ರೋದ್ಯಮದ ಕಾರ್ಯಕ್ರಮ. ಇದರಲ್ಲಿಯೇ ಚಿತ್ರೋದ್ಯಮಿಗಳು ಭಾಗವಹಿಸದಿರುವುದು ಬೇಸರದ ಸಂಗತಿ. ನಮ್ಮ ಜೊತೆ ಕೈಜೋಡಿಸದವರ ಬೋಲ್ಟು, ನಟ್‌ಗಳನ್ನು ಎಲ್ಲಿ ಟೈಟ್ ಮಾಡಬೇಕೆಂಬುದು ತಿಳಿದಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಷ್ಟಕಾಲದಲ್ಲಿ ನಮ್ಮ ಜೊತೆ ನಿಂತ ಕಲಾವಿದರಿಗೆ ಸೂಕ್ತ ಸ್ಥಾನ ನೀಡಿದ್ದೇವೆ. ನಾವು ಎಲ್ಲವನ್ನೂ ಗಮನಿಸುತ್ತ ಇರುತ್ತೇವೆ. ಕಲೆ, ಸಿನಿಮಾದ ಮೂಲಕ ಸರ್ಕಾರದ ಆಚಾರ, ವಿಚಾರಗಳನ್ನು ಪ್ರಚಾರ ಮಾಡುವುದು ನಿಮ್ಮ ಕರ್ತವ್ಯ. ಸರ್ಕಾರಕ್ಕೆ ಸಹಕಾರ ನೀಡದವರ ಚಿತ್ರಗಳ ಚಿತ್ರೀಕರಣಕ್ಕೆ, ಬಿಡುಗಡೆಗೆ ಅವಕಾಶ ನೀಡದ ದಿನ ಮಾಡಲು ತಿಳಿದಿದೆ. ಇದು ಎಚ್ಚರಿಕೆ ಎಂದಾದರೂ ಭಾವಿಸಿ, ಮನವಿ ಎಂದಾದರೂ ಅಂದುಕೊಳ್ಳಿ. ಇಂಥ ಕಾರ್ಯಕ್ರಮಗಳಿಗೆ ಬೆಂಬಲ ನೀಡುವ ಪ್ರವೃತ್ತಿ ಬೆಳೆಸಿಕೊಳ್ಳಿ' ಎಂದರು.

'ಇತಿಹಾಸ ತಿರುಚುವ ಸಿನಿಮಾಗಳು': ಚಿತ್ರೋತ್ಸವದ ರಾಯಭಾರಿ ಹಾಗೂ ನಟ ಕಿಶೋರ್, ಕುವೆಂಪು ಅವರ 'ಬಾರಿಸು ಕನ್ನಡ ಡಿಂಡಿಮ' ಕವಿತೆ ವಾಚಿಸಿ ಎಲ್ಲರ ಚಪ್ಪಾಳೆ ಗಿಟ್ಟಿಸಿದರು. ಇಂದು ಚಿತ್ರೋದ್ಯಮ ಪಟ್ಟಭದ್ರ ಹಿತಾಸಕ್ತಿಗಳ ಸ್ವತ್ತಾಗುತ್ತಿದ್ದು, ಇತಿಹಾಸ ತಿರುಚುವ, ದ್ವೇಷ ಬಿತ್ತುವ ಸಿನಿಮಾಗಳು ಹೆಚ್ಚಾಗುತ್ತಿವೆ. ಮನೆಹಾಳು ರಾಜಕಾರಣವನ್ನು ಸಿನಿಮಾದಲ್ಲಿ ತುರುಕಲಾಗುತ್ತಿದೆ. ಇದರಿಂದ ಚಿತ್ರರಂಗಕ್ಕೆ ಬಿಡುಗಡೆ ಬೇಕಿದೆ. ಬಸವಣ್ಣ, ಕುವೆಂಪು ಆಶಯಗಳು ಚಿತ್ರವಾಗಬೇಕು. ಸಿನಿಮಾವನ್ನು ಪಠ್ಯದಲ್ಲಿ ಸೇರಿಸಿ ವಿದ್ಯಾಭ್ಯಾಸದ ಭಾಗವಾಗಿಸಬೇಕು ಎಂದು ಕಿಶೋರ್ ಮನವಿ ಮಾಡಿದರು.

'ಚಿತ್ರೀಕರಣದಲ್ಲಿ ಭಾಗಿ': ನಟ ಶಿವರಾಜಕುಮಾರ್ ಮಾತನಾಡಿ, 'ಚಿತ್ರೋತ್ಸವ ನಮ್ಮ ಮನೆ ಹಬ್ಬ. ಪ್ರತಿ ವರ್ಷ ಚಿತ್ರೋತ್ಸವದಲ್ಲಿ ಭಾಗಿಯಾಗುವೆ. ನಿಮ್ಮೆಲ್ಲರ ಪ್ರೀತಿ, ವಿಶ್ವಾಸದಿಂದ ಶಸ್ತ್ರಚಿಕಿತ್ಸೆ ಮುಗಿಸಿ ಬಂದಿರುವೆ, ನಾಡಿದ್ದಿನಿಂದ ಚಿತ್ರೀಕರಣದಲ್ಲಿ ಭಾಗಿಯಾಗುವೆ. ನನ್ನಲ್ಲಿ ಅದೇ ಎನರ್ಜಿ, ಅದೇ ಪವರ್ ಇರುತ್ತದೆ' ಎಂದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ ಸೇರಿದಂತೆ ಅನೇಕ ಗಣ್ಯರು ಸಮಾರಂಭದಲ್ಲಿ ಹಾಜರಿದ್ದರು.

ಗಣ್ಯರಿಗೆ ಜಾಗವಿಲ್ಲ

ಸಮಾರಂಭದ ಅವ್ಯವಸ್ಥಿತ ಆಯೋಜನೆಯಿಂದ ಚಿತ್ರರಂಗದ ಅನೇಕ ಗಣ್ಯರು ಕೂರಲು ಜಾಗವಿಲ್ಲದೆ ಪರದಾಡುವಂತಾಯಿತು. ವಿಧಾನ ಸೌಧದ ಮುಂಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ಥಳದ ಅಭಾವ ಎದ್ದು ಕಾಣುತ್ತಿತ್ತು. ಕೆಲ ನಿರ್ಮಾಪಕರು, ಗಣ್ಯರು, ಚಿತ್ರೋತ್ಸವದ ಸ್ಪರ್ಧೆಯಲ್ಲಿದ್ದ ಚಿತ್ರಗಳ ತಂಡದವರನ್ನು ಭದ್ರತಾ ಸಿಬ್ಬಂದಿ ತಡೆದು ನಿಲ್ಲಿಸಿ, ಗೇಟಿನ ಬಳಿಯೇ ನಿಂತು ಕಾರ್ಯಕ್ರಮ ವೀಕ್ಷಿಸುವಂತಾಯಿತು.

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆ ಪ್ರವೇಶಕ್ಕೆ 20,134 ಅರ್ಜಿ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಶ್ರಯದಲ್ಲಿ ನಡೆಯುತ್ತಿರುವ ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಪ್ರವೇಶ ಪರೀಕ್ಷೆಯು ಇದೇ 2ರಂದು ಭಾನುವಾರ ಸಂಸ್ಥೆಯ ವಿದ್ಯಾಗಿರಿ ಹಾಗೂ ಪುತ್ತಿಗೆ ಶಾಲಾ ಆವರಣದ 5 ಕೇಂದ್ರಗಳಲ್ಲಿ ನಡೆಯಲಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ 20,134 ಅರ್ಜಿ ಸ್ವೀಕೃತವಾಗಿವೆ. ಎರಡೂವರೆ ಗಂಟೆ ಅವಧಿಯ, 150 ಅಂಕಗಳ ಪರೀಕ್ಷೆಯನ್ನು ಎದುರಿಸಿ ಆಯ್ಕೆಯಾದ ವಿದ್ಯಾರ್ಥಿಗಳು 6ರಿಂದ 10ನೇ ತರಗತಿ ವರೆಗಿನ ಶಿಕ್ಷಣವನ್ನು ಉಚಿತ ಊಟ, ವಸತಿ ಹಾಗೂ ಇತ್ಯಾದಿ ಸೌಲಭ್ಯಗಳೊಂದಿಗೆ ಪಡೆಯಲಿದ್ದಾರೆ.

'ಸರ್ಕಾರದ ಹೆಚ್ಚಿನ ಕನ್ನಡ ಮಾಧ್ಯಮ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಮುಚ್ಚುವ ಅಥವಾ ಶಾಲೆಗಳನ್ನು ವಿಲೀನಗೊಳಿಸುವ ಪರಿಸ್ಥಿತಿ ಇದೆ. ನಮ್ಮ ಕನ್ನಡ ಮಾಧ್ಯಮ ಶಾಲೆಯ ಪ್ರವೇಶಕ್ಕೆ ಸ್ಪರ್ಧೆ ಹೆಚ್ಚುತ್ತಿರುವುದನ್ನು ಅರ್ಜಿಗಳ ಸಂಖ್ಯೆ ಗಮನಿಸಿದರೆ, ಗುಣಮಟ್ಟದ ಶಿಕ್ಷಣ ನೀಡಿದರೆ ಖಂಡಿತವಾಗಿಯೂ ಕನ್ನಡ ಮಾಧ್ಯಮಕ್ಕೂ ವಿದ್ಯಾರ್ಥಿಗಳ ಕೊರತೆ ಎದುರಾಗದು. ಅದನ್ನು ಆಳ್ವಾಸ್ ಸಂಸ್ಥೆ ಸಾಬೀತುಪಡಿಸಿದೆ' ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ತಿಳಿಸಿದ್ದಾರೆ.

ಉಕ್ಕಡಗಾತ್ರಿ ರಥೋತ್ಸವ

ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ಉಕ್ಕಡಗಾತ್ರಿಯ ಕರಿಬಸವೇಶ್ವರ (ಅಜ್ಜಯ್ಯ) ರಥೋತ್ಸವ ಶನಿವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯಿಂದ ನಡೆಯಿತು

ಅಪಘಾತ: ಐವರು ವಿದ್ಯಾರ್ಥಿಗಳ ಸಾವು

ಪ್ರಜಾವಾಣಿ ವಾರ್ತೆ

ಸುಹಾಸ್

ಶ್ರೇಯಸ್

ನಿತಿನ್

ಶ್ರೀಲಕ್ಷ್ಮಿ

ಲಿಖಿತಾ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಮಧುವನಹಳ್ಳಿ ಹಾಗೂ ಚಿಕ್ಕಿಂದುವಾಡಿ ಗ್ರಾಮದ ಮುಖ್ಯ ರಸ್ತೆಯಲ್ಲಿ ಶನಿವಾರ ಟಿಪ್ಪರ್ ಹಾಗೂ ಕಾರಿನ ನಡುವೆ ಸಂಭವಿಸಿದ ಅಪಘಾತದಲ್ಲಿ ಕಾರಿನಲ್ಲಿದ್ದ ಐವರು ವಿದ್ಯಾರ್ಥಿಗಳು ಸ್ಥಳದಲ್ಲೇ ಮೃತಪಟ್ಟರು.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಲಕ್ಷ್ಮೀಗೌಡನದೊಡ್ಡಿಯ ನಿತಿನ್ (22), ಮಂಡ್ಯ ನಗರದ ಶ್ರೀರಾಮನಗರ ಬಡಾವಣೆಯ ಸುಹಾಸ್ (21), ಮಂಡ್ಯ ತಾಲ್ಲೂಕಿನ ಹಲ್ಲೆಗೆರೆಯ ಶ್ರೇಯಸ್ (21), ಮೈಸೂರಿನ ಅಲಹಳ್ಳಿಯ ಶ್ರೀಲಕ್ಷ್ಮಿ (22) ಹಾಗೂ ಪಿರಿಯಾಪಟ್ಟಣ ತಾಲ್ಲೂಕಿನ ಶ್ಯಾನಭೋಗನಹಳ್ಳಿಯ ಲಿಖಿತಾ (22) ಮೃತಪಟ್ಟವರು. ಎಲ್ಲರೂ ಮೈಸೂರಿನ ಎಂಐಟಿ ಎಂಜಿನಿಯರ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ಎಂಜಿನಿಯರಿಂಗ್ ಓದುತ್ತಿದ್ದರು.

ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದಿದ್ದ ಐವರೂ ಮಲೆಮಹದೇಶ್ವರ ಬೆಟ್ಟದ ರಥೋತ್ಸವದಲ್ಲಿ ಹರಕೆ ತೀರಿಸಲೆಂದು ಹೋಗುವಾಗ ಅಪಘಾತ ಸಂಭವಿಸಿದೆ. ಮೃತ ನಿತಿನ್ ಅಂಗಾಂಗ ದಾನ ಮಾಡಲು ತಂದೆ ಪುಟ್ಟಸ್ವಾಮಿ ನಿರ್ಧರಿಸಿದ್ದಾರೆ.

ಪೊಲೀಸರ ವಿರುದ್ಧ ಪ್ರತಿಭಟನೆ: 'ಅಪಘಾತಕ್ಕೆ ಕಾರಣನಾಗಿರುವ ಲಾರಿ ಚಾಲಕ ಹಾಗೂ ಮಾಲೀಕನನ್ನು ಪೊಲೀಸರು ಬಂಧಿಸಿಲ್ಲ' ಎಂದು ಮೃತರ ಕುಟುಂಬಸ್ಥರು ಗ್ರಾಮಾಂತರ ಠಾಣೆ ಎದುರು ಆಕ್ರೋಶ ವ್ಯಕ್ತಪಡಿಸಿದರು. ದಕ್ಷಿಣ ವಲಯ ಐಜಿಪಿ ಎಂ.ಬಿ.ಬೋರಲಿಂಗಯ್ಯ, ಎಸ್‌ಪಿ ಬಿ.ಟಿ.ಕವಿತಾ ಭೇಟಿ ನೀಡಿ ಸಮಾಧಾನಪಡಿಸಿದರು.

ಮಂತ್ರಾಲಯದಲ್ಲಿ ಗುರುವೈಭವೋತ್ಸವ

ರಾಯಚೂರು: ಶ್ರೀರಾಘವೇಂದ್ರ ಸ್ವಾಮಿಗಳ 404ನೇ ಪಟ್ಟಾಭಿಷೇಕ ಮಹೋತ್ಸವ ಹಾಗೂ 430ನೇ ವರ್ಧಂತಿ ಉತ್ಸವದ ಅಂಗವಾಗಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶನಿವಾರ ಗುರುವೈಭವೋತ್ಸವವು ಸಂಭ್ರಮದಿಂದ ಪ್ರಾರಂಭವಾಯಿತು.

ಮಹೋತ್ಸವದ ಅಂಗವಾಗಿ ರಾಘವೇಂದ್ರ ಸ್ವಾಮಿಗಳ ಮೂಲ ಪಾದುಕೆಗಳ ಪಟ್ಟಾಭಿಷೇಕ ಮಹೋತ್ಸವ, ನಂತರ ರಾಯರ ರಥೋತ್ಸವ ಜರುಗಿತು. ಮಂತ್ರಾಲಯ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ರಥೋತ್ಸವಕ್ಕೆ ಚಾಲನೆ ನೀಡಿದರು.

ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಮಲೆ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ವಿಜೃಂಭಣೆಯ ರಥೋತ್ಸವ ಶನಿವಾರ ನಡೆಯಿತು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
'ಜಲಭವನ', ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು–560029.
ದೂ: 080–41106508 ಇಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ ಮುಖಾಂತರ ಮಾತ್ರ)

ಸಂಖ್ಯೆ: KWB/TEC/CE(B)/Chintamani DC works/1230/2024-25 Dtd: 28.02.2025.

ಕಾಮಗಾರಿಯ ಹೆಸರು: ಚಿಂತಾಮಣಿ ನಗರಸಭೆಯ ಠೇವಣಿ ಕೊಡುಗೆ ಕಾಮಗಾರಿಯಡಿಯಲ್ಲಿ ಗೋಪಸಂದ್ರ ಔಟ್‌ಪಾಲ್‌ಗೆ ಸಂಪರ್ಕಿಸುವ ಕೆಜಿಎನ್ ಲೇಔಟ್, ಆರ್‌ಕೆ ಲೇಔಟ್, ರಾಜಪ್ಪ ಲೇಔಟ್, ತಪತೇಶ್ವರ ಕಾಲೋನಿ, ಮಾಲಪಳ್ಳಿ ಮತ್ತು ಕೋಲಾರ ರಸ್ತೆಯಲ್ಲಿ ಹಾಲಿಯಿರುವ ಒಳಚರಂಡಿ ಕೊಳವೆ ಮಾರ್ಗವನ್ನು ತೆರವುಗೊಳಿಸಿ, ಬದಲಾಯಿಸುವ ಮತ್ತು ಹೊಸ ಒಳಚರಂಡಿ ಕೊಳವೆ ಮಾರ್ಗ ಗೃಹ ಸಂಪರ್ಕದೊಂದಿಗೆ ಒದಗಿಸಿ, ಅಳವಡಿಸುವ, ಡೀಸಿಲ್ಟಿಂಗ್ ಮತ್ತು ದುರಸ್ತಿ ಕಾಮಗಾರಿಗಳು (LUMPSUM-NO VARIATION)". **ಇಂಡೆಂಟ್ ನಂ: KUWSDB/2024-25/WS/WORK_INDENT297/CALL-3.**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : **https://kppp.karnataka.gov.in** ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು(ಬೆಂ),
ಕನನೀಸ & ಒಚ ಮಂಡಳಿ, ಬೆಂಗಳೂರು

DIPR/CP/YC/5379/2024-25

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಕಾರವಾರ ವಿಭಾಗ, ಕಾರವಾರ
ಕಾರವಾರ ವಿಭಾಗ, ಕಾರವಾರ ಇದರ ಹಟ್ಟಿಕೇರಿ ಡಿಪೋದಲ್ಲಿ ಮರದ ಇ–ಟೆಂಡರ್ ಹಾಗೂ ಹರಾಜಿನ ವಿವರವಾದ ಪ್ರಕಟಣೆ

ಸಂಖ್ಯೆ: ಎ6/ಡಿಪೋ/ಇ–ಹರಾಜು/ಮಾರ್ಚ್–2025/ಸಿಆರ್–04/2024–25 ದಿನಾಂಕ: 25.02.2025

ಸಾರ್ವಜನಿಕರ ಸಾಮಾನ್ಯ ಮಾಹಿತಿಗಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಕಾರವಾರ ವಿಭಾಗ, ಕಾರವಾರ ಇದರ **ಹಟ್ಟಿಕೇರಿ ಸರ್ಕಾರಿ ಟಿಂಬರ್ ಡಿಪೋದಲ್ಲಿ** ದಾಸ್ತಾನು ಮಾಡಿರುವ ಮತ್ತು ಲಾಟು ಮಾಡಿರುವ ಮರ ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು **ದಿನಾಂಕ: 15–03–2025 ರಂದು (ಎಲ್ಲಾ ನಾಲ್ಕು ಸೆಷನ್‌ಗಳಿಗೆ) ಬೆಳಿಗ್ಗೆ 10.00** ಗಂಟೆಯಿಂದ ಪ್ರಾರಂಭವಾಗಿ ಎಲ್ಲಾ ಲಾಟುಗಳಿಗೆ ಬಿಡ್ಡಿಂಗ್ ಪೂರ್ಣವಾಗುವವರೆಗೆ ಒಂದು ಮತ್ತು ಎರಡು ಸೆಷನ್‌ಗಳಲ್ಲಿ ಬಹಿರಂಗ ಇ–ಟೆಂಡರ್ ಹಾಗೂ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ ಇವರು ಮಾರಾಟ ನಡೆಸುವ ಅಧಿಕಾರಿಯಾಗಿರುವರು.

ಯಾವುದೇ ಸ್ಪಷ್ಟನೆಗಳಿಗಾಗಿ ನೀವು ಇವರನ್ನು ಸಂಪರ್ಕಿಸಬಹುದು:

ಸರ್ಕಾರಿ ಟಿಂಬರ್ ಡಿಪೋ, ಹಟ್ಟಿಕೇರಿ:
gtdhattikeri@gmail.com ದೂರವಾಣಿ: 08388–248796

ವಲಯ ಅರಣ್ಯಾಧಿಕಾರಿ, ಅಂಕೋಲ:
rangeforestankola@gmail.com ದೂರವಾಣಿ: 08388–230342

ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರವಾರ ವಿಭಾಗ, ಕಾರವಾರ:
karwardcf@gmail.com ದೂರವಾಣಿ: 08382–226365.

ಸಹಿ/– (ರವಿಶಂಕರ್ ಸಿ. IFS)
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕಾರವಾರ ವಿಭಾಗ, ಕಾರವಾರ

DIPR/KWR/KSMCA/933/24-25 Dt. 01.03.2025

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
'ಜಲಭವನ', ನಂ. 6, 1ನೇ ಘಟ್ಟ, 1ನೇ ಹಂತ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು–560029.
ದೂ: 080–41106508 ಇಮೇಲ್: cekwbbng@gmail.com ವೆಬ್‌ಸೈಟ್: https://kppp.karnataka.gov.in

ಟೆಂಡರ್‌ಗಾಗಿ ಆಹ್ವಾನ ಪ್ರಕಟಣೆ (ಕೆಪಿಪಿಪಿ ಮುಖಾಂತರ ಮಾತ್ರ)

1) ಸಂಖ್ಯೆ: KWB/TEC/CE(B)/Sidlaghata/AMRUT2.0/1237/2024-25 Dtd:01.03.2025

ಕಾಮಗಾರಿಯ ಹೆಸರು: ಡಿಬಿಓಟಿ ಆಧಾರದ ಮೇಲೆ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (1 ವರ್ಷದ ದೋಷ ಹೊಣೆಗಾರಿಕೆ ಅವಧಿ ಸೇರಿದಂತೆ) ಒಳಗೊಂಡಂತೆ ಅಮೃತ್ 2.0 ಯೋಜನೆಯಡಿ (ಟ್ರೆಂಚ್–3) ರಾಮಸಮುದ್ರ ಟ್ಯಾಂಕ್ ಮೂಲವಾಗಿಟ್ಟುಕೊಂಡು ಶಿಡ್ಲಘಟ್ಟ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿ. **ಇಂಡೆಂಟ್ ನಂ: KUWSDB/2024-25/WS/WORK_INDENT318.**

2) ಸಂಖ್ಯೆ: KWB/TEC/CE(B)/Kunigal/AMRUT2.0/1238/2024-25 Dtd:01.03.2025

ಕಾಮಗಾರಿಯ ಹೆಸರು: ಡಿಬಿಓಟಿ ಆಧಾರದ ಮೇಲೆ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (1 ವರ್ಷದ ದೋಷ ಹೊಣೆಗಾರಿಕೆ ಅವಧಿ ಸೇರಿದಂತೆ) ಒಳಗೊಂಡಂತೆ ಅಮೃತ್ 2.0 ಯೋಜನೆಯಡಿ (ಟ್ರೆಂಚ್–3) ಹೇಮಾವತಿ ನಾಲೆ ಮೂಲವಾಗಿಟ್ಟುಕೊಂಡು ಕುಣಿಗಲ್ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ ಒದಗಿಸುವ ಕಾಮಗಾರಿ. **ಇಂಡೆಂಟ್ ನಂ: KUWSDB/2024-25/WS/WORK_INDENT319**

ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ : **https://kppp.karnataka.gov.in** ನಲ್ಲಿ ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರರು(ಬೆಂ),
ಕನನೀಸ & ಒಚ ಮಂಡಳಿ, ಬೆಂಗಳೂರು

DIPR/CP/YC/5399/2024-25

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯಾಲಯ ಕಾರ್ಯನಿರ್ವಾಹಕ ಇಂಜನೀಯರರು,
ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2 ಭೀಮರಾಯನಗುಡಿ
ಇ–ಮೇಲ್: eejbc2@gmail.com+

ಸಂಖ್ಯೆ: ಕೃಭಾಜನಿನಿ/ಜೆಬಿಸಿ/ವಿ–2/ಟಿಎನ್‌ಡಿ/ಯೋಶಾ/2024–25/1070 ದಿನಾಂಕ:28.02.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ ಜೆ.ಬಿ.ಸಿ.ವಿಭಾಗ ಸಂಖ್ಯೆ. 2, ಭೀಮರಾಯನಗುಡಿ ರವರು ಇ–ಟೆಂಡರಿಂಗ್ ಮುಖಾಂತರ ಟೆಂಡರ್ ಅಹ್ವಾನಿಸಲಾಗಿದ್ದು, ಕಾಮಗಾರಿಗಳ ವಿವರಗಳು ಈ ಕೆಳಗಿನಂತಿರುತ್ತವೆ;

ಕಾಮಗಾರಿಗಳ ಇಂಡೆಂಟ್ ಸಂಖ್ಯೆ: Other Indent no: 1)1473 2)1475 3)1477 4)1480 5)1483 6)1508 7)1511 8)1509 9)1510 10)1530 Reserved Indent no : 1)1474 2) 1478 3) 1479 4)1484 5)1502 6)1507 7)1531 8)1329 –Call-2 1) ಟೆಂಡರಗೆ ಇಟ್ಟ ಮೊತ್ತ: ಗರಿಷ್ಠ ಮೊತ್ತ ರೂ. 84.67 ಲಕ್ಷಗಳು ಕನಿಷ್ಠ ಮೊತ್ತ ರೂ. 1.27 ಲಕ್ಷಗಳು 2) ಟೆಂಡರಗೆ ಇಟ್ಟ ಇ.ಎಂ.ಡಿ ಮೊತ್ತ ಗರಿಷ್ಠ ಮೊತ್ತ ರೂ. 1,00,000/– ಕನಿಷ್ಠ ಮೊತ್ತ ರೂ. 1,875/– 3) ಇ–ಟೆಂಡರಿಂಗ ಲಭ್ಯವಾಗುವ ಅವಧಿ 28.02.2025 ಮುಂಜಾನೆ 11.30 ಗಂಟೆ ಯಿಂದ 07.03.2025 ಸಾಯಂಕಾಲ 05.00 ಗಂಟೆ ವರೆಗೆ. 4) ಇ–ಟೆಂಡರಿಂಗ ಕೊನೆಯ ದಿನಾಂಕ: 07.03.2025 ಸಾಯಂಕಾಲ 05.00 ಗಂಟೆ ವರೆಗೆ. 5) ತಾಂತ್ರಿಕ ಟೆಂಡರ್ ಮತ್ತು ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 10.03.2025 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ 6) ಆರ್ಥಿಕ ಟೆಂಡರ್ ತೆರೆಯುವ ದಿನಾಂಕ: 16.03.2025 ಮುಂಜಾನೆ 11.30 ಗಂಟೆಗೆ, ಸದರಿ ವಿಭಾಗ ಕಛೇರಿಯಲ್ಲಿ (For only Ind.No :1329 –Call-2 ,1510 7) ಸಂಪರ್ಕಿಸಬೇಕಾದ ಕಛೇರಿ ವಿಳಾಸ: ಹೆಚ್ಚಿನ ಮಾಹಿತಿಗಾಗಿ ವೆಬಸೈಟ್ http://www.kppp.Karnataka.gov.in ನಲ್ಲಿ ನೋಡಬಹುದು ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ವಾ.ಸಾ.ಸಂ.ಇ/ಯಾದಗಿರಿ/527/ಕೆ.ಎಸ್.ಎಂ.ಸಿ.ಎ/2024–25 ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿ(ನಿ), ಜೆ.ಬಿ.ಸಿ.ವಿಭಾಗ ಸಂಖ್ಯೆ. 2 ಭೀಮರಾಯನಗುಡಿ

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ, ಧಾರವಾಡ
ಕಾರ್ಯನಿವಾಹಕ ಇಂಜನೀಯರವರ ಕಚೇರಿ ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ಕ್ರಸಂ: ಕಾನಿಇಂಧಾ/ಗುತ್ತಿಗೆ/ಪಿ.ಬಿ.1,2,3,4,5/2024–25/6692 ದಿನಾಂಕ: 28–02–2025

ಟೆಂಡರ ಪ್ರಕಟಣೆ
I.F.T – KW – 1, 2, 3 & 4
ಇ–ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ ಡಾಕ್ಯುಮೆಂಟ್ ಮುಖಾಂತರ)

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಕೆಡಬ್ಲ್ಯೂ–1,2, 3 & 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (kppp.karnataka.gov.in) ಪೋರ್ಟಲ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ದತಿಯಲ್ಲಿ ಲೆಕ್ಕ ಶೀರ್ಷಿಕೆ: 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳ ಸುಧಾರಣೆ, 3054–03–102–0–01–200 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, 3054–04–337–1–10–200 ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ, 2059–80–053–4–00–200 ಇಲಾಖಾ ಕಟ್ಟಡಗಳ ನಿರ್ವಹಣೆ, 2216–07–053–0–01–200 ವಸತಿ ಗೃಹಗಳ ದುರಸ್ತಿ ಹಾಗೂ ಸಮಗ್ರ ಶಿಕ್ಷಣ ಯೋಜನೆಯಡಿ ಕಾಮಗಾರಿಗಳಿಗೆ ಕನಿಷ್ಠ ಮೊತ್ತ ರೂ. 5.00 ಲಕ್ಷದಿಂದ ಗರಿಷ್ಠ ರೂ.500.00 ಲಕ್ಷಗಳವರೆಗೆ ಅಲ್ಪಾವಧಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.

Calender of Events:

ಸಾಮಾನ್ಯ:
PWD/2024-25/BR/WORK_INDENT19898(General) PWD/2024-25/RD/WORK_INDENT 19897 (General)
PWD/2024-25/EL/WORK_INDENT19797 (General) PWD/2024-25/BD/WORK_INDENT19929 (General)
PWD/2024-25/BD/WORK_INDENT20040 (General) PWD/2024-25/BD/WORK_INDENT20074 (General)

ಪರಿಶಿಷ್ಠ ಜಾತಿ
PWD/2024-25/RD/WORK_INDENT 20034 (SC) PWD/2024-25/BD/WORK_INDENT20044 (SC)

ಪ್ರವರ್ಗ-**II(A)**
PWD/2024-25/BD/WORK_INDENT19927 (Cat-II(A))

Calender of Events:
(1) ಆಕ್ಷೇಪಣೆ ಸಂದೇಹ **ದಿನಾಂಕ: 12–03–2025** (ಬೆಳಿಗ್ಗೆ 12:30 ಗಂಟೆಯವರೆಗೆ) **(2)** ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 13–03–2025** (ಸಾಯಂಕಾಲ 16:00 ಗಂಟೆಯವರೆಗೆ) **(3)** ತಾಂತ್ರಿಕ ಬಿಡ್‌ತೆರೆಯುವ **ದಿನಾಂಕ: 14–03–2025** (ಸಾಯಂಕಾಲ 16:30 ಗಂಟೆಯ ನಂತರ) **(4)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 15–03–2025** (ಸಾಯಂಕಾಲ 16:30 ಗಂಟೆಯ ನಂತರ)

ಸಾಮಾನ್ಯ:
PWD/2024-25/RD/WORK_INDENT17497/Call-2 (General)
PWD/2024-25/RD/WORK_INDENT19695 (General) PWD/2024-25/RD/WORK_INDENT19692 (General)
PWD/2024-25/RD/WORK_INDENT 20064 (General) PWD/2024-25/RD/WORK_INDENT17349/Call-3 (General) PWD/2024-25/RD/WORK_INDENT 19638 (Extension) (General)
PWD/2024-25/BD/WORK_INDENT10684 (General) PWD/2024-25/BR/ WORK _INDENT 17370 (General)

Calander of Events:
(1) ಆಕ್ಷೇಪಣೆ ಸಂದೇಹ ದಿನಾಂಕ: 24–03–2025 (ಬೆಳಿಗ್ಗೆ 12:30 ಗಂಟೆಯವರೆಗೆ) **(2)** ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 25–03–2025** (ಸಾಯಂಕಾಲ 16:00 ಗಂಟೆಯವರೆಗೆ) **(3)** ತಾಂತ್ರಿಕ ಬಿಡ್‌ತೆರೆಯುವ **ದಿನಾಂಕ: 26–03–2025** (ಸಾಯಂಕಾಲ 16:30 ಗಂಟೆಯ ನಂತರ) **(4)** ಆರ್ಥಿಕ ಬಿಡ್‌ತೆರೆಯುವ **ದಿನಾಂಕ:27–03–2025** (ಸಾಯಂಕಾಲ 16:30 ಗಂಟೆಯ ನಂತರ)

ಕಾಮಗಾರಿಗಳಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್ ಜಾಲ ವಿಳಾಸ http://www.kppp.karnataka,gov.in ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ/ಧಾರವಾಡ/1027/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರ
(ವಾಣಿಜ್ಯ ತೆರಿಗೆಗಳ ಇಲಾಖೆ)
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
(ಆಡಳಿತ) ಡಿಜಿಎಸ್‌ಟಿಓ ಕಲಬುರಗಿ ವಿಭಾಗ, ಕಲಬುರಗಿ

ಸಂಖ್ಯೆ: ವಾತೆಜಂಆ/ಡಿಜಿಎಸ್‌ಟಿಓ/ಕ/ವಾ.ಶಾ/2024–25 ದಿನಾಂಕ:–27.02.2025.

: ಟೆಂಡರ್ ಪ್ರಕಟಣೆ :

ಸನ್ 2025–26 ನೇ ಸಾಲಿಗೆ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಕಲಬುರಗಿ ವಿಭಾಗ ಕಲಬುರಗಿ ಹಾಗೂ ಅಧೀನ ಕಛೇರಿಗಳಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ ಕ್ರಮವಾಗಿ ಹನ್ನೊಂದು (11) ಮಾಲೀಕರೇ ಚಾಲಕರಾಗಿರುವ /ಅಧಿಕೃತ ಟ್ರಾವೆಲ್ ಏಜನ್ಸಿದಾರರು/ಸಂಸ್ಥೆ ಮುಖಾಂತರ ಮಾಸಿಕ ಬಾಡಿಗೆ ಆಧಾರದ ಮೇಲೆ ಖಾಸಗಿ ವಾಹನಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ/96/ಶಿವಾನೀ/2012 ದಿನಾಂಕ:23–08–2012 ರಲ್ಲಿ ನಿಗದಿ ಪಡಿಸಿರುವ ಷರತ್ತಿಗೊಳಪಟ್ಟು ಮತ್ತು ವಾಣಿಜ್ಯ ತೆರಿಗೆ ಆಯುಕ್ತರವರ ದರ ಪರಿಷ್ಕರಣೆಯ ಸುತ್ತೋಲೆ ಸಂಖ್ಯೆ: ವಿಹೆಚ್‌ಟಿ/ಸಿಆರ್–22/2019–20 ದಿನಾಂಕ:27/04/2022 ರಲ್ಲಿ ನಿಗದಿಪಡಿಸಿರುವ ಬಾಡಿಗೆ ದರ ಹಾಗೂ ಷರತ್ತುಗಳ ಆಧಾರದ ಮೇಲೆ ಪ್ರತಿ ವಾಹನಕ್ಕೆ 2,500 ಕಿ.ಮೀ ಗೆ ಗರಿಷ್ಠ ಮಾಸಿಕ ಮೊತ್ತ ರೂ.35,000–00 ರಂತೆ ಹವಾ ನಿಯಂತ್ರಿತವಲ್ಲದ ವಾಹನಕ್ಕೆ ಹಾಗೂ ಹವಾ ನಿಯಂತ್ರಿತ ವಾಹನಕ್ಕೆ ರೂ.40,000–00 ಗಳಿಗೆ ಒಳಪಟ್ಟಿರುತ್ತದೆ. ಸನ್ 2018 ಮತ್ತು ನಂತರದ ವರ್ಷಗಳಲ್ಲಿ ತಯಾರಾದ ಮಾದರಿಯ ವಾಹನಗಳನ್ನು ಮಾತ್ರ ಪರಿಗಣಿಸಲಾಗುವುದು ಈ ಕುರಿತು ಟೆಂಡರ್ ವಿವರಗಳನ್ನು ಇಲಾಖೆಯ ಸೂಚನಾ ಫಲಕದಲ್ಲಿ ಹಾಗೂ ವೆಬ್‌ಸೈಟ್ https://gst.kar.nic.in/ ನಲ್ಲಿ ಸಂಬಂಧಿಸಿದ ವಿವರವಾದ ಷರತ್ತುಗಳನ್ನು ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ಸಮಯದೊಳಗೆ ವಾಹನ ಶಾಖೆಗೆ ಅಥವಾ ದೂ.: **08472–222051** ಯನ್ನು ಸಂಪರ್ಕಿಸಬಹುದು.

ವಿವರಗಳು: 1) **ಕಲಬುರಗಿ ಕಛೇರಿ:** ವಾಹನಗಳ ಸಂಖ್ಯೆ–**06.** 2) **ರಾಯಚೂರು ಕಛೇರಿ:** ವಾಹನಗಳ ಸಂಖ್ಯೆ–**02,** 3) **ಯಾದಗಿರ ಕಛೇರಿ :** ವಾಹನಗಳ ಸಂಖ್ಯೆ–**01,** 4) **ಬೀದರ ಕಛೇರಿ–** ವಾಹನಗಳ ಸಂಖ್ಯೆ–**01,** 5) **ಶಹಾಪೂರ ಕಛೇರಿ–** ವಾಹಗಳ ಸಂಖ್ಯೆ–**01, ಒಟ್ಟು–11.**

1) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **15.03.2025** ಸಮಯ ಸಂಜೆ 5.00 ಗಂಟೆಯವರೆಗೆ, 2) ಟೆಂಡರ್ ತೆರೆಯುವ ದಿನಾಂಕ: **18.03.2025** ಸಮಯ ಬೆಳಿಗ್ಗೆ 11.00 ಗಂಟೆಗೆ (ದ್ವಿ–ಲಕೋಟೆ ಪದ್ಧತಿ)

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
ವಾ.ಸಾ.ಸಂ.ಇ/ಕಲಬುರಗಿ/1016/ಕೆ.ಎಸ್.ಎಂ.ಸಿ.&ಎ/2024–25 (ಆಡಳಿತ) ಡಿಜಿಎಸ್‌ಟಿಓ, ಕಲಬುರಗಿ

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರ ಕಛೇರಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/2024–25 ದಿನಾಂಕ: 01–03–2025

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ವಿವಿಧ ವರ್ಗದ ನಿವೇಶನಗಳನ್ನು ಹಂಚಿಕೆ ಮಾಡಲು **ದಿನಾಂಕ: 22–01–2025 ಮತ್ತು 23–01–2025ರ** ದಿನಪತ್ರಿಕೆಗಳಲ್ಲಿ ನೀಡಿರುವ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಇ–ಲಾಟರಿ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಕ್ರ. ಸಂ.	ಬಡಾವಣೆ	ತಾತ್ಕಾಲಿಕ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಿಸುವ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಿಸುವ ದಿನಾಂಕ	ಇ–ಲಾಟರಿ ನಡೆಯುವ ದಿನಾಂಕ ಮತ್ತು ಸಮಯ
1.	ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಅನಂತನಹಳ್ಳಿ & ಮೆಳ್ಳಿಕಟ್ಟಿ	06–03–2025	13–03–2025	18–03–2025	25–03–2025 ಬೆಳಿಗ್ಗೆ 11:00 ಗಂಟೆಗೆ
2.	ಹಾವೇರಿ ಜಿಲ್ಲೆ, ರಾಣೆಬೆನ್ನೂರು 2ನೇ ಹಂತ	06–03–2025	13–03–2025	18–03–2025	25–03–2025 ಮಧ್ಯಾಹ್ನ 12:00 ಗಂಟೆಗೆ
3.	ಚಿತ್ರದುರ್ಗ ಜಿಲ್ಲೆ, ಕುದಾಪುರ ನಾಯಕನಹಟ್ಟಿ	06–03–2025	13–03–2025	18–03–2025	25–03–2025 ಅಪರಾಹ್ನ 1:00 ಗಂಟೆಗೆ
4.	ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ	06–03–2025	13–03–2025	18–03–2025	25–03–2025 ಅಪರಾಹ್ನ 3:00 ಗಂಟೆಗೆ
5.	ಬೀದರ್ ಜಿಲ್ಲೆ, ಔರಾದ್	06–03–2025	13–03–2025	18–03–2025	25–03–2025 ಸಂಜೆ 4:00 ಗಂಟೆಗೆ
6.	ಬೀದರ್ ಜಿಲ್ಲೆ, ಗುನ್ನಳ್ಳಿ	06–03–2025	13–03–2025	18–03–2025	25–03–2025 ಸಂಜೆ 5:00 ಗಂಟೆಗೆ
7.	ಬೀದರ್ ಜಿಲ್ಲೆ, ಚಿಟ್ಟಾ	06–03–2025	13–03–2025	18–03–2025	26–03–2025 ಬೆಳಿಗ್ಗೆ 11:00 ಗಂಟೆಗೆ
8.	ಕಲಬುರಗಿ ಜಿಲ್ಲೆ, ಆಳಂದ	06–03–2025	13–03–2025	18–03–2025	26–03–2025 ಮಧ್ಯಾಹ್ನ 12:00 ಗಂಟೆಗೆ
9.	ಕಲಬುರಗಿ ಜಿಲ್ಲೆ, ಚಿಂಚೋಳಿ	06–03–2025	13–03–2025	18–03–2025	26–03–2025 ಅಪರಾಹ್ನ 1:00 ಗಂಟೆಗೆ
10.	ಕಲಬುರಗಿ ಜಿಲ್ಲೆ, ಶಹಾಬಾದ್	06–03–2025	13–03–2025	18–03–2025	26–03–2025 ಅಪರಾಹ್ನ 3:00 ಗಂಟೆಗೆ
11.	ಕಲಬುರಗಿ ಜಿಲ್ಲೆ, ಕಾಳಗನೂರು ಕುಸನೂರು 2ನೇ ಹಂತ	06–03–2025	13–03–2025	18–03–2025	26–03–2025 ಸಂಜೆ 4:00 ಗಂಟೆಗೆ
12.	ಧಾರವಾಡ ಜಿಲ್ಲೆ, ಸತ್ತೂರು 3ನೇ ಹಂತ	10–03–2025	18–03–2025	21–03–2025	27–03–2025 ಬೆಳಿಗ್ಗೆ 11–00 ಗಂಟೆಗೆ

ಇ–ಲಾಟರಿ ನಡೆಯುವ ಸ್ಥಳ:– ಮಂಡಳಿಯ ಸಭಾಂಗಣ, ಕೇಂದ್ರ ಕಛೇರಿ, ಕಾವೇರಿ ಭವನ, 4ನೇ ಮಹಡಿ, ಕೆ.ಜಿ ರಸ್ತೆ, ಬೆಂಗಳೂರು–9

ವಿಶೇಷ ಸೂಚನೆ:– ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿದಾರರ ವಿವರಗಳನ್ನು ಮಂಡಳಿಯ ವೆಬ್‌ಸೈಟ್ **https://www.khb.karnataka.gov.in** ಹಾಗೂ ಕೇಂದ್ರ ಕಛೇರಿಯ ಮತ್ತು ಆಯಾ ಜಿಲ್ಲಾ ಯೋಜನಾ ಕಛೇರಿಗಳ ಸೂಚನಾ ಫಲಕಗಳಲ್ಲಿ ಮೇಲೆ ತಿಳಿಸಿರುವ ದಿನಾಂಕಗಳಂದು ಪ್ರಕಟಿಸಲಾಗುವುದು.

ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಗಳನ್ನು ಸಂಬಂಧಿಸಿದ ಜಿಲ್ಲಾ ಯೋಜನಾ ಕಛೇರಿಗಳಲ್ಲಿ ಅಥವಾ ಕೇಂದ್ರ ಕಛೇರಿ, ಹಂಚಿಕೆ ಶಾಖೆ, ಕಾವೇರಿ ಭವನ, ಬೆಂಗಳೂರು–9 ಇಲ್ಲಿ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಮಂಡಳಿ **ವೆಬ್‌ಸೈಟ್** ಅನ್ನು ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/RO5397/AAPL/2024-25

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 2 ಮಾರ್ಚ್ 2025

ಕ್ಯಾಮೆರಾ ಕಣ್ಣಲ್ಲಿ ಕುಂಭಮೇಳ... 11

ಅಂಕಸಮುದ್ರ ಕೆರೆಯಲ್ಲಿ ಕೋಂಬ್ ಡಕ್

ವಿಜಯನಗರ ಜಿಲ್ಲೆಯ ಕೂಡ್ಲಿಗೆ ತಾಲ್ಲೂಕಿನಲ್ಲಿ 20 ಸಾವಿರಕ್ಕೂ ಹೆಚ್ಚು ಹುಣಸೆಮರಗಳಿವೆ. ಇದರಿಂದಾಗಿ ಬೇಸಿಗೆಯಲ್ಲಿನ ಹುಣಸೆ ಸುಗ್ಗಿ ರೈತರು, ಗುತ್ತಿಗೆದಾರರು, ಕೂಲಿಕಾರ್ಮಿಕರು, ವ್ಯಾಪಾರಿಗಳಿಗೆ ಸಂಭ್ರಮ ತಂದುಕೊಡುತ್ತದೆ. ಒಂದಿಡೀ ತಾಲ್ಲೂಕು ರೊಕ್ಕ ಎಣಿಸುತ್ತಾ ಕೊಡುಕೊಳ್ಳುತ್ತಾ ಖುಷಿಪಡುತ್ತದೆ.

ಕೂಡ್ಲಿಗಿ ಹುಣಸೆ ಸುಗ್ಗಿ ಸಂಭ್ರಮ

ಹುಣಸೆ ಸುಗ್ಗಿ ಬಂತು ನೋಡಿ...

ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ

ಕರ್ನಾಟಕದ ಬಯಲುಸೀಮೆಯ ಜಿಲ್ಲೆಗಳ ಪೈಕಿ ಕೂಡ್ಲಿಗಿ ತಾಲ್ಲೂಕಿನಲ್ಲಿ ಅತಿ ಹೆಚ್ಚು ಹುಣಸೆಮರಗಳಿವೆ. ಹೀಗಾಗಿ ಕೂಡ್ಲಿಗಿ ತಾಲ್ಲೂಕನ್ನು 'ಹುಣಸೆ ನಾಡು' ಎಂದೇ ಕರೆಯಲಾಗುತ್ತದೆ. ಏಕೆಂದರೆ ಇಲ್ಲಿನ ಹುಣಸೆಮರಗಳಲ್ಲಿ ಹೆಚ್ಚಿನ ಇಳುವರಿ ಇದ್ದು, ಗುಣಮಟ್ಟದ ಹುಣಸೆಹಣ್ಣಿಗೆ ಹೆಸರಾಗಿದೆ. ತಾಲ್ಲೂಕಿನಲ್ಲಿ ಈಗ ಹುಣಸೆಹಣ್ಣಿನ ಸುಗ್ಗಿ ಸಂಭ್ರಮ ಜೋರಾಗಿದೆ.

ಈ ತಾಲ್ಲೂಕಿನ ಪ್ರಮುಖ ಬೆಳೆ ಶೇಂಗಾ. ಶೇಂಗಾ ಕಟಾವಿಗೆ ಬಂದು ಅದರ ಸುಗ್ಗಿ ಡಿಸೆಂಬರ್‌ಗೆ ಮುಕ್ತಾಯವಾಗುತ್ತದೆ. ಆ ಬಳಿಕ ದುಡಿಯುವ ಕೈಗಳಿಗೆ ಮೂರ್ನಾಲ್ಕು ತಿಂಗಳು ಕೆಲಸವನ್ನು, ಗುತ್ತಿಗೆದಾರರಿಗೆ ನಾಲ್ಕಾರು ಕಾಸನ್ನು ಕೊಡುವ ಹುಣಸೆ ಸುಗ್ಗಿ ಜನವರಿಯಿಂದ ಏಪ್ರಿಲ್, ಮೇ ತಿಂಗಳವರೆಗೂ ಮುಂದುವರಿಯುತ್ತದೆ.

ತಾಲ್ಲೂಕಿನಲ್ಲಿ ಅಂದಾಜು 20 ಸಾವಿರಕ್ಕೂ ಹೆಚ್ಚು ಹುಣಸೆಮರಗಳಿವೆ. ಯಾವುದೇ ಕಾಳಜಿ, ಗೊಬ್ಬರ ಏನನ್ನು ಕೇಳದೆ ಸ್ವಾಭಾವಿಕವಾಗಿ ಬೆಳೆಯುವ ಹುಣಸೆಮರ ಇಲ್ಲಿನ ಜನರಿಗೆ ಬದುಕು ನೀಡಿದೆ. ತಾಲ್ಲೂಕಿನ ಬಹುಪಾಲು ಜನರಿಗೆ ಹುಣಸೆಮರ ಕಲ್ಪವೃಕ್ಷವಾಗಿದೆ.

ಒಂದೆರಡು ಹುಣಸೆಮರಗಳನ್ನು ಬಡಿದು, ಅದರಿಂದ ಹಣ್ಣನ್ನು ಇಳಿಸಿ, ಕುಟ್ಟಿ ಮಾರಾಟ ಮಾಡುವುದು ತ್ರಾಸದಾಯಕ ಕೆಲಸ. ಆದ್ದರಿಂದ ಬಹುತೇಕರು ಹುಣಸೆಮರಗಳನ್ನು ಗುತ್ತಿಗೆಗೆ ನೀಡುತ್ತಾರೆ. ಕೆಲ ಗುತ್ತಿಗೆದಾರರು ಪಂಚಮಿ ಸಮಯದಲ್ಲೇ ಗಿಡದಲ್ಲಿನ ಎಳೆಕಾಯಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಅಂದಾಜು ಮಾಡಿ ಊರೂರುಗಳಿಗೆ ಹೋಗಿ ಮಾಲೀಕರಿಂದ ಮರಕ್ಕೆ ಮೂರ್ನಾಲ್ಕು ಸಾವಿರದಂತೆ ಗುತ್ತಿಗೆ ಹಿಡಿಯುತ್ತಾರೆ. ಹೀಗೆ ಗುತ್ತಿಗೆ ಹಿಡಿದ ನಾಲ್ಕು ತಿಂಗಳ ನಂತರ ಹುಣಸೆ ಸುಗ್ಗಿ ಶುರು. ಒಮ್ಮೊಮ್ಮೆ ಅಂದುಕೊಂಡದ್ದಕ್ಕಿಂತ ಹೆಚ್ಚು ಲಾಭವೂ, ಊಹಿಸಲಾಗದಷ್ಟು ನಷ್ಟವೂ ಉಂಟಾಗುತ್ತದೆ ಎನ್ನುತ್ತಾರೆ ಗುತ್ತಿಗೆದಾರರು. ಈ ಬಾರಿ ಪ್ರತಿ ವರ್ಷಕ್ಕಿಂತ ಕಡಿಮೆ ಇಳುವರಿ ಇದೆ ಎನ್ನುತ್ತಾರೆ ಗುತ್ತಿಗೆದಾರ ಗೆಣತಿಕಟ್ಟೆಯ ಗಾಳೆಪ್ಪ.

ಹೀಗೆ ಮರ ಹತ್ತಿ ಹುಣಸೆ ಬಡಿಯುವುದು ಸುಲಭವೇನಿಲ್ಲ...

ಹುಣಸೆಹಣ್ಣು ಬಡಿಯುವ ಕಸರತ್ತು

ಹುಣಸೆಮರವನ್ನು ಹತ್ತಿ ಬಡಿಯುವುದಕ್ಕೂ ಪರಿಣತಿಬೇಕು. ಇದು ಅತ್ಯಂತ ಕಷ್ಟದ ಮತ್ತು ಸವಾಲಿನ ಕೆಲಸ. ಬಡಿಗೆಯನ್ನು ಹಿಡಿದು ಕೊಂಬೆಯಿಂದ ಕೊಂಬೆಗೆ, ಕೊಂಬೆಯ ತುದಿಗೆ, ಮರದ ಮೇಲ್ಭಾಗಕ್ಕೆ ಹೋಗಿ ಬಡಿಯಬೇಕು. ಇದನ್ನು ಕೆಲವೇ ಕೆಲವರು ಮಾಡುತ್ತಾರೆ. ಅವರನ್ನು ಹಿಡಿದಿಟ್ಟುಕೊಳ್ಳುವುದು ಗುತ್ತಿಗೆದಾರರಿಗೆ ಸವಾಲೇ ಸರಿ. ಹೀಗೆ ಹುಣಸೆಮರ ಬಡಿಯುವವರಿಗೆ ದಿನಕ್ಕೆ ₹500 ರಿಂದ ₹1,000ದವರೆಗೂ ಕೂಲಿ ನೀಡಲಾಗುತ್ತದೆ. ಮೇಲೆ ಹುಣಸೆಮರವನ್ನು ಬಡಿಯುತ್ತಿರುವಾಗಲೇ ಕೆಳಗೆ ಬೀಳುವ ಹುಣಸೆಹಣ್ಣನ್ನು ಆರಿಸಲು ಗಂಡಾಳು, ಹೆಣ್ಣಾಳುಗಳು ಸಿದ್ಧವಿರುತ್ತಾರೆ. ಇವರಿಗೆ ₹300 ರಿಂದ ₹400 ಕೂಲಿ ನೀಡಲಾಗುತ್ತದೆ. ಮರವನ್ನು ಪೂರ್ಣವಾಗಿ ಬಡಿದ ಮೇಲೆ ಟೆಂಪೊ, ಟ್ರ್ಯಾಕ್ಟರ್, ಬಂಡಿ ಮೊದಲಾದವುಗಳ ಮೂಲಕ ತಮ್ಮ ಊರಿನ ಕಣಕ್ಕೆ ಏರಿಕೊಂಡು ಹೋಗುತ್ತಾರೆ. ಒಟ್ಟಿನಲ್ಲಿ ಈ ಪ್ರಕ್ರಿಯೆಯನ್ನು ಮುಗಿಸುವ ಹೊತ್ತಿಗೆ 'ಮೈ ಹುಣಸೆ ಹಣ್ಣಂತಾಗುತ್ತದೆ' ಎನ್ನುತ್ತಾರೆ ಗುತ್ತಿಗೆದಾರ ಜಗದೀಶ್ ಎನ್.ಎಂ.

ಒಟ್ಟು ಮಾಡಿದ ಹುಣಸೆ ಬೋಟುಗಳನ್ನು ಹೊಡೆದು ತೊಳೆಯನ್ನು ಬೇರ್ಪಡಿಸುವ ಕೆಲಸವನ್ನು ಮಾಡುವ ಕೂಲಿಕಾರರದ್ದು ಒಂದು ಗುಂಪೇ ಇರುತ್ತದೆ. ಕೈಯಲ್ಲೊಂದು ಕೊಡತಿ ಹಿಡಿದು, ಅಂದಾಜು ಗಾತ್ರದ ಕಲ್ಲಿನ ಮೇಲೆ, 'ಟಪ್.... ಟಪ್...' ಎಂದು ಹುಣಸೆ ಬೋಟನ್ನು ಕುಟ್ಟುವ ಕೆಲಸ ಆರಂಭವಾಗುತ್ತದೆ. ಬಿಡುವಿನ ವೇಳೆ ಆದ್ದರಿಂದ ಕೈಗೊಂದಿಷ್ಟು ರೊಕ್ಕ ಸಿಗುತ್ತದೆ ಎಂದು ಬಹಳಷ್ಟು ಕೂಲಿ ಕಾರ್ಮಿಕರು ಈ ಕೆಲಸದಲ್ಲಿ ತೊಡಗುತ್ತಾರೆ. ಅಲ್ಲಿನ ಅವರ ಮಾತುಕತೆ, ನಗೆ ಚಟಾಕಿ ಕೆಲಸ ಮಾಡಿದ ದಣಿವನ್ನೆಲ್ಲ ಮರೆಸಿಬಿಡುತ್ತದೆ. ಇವರಿಗೆ ಒಂದು ಕೆ.ಜಿ ಗೆ ₹15 ರಿಂದ ₹20 ಕೂಲಿ ನೀಡಲಾಗುತ್ತದೆ.

ಚಪಾತಿ ಹಣ್ಣಿಗೆ ಬಲು ಬೇಡಿಕೆ

ಹುಣಸೆಹಣ್ಣನ್ನು ಜಜ್ಜಿ ಅಗಲವಾಗಿರುವ ತೊಳೆಗಳಿಂದ ನಾರನ್ನು, ಬೀಜವನ್ನು ಬೇರ್ಪಡಿಸಿ ಪರಿಶುದ್ಧವಾದ ಹಣ್ಣನ್ನು ದುಂಡಾಕಾರದಲ್ಲಿ ಸುಂದರವಾಗಿ ಹೊಂದಿಸುತ್ತಾರೆ. ಆಗ ಹುಣಸೆಹಣ್ಣು ಮಾರಾಟಕ್ಕೆ ಸಿದ್ಧವಾದಂತೆ. ಹೀಗೆ ಸಿದ್ಧಗೊಂಡ ಹಣ್ಣನ್ನು ಈ ಭಾಗದಲ್ಲಿ 'ಚಪಾತಿ ಹಣ್ಣು' ಎಂದು ಕರೆಯುತ್ತಾರೆ. ಇಂತಹ ಅಗಲವಾದ ತೊಳೆ ಹಾಗೂ ಬಂಗಾರದ ಬಣ್ಣವನ್ನು, ಹೆಚ್ಚು ಹುಳಿಯ ಅಂಶವನ್ನು ಹೊಂದಿದ ಹಣ್ಣಿಗೆ ಮಾರುಕಟ್ಟೆಯಲ್ಲಿ ಬಲು ಬೇಡಿಕೆ ಇರುತ್ತದೆ. ಇದರಲ್ಲಿ ಕೆಂಪು ಬಣ್ಣ, ಕಡಿಮೆ ಹುಳಿ, ನಾರಿರುವ ಹಣ್ಣಿಗೆ ಬೆಲೆ ತುಸು ಕಡಿಮೆ ಇರುತ್ತದೆ. ಸಿದ್ಧವಾದ ಹುಣಸೆಹಣ್ಣನ್ನು ಹೊಸಪೇಟೆಯ ಮಂಡಿಗೆ ಹೋಗಿ ಮಾರುವವರೇ ಜಾಸ್ತಿ. ಆದರೆ ಕೆಲವೊಮ್ಮೆ ಆಂಧ್ರ ಪ್ರದೇಶ, ತಮಿಳುನಾಡಿನಿಂದ ವ್ಯಾಪಾರಿಗಳು ಬಂದು ಖರೀದಿಸುತ್ತಾರೆ.

ಹುಣಸೆಹಣ್ಣಿನ ಮೇಲ್ಪದರಿನ ಸಿಪ್ಪೆ, ಒಳಗಿನ ನಾರು ಮತ್ತು ಬೀಜಕ್ಕೂ ಬೇಡಿಕೆ ಇದೆ. ಹುಣಸೆ ಗೊಳ್ಳೆಯನ್ನು ಇಟ್ಟಿಗೆ ಸುಡಲು ಒಂದು ಪುಟ್ಟಿಗೆ ₹60 ರಿಂದ ₹70ಗೆ ಖರೀದಿ ಮಾಡುತ್ತಾರೆ.

10ನೇ ಪುಟಕ್ಕೆ...

ಹುಣಸೆ ಚಟ್ನಿಯೂ...

ಹುಣಸೆ ಚಟ್ನಿ ಉತ್ತಮ ಪ್ರಮಾಣದ ಮೆಗ್ನೀಷಿಯಂ, ಫೈಬರ್, ಕಬ್ಬಿಣದ ಅಂಶವನ್ನು ಹೊಂದಿದ್ದು, ಆರೋಗ್ಯಕ್ಕೆ ಅಗತ್ಯವಾದ ಪೌಷ್ಟಿಕಾಂಶಗಳನ್ನು ಒದಗಿಸುತ್ತದೆ. ಇದರಲ್ಲಿನ ಟಾರ್ಟರಿಕ್ ಆಮ್ಲ ಮಲಬದ್ಧತೆ ನಿವಾರಣೆಗೆ ಸಹಾಯ ಮಾಡುತ್ತದೆ.

ಹುಣಸೆ ಚಿಗುರನ್ನು ಬಳಸಿ ಮಾಡಿದ ಉದುಕ, ಅದಕ್ಕೆ ತಕ್ಕದಾದ ಮುದ್ದೆ ಇದ್ದರೆ ಅದರ ಸವಿಯೇ ಬೇರೆ. ಇಂತಹ ಹುಣಸೆ ಚಿಗುರು ನೈಸರ್ಗಿಕ ಆಂಟಿಬಯೋಟಿಕ್‌ನಂತೆ ಕೆಲಸ ಮಾಡುತ್ತದೆ. ಅಜೀರ್ಣ ಸಮಸ್ಯೆಯನ್ನು ದೂರ ಮಾಡುವ, ದೇಹದ ಕೊಬ್ಬನ್ನು ಕಡಿಮೆ ಮಾಡುವ ಗುಣವೂ ಹುಣಸೆ ಚಿಗುರಿಗಿದೆ. ಜಂತು ಸಮಸ್ಯೆಗೂ ರಾಮಬಾಣವಾಗಿದೆ.

ಹುಣಸೆ ಆಫ್ರಿಕಾ ಖಂಡದ ಪೂರ್ವಭಾಗದ್ದು. ಬಹು ಹಿಂದೆಯೇ ಭಾರತಕ್ಕೆ ಪರಿಚಯಿಸಲ್ಪಟ್ಟಿದೆ. ಫಾಬೇಸಿ ಕುಟುಂಬದಲ್ಲಿ ಕಾಸಲ್ಪೀನಿಯೆ ಉಪ ಕುಟುಂಬಕ್ಕೆ ಸೇರಿದ್ದು, 'ಟಮರಿಂಡಸ್ ಇಂಡಿಕಾ' ಎಂದು ಸಸ್ಯಶಾಸ್ತ್ರೀಯ ಹೆಸರನ್ನು ಹೊಂದಿದೆ.

ಜೀವವೈವಿಧ್ಯದ ದೃಷ್ಟಿಯಿಂದ ತುಂಬಾ ಮಹತ್ವವಾದ ಕೆರೆ, ಸರೋವರ, ಜಲಾಶಯ, ಅಳಿವೆಗಳನ್ನು ಗುರುತಿಸಿ ಅವುಗಳಿಗೆ ರಾಮ್‌ಸಾರ್ ಜಾಗತಿಕ ಮನ್ನಣೆಯನ್ನು ನೀಡಲಾಗುತ್ತದೆ. ಈ ಗೌರವ ಮತ್ತು ಭದ್ರತೆಗೆ ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶ ಕಳೆದ ವರ್ಷ ಪಾತ್ರವಾಗಿದೆ.

ಅಂಕಸಮುದ್ರ ಕೆರೆ ರಾಮ್‌ಸಾರ್ ತಾಣ

ಸಿ.ಶಿವಾನಂದ

ತುಂಗಭದ್ರಾ ಜಲಾಶಯದ ಹಿನ್ನೀರು ಪ್ರದೇಶದಿಂದ ಕೂಗಳತೆ ದೂರದಲ್ಲಿ ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಕಸಮುದ್ರ ಎಂಬ ಗ್ರಾಮವಿದೆ. ಇಲ್ಲಿ 244 ಎಕರೆ ವಿಸ್ತಾರವಾದ ಕೆರೆಯೂ ಇದೆ. ಕೆರೆಯಲ್ಲಿ ಹರಡಿರುವ ಕರಿಜಾಲಿ ಮರಗಳು ಅಪರೂಪದ, ದೇಶ–ವಿದೇಶದ ಸಹಸ್ರಾರು ಬಾನಾಡಿಗಳಿಗೆ ಆಶ್ರಯತಾಣವಾಗಿವೆ. ಹೀಗಾಗಿ ವಿಶಾಲವಾದ ಕೆರೆಯೊಂದು ಪಕ್ಷಿಧಾಮ ಎಂದು ಹೆಗ್ಗಳಿಕೆ ಪಡೆದಿದೆ. ಇದು ಕಲ್ಯಾಣ ಕರ್ನಾಟಕದ ಮೊದಲ ಪಕ್ಷಿಧಾಮ.

ಕೆರೆ ಮಧ್ಯದಲ್ಲಿ ನಿರ್ಮಿಸಿರುವ 50ಕ್ಕೂ ಹೆಚ್ಚು ಕೃತಕ ನಡುಗಡ್ಡೆಗಳಲ್ಲಿ ಎತ್ತರದ ಮತ್ತು ನೆಲಕ್ಕೊರಗಿದ ಗಿಡಮರಗಳಲ್ಲಿ ಪಕ್ಷಿಗಳು ಬೀಡುಬಿಟ್ಟಿವೆ. ಜೊತೆಗೆ ನೀರಿನಲ್ಲಿ ಹೇರಳವಾಗಿ ದೊರೆಯುವ ಆಹಾರ ಕೂಡ ಅವುಗಳಿಗೆ ವರದಾನವಾಗಿದೆ. ತುಂಗಭದ್ರಾ ಹಿನ್ನೀರಿನಿಂದ ಯಂತ್ರಗಳ ಸಹಾಯದಿಂದ ಕೆರೆಗೆ ನೀರು ಹರಿಸಿದ್ದು ಮತ್ತು ಉತ್ತಮ ಮುಂಗಾರಿನಿಂದಾಗಿ ಕೆರೆ ಸಂಪೂರ್ಣ ಭರ್ತಿಯಾಗಿದ್ದು ಸೊಬಗು ಹೆಚ್ಚಾಗಿದೆ.

ವಿಜಯನಗರ-ಬಳ್ಳಾರಿ ಜಿಲ್ಲೆಯ ಪಕ್ಷಿ ತಜ್ಞರು, ಪಕ್ಷಿ ಪ್ರೇಮಿಗಳು, ಅಂಕಸಮುದ್ರದ ಯುವ ಬ್ರಿಗೇಡ್ ಸದಸ್ಯರು, ಹಗರಿಬೊಮ್ಮನಹಳ್ಳಿಯ ಗ್ರೀನ್ ಎಚ್‌ಬಿಎಚ್ ತಂಡದ ಸದಸ್ಯರ ಕಾಳಜಿ ಮತ್ತು ನಿರಂತರ ಶ್ರಮ, ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದ ಪರಿಣಾಮವಾಗಿ ಬಾನಾಡಿಗಳಿದ್ದ ಈ ಕೆರೆ ಪಕ್ಷಿಧಾಮವಾಗುವ ಮೂಲಕ ಪಕ್ಷಿಪ್ರೇಮಿಗಳು ಕಂಡಿದ್ದ ಕನಸು ನನಸಾಗಿದೆ.

2016ರ ಸೆಪ್ಟೆಂಬರ್‌ನಲ್ಲಿ ರಾಜ್ಯ ವನ್ಯಜೀವಿ ಸಲಹಾ ಮಂಡಳಿಯಲ್ಲಿ ಪಕ್ಷಿಧಾಮಕ್ಕಾಗಿ ಪಕ್ಷಿತಜ್ಞ ಸಮದ್ ಕೊಟ್ಟೂರು, ವಿಜಯ್ ಇಟ್ಟಿಗಿ ಮತ್ತು ತಂಡ ಸಲ್ಲಿಸಿದ್ದ ಪ್ರಸ್ತಾವನೆ ಅಂಗೀಕಾರಗೊಂಡಿತು. 2017ರ ಫೆಬ್ರುವರಿಯಲ್ಲಿ ಅಂಕಸಮುದ್ರ ಕೆರೆ ಪಕ್ಷಿಗಳ ಸಂರಕ್ಷಿತ ಪ್ರದೇಶವೆಂದು ಘೋಷಣೆ ಆಯಿತು. ಈ ಪ್ರದೇಶ ಅರಣ್ಯ ಇಲಾಖೆಯ ಸುಪರ್ದಿಗೆ ಸೇರಿತು. ಒಂದೊಂದೇ ಮೂಲಸೌಕರ್ಯಗಳು ಬರತೊಡಗಿದವು. ಒತ್ತುವರಿಯಾಗಿದ್ದ ಕೆರೆ ಪ್ರದೇಶವನ್ನು ತೆರವುಗೊಳಿಸಲಾಯಿತು. ವೀಕ್ಷಣಾ ಗೋಪುರ ನಿರ್ಮಾಣಗೊಂಡಿತು. ನಾಲ್ಕು ಜನ ಕಾವಲುಗಾರರ ನೇಮಕವೂ ಆಯಿತು. ಮೀನುಗಾರರ ಬಲೆಗಳು ಪಕ್ಷಿಗಳ ಪ್ರಾಣಕ್ಕೆ ಕಂಟಕವಾಗಿತ್ತು. ಇದನ್ನು ತಡೆಯುವುದಕ್ಕೂ ಸಾಧ್ಯವಾಯಿತು.

ಇಲ್ಲಿರುವ 50 ಸಾವಿರಕ್ಕೂ ಹೆಚ್ಚು ಪಕ್ಷಿಗಳು ವಿಶೇಷವಾಗಿ ಅಲಾಸ್ಕ, ಸೈಬೀರಿಯಾ, ಯುರೋಪ್ ಸೇರಿದಂತೆ ದೇಶ–ವಿದೇಶಗಳಿಂದ ಆಹಾರ ಅರಸಿ ವಲಸೆ ಬಂದಿವೆ. ಐಯುಸಿಎನ್ (ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್‌ವೇಶನ್ ಆಫ್ ನೇಚರ್)ನ ವರದಿಯಂತೆ ಅಳಿವಿನಂಚಿನಲ್ಲಿರುವ ದೇಶಿಯ ಹೆಜ್ಜಾರ್ಲೆ ಸಂತತಿ ಹೆಚ್ಚಿಸಿಕೊಂಡಿರುವುದು ಇಲ್ಲಿನ ವೈಶಿಷ್ಟ್ಯ. ಇಲ್ಲಿ ಹೇರಳವಾಗಿ ದೊರೆಯುವ ಮೀನು ಮತ್ತಿತರ ಜಲಚರಗಳನ್ನು ಪಕ್ಷಿಗಳು ಹಿಡಿಯುವ ಬಗೆ ಮತ್ತು ತುಂಗಭದ್ರಾ ಹಿನ್ನೀರು ಪ್ರದೇಶದಲ್ಲಿನ ಸಮೃದ್ಧ ಆಹಾರ ಅರಸಿ ಪಕ್ಷಿಗಳು ಗುಂಪುಗುಂಪಾಗಿ ಬೆಳಗಿನ ಜಾವ ತೆರಳುವ, ಸಂಜೆ ವೇಳೆ ಆಗಮಿಸುವ ದೃಶ್ಯವನ್ನು ನೋಡುವುದೇ ಚಂದ. ಅದೊಂದು ದೃಶ್ಯ ಕಾವ್ಯವೇ ಸರಿ.

> ಸಹಸ್ರಾರು ಸಂಖ್ಯೆಯಲ್ಲಿರುವ ಪೇಂಟೆಡ್ ಸ್ಟಾರ್ಕ್, ಕಾರ್ಮೋರೆಂಟ್, ಗ್ಲೋಸಿ ಐಬೀಸ್ ಪಕ್ಷಿಗಳನ್ನು ನೋಡುವುದೇ ಚಂದ. ಇಷ್ಟು ಸಂಖ್ಯೆಯ ಬಾನಾಡಿಗಳನ್ನು ಬೇರೆಲ್ಲೂ ನೋಡಿಲ್ಲ, ಇದೊಂದು ಅದ್ಭುತ ತಾಣ.
>
> **ಡೆನ್ನಿಸ್, ಸ್ಯಾಂಟ್ರೋ**
> ಇಂಗ್ಲೆಂಡ್ ಪ್ರವಾಸಿಗರು

2024 ಫೆಬ್ರುವರಿಯಲ್ಲಿ ಪಕ್ಷಿ ತಜ್ಞರು ನಡೆಸಿದ ಗಣತಿಯಲ್ಲಿ ಸ್ಥಳೀಯ ಮತ್ತು ದೇಶ-ವಿದೇಶಗಳ 168 ಪ್ರಭೇದಗಳ 48,825 ಪಕ್ಷಿಗಳು ಇದ್ದವು. ಈ ವರ್ಷ ಜನವರಿ 25 ರಂದು ನಡೆಸಿದ ಗಣತಿಯಲ್ಲಿ 132 ಪ್ರಭೇದಗಳ 50 ಸಾವಿರಕ್ಕೂ ಹೆಚ್ಚು ಬಾನಾಡಿಗಳು ಕಂಡುಬಂದಿವೆ. ನವೆಂಬರ್ ತಿಂಗಳಿನಿಂದ ಮಾರ್ಚ್‌ವರೆಗೂ ಜಲಪಕ್ಷಿಗಳ ಈ ಆವಾಸಸ್ಥಾನ ಸದಾ ಜೀವಂತಿಕೆಯಿಂದ ಕೂಡಿರುತ್ತದೆ. ಈ ಪ್ರದೇಶವನ್ನು ಸುಂದರಗೊಳಿಸಿ ಹೆಚ್ಚು ಪ್ರಭೇದಗಳ ಪಕ್ಷಿಗಳು ಇಲ್ಲಿಗೆ ಬರುವಂತೆ ಮಾಡಿದ್ದರ ಫಲವೇ 2024ರ ಜನವರಿ 31ರಂದು ರಾಮ್‌ಸಾರ್ ಎನ್ನುವ ಅಪರೂಪದ ಜೀವವೈವಿಧ್ಯ ಹೊಂದಿರುವ ಜಾಗತಿಕ ಮನ್ನಣೆ ಪಡೆದ ತಾಣವಾಯಿತು. ಇದೇ ವೇಳೆ ಗದಗ ಜಿಲ್ಲೆಯ ಮಾಗಡಿ ಕೆರೆ ಸಂರಕ್ಷಣಾ ಮೀಸಲು ಪ್ರದೇಶ, ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ನದೀಮುಖ ಸಹ ಈ ಮನ್ನಣೆ ಪಡೆದವು. ಕರ್ನಾಟಕದ ಮೊದಲ ಸಂರಕ್ಷಿತ ಜೌಗು ಪ್ರದೇಶವಾದ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೆ ರಾಮ್‌ಸರ್ ಟ್ಯಾಗ್ ದೊರೆತ ಎರಡು ವರ್ಷಗಳ ನಂತರ ಕರ್ನಾಟಕದ ಈ ತಾಣಗಳಿಗೆ ಮನ್ನಣೆ ಸಿಕ್ಕಿದೆ.

ಇಲ್ಲಿ ಪ್ರತಿವರ್ಷ ಚಳಿಗಾಲದಲ್ಲಿ ಬಾನಾಡಿಗಳ ಮಹಾಸಂಗಮವಾಗುತ್ತದೆ. ವಲಸೆ ಬರುವ ಬಾರ್ನ್ ಸ್ವಾಲೋ (ಕವಲು ತೋಕೆ), ರೋಸಿ ಸ್ಟಾರ್ಲಿಂಗ್ (ಗುಲಾಬಿ ಕಬ್ಬಕ್ಕಿ), ಓಸ್‌ಪ್ರೆ (ಮೀನು ಡೇಗೆ), ವಿಸ್ಕರ್ಡ್ ಟರ್ನ್ (ಮೀಸೆ ರೀವ), ಗ್ರೀನಿಷ್ ವಾರ್ಬಲರ್ (ಹಸಿರು ಎಲೆ ಉಲಿಯಕ್ಕಿ), ಗ್ರೇ ವಾಗ್‌ಟೆಲ್ (ಬೂದು ಸಿಪಿಲೆ)

10ನೇ ಪುಟಕ್ಕೆ...

ಅಂಕಸಮುದ್ರ ಕೆರೆಯ ವಿಹಂಗಮ ನೋಟ

ಇ ಸ್ಪೋರ್ಟ್ಸ್ ಎಂದರೆ ಜೂಜಾಟವಷ್ಟೇ ಅಲ್ಲ...



ಕಂಪ್ಯೂಟರ್ ಚೆಸ್‌ನಲ್ಲಿ ನಿರತ ಸ್ಪರ್ಧಿಗಳು

ಗಿರೀಶ ದೊಡ್ಡಮನಿ

ಕಣ್ಮನ ಸೆಳೆಯುವಂತೆ ಅಲಂಕರಿಸಿದ ದೊಡ್ಡ ಕೋಣೆ ಅದು. ಅಲ್ಲಿ ಜೋಡಿಸಲಾಗಿದ್ದ ಮೇಜುಗಳ ಮೇಲೆ ಕಂಪ್ಯೂಟರ್‌ಗಳನ್ನು ಸಾಲಾಗಿ ಇರಿಸಲಾಗಿತ್ತು. ಒಂದೊಂದು ಕಂಪ್ಯೂಟರ್ ಮುಂದೆ ಇಬ್ಬರು ವ್ಯಕ್ತಿಗಳಿದ್ದರು. ಅಂತಹ ಪ್ರತಿಯೊಂದು ಜೋಡಿಯಲ್ಲಿ ಒಬ್ಬರು ದೃಷ್ಟಿದೋಷವುಳ್ಳವರು. ಇನ್ನೊಬ್ಬರು ಸಾಮಾನ್ಯ ವ್ಯಕ್ತಿ. ದೃಷ್ಟಿದೋಷವುಳ್ಳ ವ್ಯಕ್ತಿ ನೀಡುವ ಸೂಚನೆಯನ್ನು ಪಾಲಿಸುತ್ತಿದ್ದ ವ್ಯಕ್ತಿ ಕಂಪ್ಯೂಟರ್ ಪರದೆಯ ಮೇಲೆ ಮೂಡಿದ್ದ ಚೆಸ್ ಬೋರ್ಡ್‌ನಲ್ಲಿ ಕಾಯಿಯನ್ನು ನಡೆಸುತ್ತಿದ್ದರು.

***

ಇನ್ನೊಂದು ದೊಡ್ಡ ಕೋಣೆಯಲ್ಲಿ ಹಲವು ಯುವಕ, ಯುವತಿಯರು ಮೊಬೈಲ್ ಫೋನ್ ಹಿಡಿದು ಕೂತಿದ್ದರು. ಅವರೆಲ್ಲರ ಮೊಬೈಲ್ ಪರದೆಯ ಮೇಲೆ ಇಸ್ಪಿಟ್ ಎಲೆಗಳ ಚಿತ್ರಗಳು ಓಡಾಡುತ್ತಿದ್ದವು. ಅವರೆಲ್ಲ ರಮ್ಮಿ ಆಡುವುದರಲ್ಲಿ ಮಗ್ನರಾಗಿದ್ದರು. ಗ್ರ್ಯಾಂಡ್‌ಮಾಸ್ಟರ್ ಆಗುವ ಕನಸು ಕಾಣುತ್ತ ಅವರ ಕೈಬೆರಳುಗಳು ಸ್ಕ್ರೀನ್ ಮೇಲೆ ಚಲಿಸುತ್ತಿದ್ದವು.

***

ಹೌದು ಇದು ಆನ್‌ಲೈನ್ ಗೇಮಿಂಗ್ ಲೋಕ. ಇತ್ತೀಚೆಗೆ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಸ್ಕಿಲ್ ಹಬ್ ಆನ್‌ಲೈನ್ ಗೇಮ್ಸ್ ಫೆಡರೇಷನ್ (ಎಸ್.ಒ.ಜಿ.ಎಫ್) ಆಯೋಜಿಸಿದ್ದ ದಕ್ಷಿಣ ವಲಯ ಮೈಂಡ್ ಗೇಮ್ಸ್ ಟೂರ್ನಿಯ ಚಿತ್ರಣಗಳು ಅವು. ಆದರೆ ಅಲ್ಲಿ ಜೂಜಾಟ ಅಥವಾ ವ್ಯಸನಕ್ಕೆ ಜಾಗವಿಲ್ಲ. ಅಲ್ಲಿರುವುದು ಭವಿಷ್ಯದ ಬೌದ್ಧಿಕ ಕೌಶಲ ಕ್ರೀಡೆಗಳು ಮತ್ತು ಇ ಸ್ಪೋರ್ಟ್ಸ್ ಜಗತ್ತಿನ ಚಾಂಪಿಯನ್‌ಗಳನ್ನು ಸೃಷ್ಟಿಸುವ ಧ್ಯೇಯ ಮಾತ್ರ.

'ಆನ್‌ಲೈನ್ ಗೇಮ್‌ಗಳನ್ನು ನೈತಿಕವಾದ ಚೌಕಟ್ಟಿನೊಳಗೆ ತರುವುದು ನಮ್ಮ ಧ್ಯೇಯ. ಇದು ಅಪ್ಪಟ ಕೌಶಲಾಧಾರಿತವಾದ ಕ್ರೀಡಾ ವಿಭಾಗ. ನಾವು ಇಂಡಿಯನ್ ಚೆಸ್ ಮತ್ತು ಇಂಡಿಯನ್ ಅಂಧರ ಚೆಸ್ ವಿಭಾಗಗಳನ್ನು ಸೇರ್ಪಡೆ ಮಾಡಿದ್ದೇವೆ. ಅದರೊಂದಿಗೆ ಇಂಡಿಯನ್ ರಮ್ಮಿ ಕೂಡ ಆಡಿಸಲಾಗುತ್ತದೆ. ನಮ್ಮಲ್ಲಿ ಯಾವುದೇ ಆಟಗಳಿರುವುದು ವ್ಯಕ್ತಿತ್ವ ರೂಪಿಸಲು ಮತ್ತು ಮನೋಲ್ಲಾಸ ನೀಡಲು. ಆದರೆ ಅದೇ ಆಟಗಳನ್ನು ಜೂಜಿಗಾಗಿ ದುರ್ಬಳಕೆ ಮಾಡಿಕೊಳ್ಳುವುದು ತಪ್ಪು. ನಮ್ಮ ಉದ್ದೇಶ ನಿಯಮ ಮತ್ತು ಕೌಶಲಾಧಾರಿತವಾಗಿ ಆಟಗಳನ್ನು ಯೋಜಿಸುವುದಾಗಿದೆ. ಇದಕ್ಕಾಗಿ ಪ್ರತಿಷ್ಠಿತ ಸಂಸ್ಥೆಗಳು, ಫೆಡರೇಷನ್‌ಗಳು ನಮ್ಮೊಂದಿಗೆ ಕೈಜೋಡಿಸಿವೆ' ಎಂದು ಎಸ್.ಒ.ಜಿ.ಎಫ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಿಬಾಟೆನ್ ಭಾಕ್ರಿ ಹೇಳುತ್ತಾರೆ.

ಇ ಸ್ಪೋರ್ಟ್ಸ್ ಮತ್ತು ಮೈಂಡ್ ಗೇಮ್ಸ್‌ಗಳಿಗೆ ಸ್ಪರ್ಧಾತ್ಮಕ ಹಾಗೂ ವೃತ್ತಿಪರತೆಯ ಚೌಕಟ್ಟು ನೀಡಲು ಎಸ್.ಒ.ಜಿ.ಎಫ್ ಎರಡು ವರ್ಷಗಳ ಹಿಂದೆ ಹುಟ್ಟಿತು. 200 ದೇಶಗಳು ಸದಸ್ಯತ್ವ ಹೊಂದಿರುವ ಅಂತರರಾಷ್ಟ್ರೀಯ ಮೈಂಡ್ ಸ್ಪೋರ್ಟ್ಸ್ ಅಸೋಸಿಯೆಷನ್ (ಐಎಂಎಸ್‌ಎ) ಸಹಭಾಗಿತ್ವವನ್ನು ಹೊಂದಿದೆ.

ಕಿಶನ್ ಗಂಗೊಳ್ಳಿ

ಫಿಡೆ, ಪೊಕೊ, ಚೀನಾದ ಶಾಂಗ್ ಚೀ, ಐಇಎಸ್‌ಎಸ್, ಮೇಜಾನ್, ಗೋ, ಬ್ರಿಜ್ ಸೇರಿದಂತೆ ಒಂಬತ್ತು ಫೆಡರೇಷನ್‌ಗಳು ಕೂಡ ಐಎಂಎಸ್‌ಎನಲ್ಲಿ ಸದಸ್ಯತ್ವ ಹೊಂದಿವೆ. ಎಸ್.ಒ.ಜಿ.ಎಫ್ ಕೂಡ ವಿಶ್ವ ಇ ಸ್ಪೋರ್ಟ್ಸ್ ಫೆಡರೇಷನ್ ಮಾನ್ಯತೆಯನ್ನೂ ಪಡೆದುಕೊಂಡಿದೆ ಎಂದು ಭಾಕ್ರಿ ಹೇಳಿದರು.

ಅಂಧರ ಚೆಸ್‌ಗೆ ಪುಷ್ಟಿ

ಬೌದ್ಧಿಕ ಕೌಶಲಾಧಾರಿತ ಕ್ರೀಡೆಗಳಲ್ಲಿ ಮುಂಚೂಣಿಯಲ್ಲಿರುವುದು ಚೆಸ್. ವಿಶ್ವದ ಬಹುತೇಕ ಎಲ್ಲ ದೇಶಗಳಲ್ಲಿಯೂ ಪ್ರಸಿದ್ಧಿಯಾಗಿರುವ ಬೋರ್ಡ್ ಗೇಮ್ ಇದಾಗಿದೆ. ಅಂಧರ ವಿಭಾಗದ ಚೆಸ್ ಕೂಡ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಭಾರತವು ಈ ವಿಭಾಗದಲ್ಲಿಯೂ ತನ್ನ ಪಾರಮ್ಯ ಮೆರೆದಿದೆ. ಆದರೆ ಅಂಧ ಚೆಸ್ ಪಟುಗಳು ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಪ್ರಯಾಣ, ಆರ್ಥಿಕ ಅನುಕೂಲಗಳು ಅಪೇಕ್ಷಣೀಯ.

'ದೃಷ್ಟಿದೋಷವುಳ್ಳ ಚೆಸ್ ಆಟಗಾರರಿಗೆ ಟೂರ್ನಿಗಳಲ್ಲಿ ಆಡಲು ಹೋಗಲು ಪ್ರಯಾಣ ಮಾಡಬೇಕಾಗುತ್ತದೆ. ನಾನು ಇಲ್ಲಿಂದ ಉತ್ತರ ಭಾರತದ ಯಾವುದೇ ಭಾಗದಲ್ಲಿ ನಡೆಯುವ ಟೂರ್ನಿಯಲ್ಲಿ ಆಡಲು ಹೋಗಬೇಕೆಂದರೆ ವಿಮಾನ ಪ್ರಯಾಣವೂ ಕಷ್ಟಕರ. ನಮ್ಮೊಂದಿಗೆ ಯಾರಾದರೊಬ್ಬರನ್ನು ಸಹಾಯಕ್ಕೆ ಕರೆದೊಯ್ಯಬೇಕು. ಅದರಿಂದ ಹೆಚ್ಚು ಹಣವನ್ನೂ ವ್ಯಯಿಸಬೇಕಾಗುತ್ತಿತ್ತು. ಆದರೆ ಅದೇ ಆಟವನ್ನು ಈಗ ಆನ್‌ಲೈನ್ ಮೂಲಕ ಆಡುವುದು ಅನುಕೂಲವಾಗಿದೆ. ಎಸ್.ಒ.ಜಿ.ಎಫ್ ಇಲ್ಲಿ ಹೈಬ್ರಿಡ್ ಮಾದರಿಯಲ್ಲಿ ದೃಷ್ಟಿದೋಷವುಳ್ಳವರಿಗೆ ಚೆಸ್ ಆಯೋಜಿಸಿದೆ' ಎಂದು ಅಂಧರ ಚೆಸ್ ವಿಭಾಗದ ಏಷ್ಯನ್ ಚಾಂಪಿಯನ್ ಕಿಶನ್ ಗಂಗೊಳ್ಳಿ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

9ನೇ ಪುಟಕ್ಕೆ...

ಎಐ ಮತ್ತು ಭಾಷಾಂತರದಲ್ಲಿ ಸ್ಥಿತ್ಯಂತರ

‘ಆಡು ಮುಟ್ಟದ ಸೊಪ್ಪಿಲ್ಲ’ ಎಂಬಂತೆ ಇವತ್ತು ಎ.ಐ ಪ್ರಭಾವವಿಲ್ಲದ ಕ್ಷೇತ್ರವಿಲ್ಲ. ಭಾಷಾಂತರವು ಇದರಿಂದ ಹೊರತಾಗಿಲ್ಲ. ತರ್ಜುಮೆಯ ಸಾಮರ್ಥ್ಯದ ಜೊತೆಗೆ ಪಠ್ಯದ ಭಾವನೆಗಳನ್ನೂ ಗ್ರಹಿಸುವುದನ್ನು ರೂಢಿಸಿಕೊಂಡ ಕೃತಕ ಬುದ್ಧಿಮತ್ತೆ ಬಂದರೆ ಭಾಷಾ ಕಲಿಕೆ ಯಾವ ದಿಕ್ಕಿಗೆ ಸಾಗಬಹುದು?

ಸಾಂದರ್ಭಿಕ ಚಿತ್ರ

ಡಾ. ಕೆ.ಎಸ್. ಪವಿತ್ರ

ಬಹುಭಾಷೆಗಳನ್ನು ಬಲ್ಲವಳು ನಾನು. ಈವರೆಗೆ ನನಗೆ ಅದೊಂದು ಹೆಮ್ಮೆಯ ಸಂಗತಿಯೇ ಆಗಿತ್ತು. ವಿವಿಧ ಭಾಷೆಗಳ ರೋಗಿಗಳು ಆರೈಕೆಗಾಗಿ ನಿಮ್ಹಾನ್ಸ್‌ಗೆ ಬರುತ್ತಿದ್ದರು. ಕನ್ನಡ ಓದಲಾಗದ ವಿದ್ಯಾರ್ಥಿ ಮಿತ್ರರು ರೋಗಿಗಳು ಕನ್ನಡದಲ್ಲಿ ಬರೆದ ತಮ್ಮ ಅನಿಸಿಕೆಗಳನ್ನು ಭಾಷಾಂತರ ಮಾಡಿ ಹೇಳುವಂತೆ ನನ್ನನ್ನು ಕೇಳುತ್ತಿದ್ದರು. ಆಗ ಮನಸ್ಸಿನಲ್ಲಿ ಓದುತ್ತಾ, ಬಾಯಿಯಲ್ಲಿ ಅವರವರ ಅಗತ್ಯಕ್ಕೆ ತಕ್ಕಂತೆ ಇಂಗ್ಲಿಷ್ ಅಥವಾ ಹಿಂದಿಗೆ ಭಾಷಾಂತರ ಮಾಡುವುದು ನನಗೆ ಪ್ರಿಯವಾದ ಕೆಲಸವಾಗಿತ್ತು. ಸಂಶೋಧನೆಯಲ್ಲಿ ಅಧ್ಯಯನಕ್ಕೆಂದು ಉಪಯೋಗಿಸುವ ಪ್ರಶ್ನಾವಳಿ ಇಂಗ್ಲಿಷ್‌ನಲ್ಲಿದ್ದರೆ ಅದನ್ನು ನಾನು ಕನ್ನಡ ಇಲ್ಲವೆ ಹಿಂದಿಗೆ ಭಾಷಾಂತರಿಸಿ, ಎರಡೂ ಭಾಷೆಗಳನ್ನು ಬಲ್ಲ ಮತ್ತೊಬ್ಬರಿಂದ ಮರು ಭಾಷಾಂತರ ಮಾಡಿಸುತ್ತಿದ್ದೆ. ಹೀಗೆ ಭಾಷಾಂತರ ವಿವಿಧ ರೂಪಗಳಲ್ಲಿ ವೃತ್ತಿಯ ಭಾಗವಾಗಿತ್ತು. ಇದು 15 ವರ್ಷಗಳ ಹಿಂದಿನ ಕಥೆ.

ಈಗ ಕೃತಕಬುದ್ಧಿಮತ್ತೆ (ಎ.ಐ) ಕಾಲಿರಿಸದ ಕ್ಷೇತ್ರವೇ ಇಲ್ಲ. ಮೊನ್ನೆ ವಿದ್ಯಾರ್ಥಿಗಳಿಗೆ ನೃತ್ಯೋತ್ಸವದಲ್ಲಿ ಕಲಾವಿದರ ಪರಿಚಯ ಮಾಡುವ ಕೆಲಸ ಕೊಟ್ಟೆ. ಅತಿಥಿಗಳು-ಕಲಾವಿದರು ಪರಿಚಯವನ್ನು ಇಂಗ್ಲಿಷ್‌ನಲ್ಲಿ ಕಳಿಸಿದ್ದರು. ನನ್ನ ವಿದ್ಯಾರ್ಥಿಗಳೋ ‘ಕೃತಕಬುದ್ಧಿಮತ್ತೆಯ ಮಕ್ಕಳು'!. ಯಾರೂ ನನ್ನನ್ನೇನೂ ಭಾಷಾಂತರ ಮಾಡೆಂದು ಕೇಳಲಿಲ್ಲ. ಸರಸರ ಮೊಬೈಲ್ ತೆಗೆದು ಗೂಗಲ್ ಟ್ರಾನ್ಸ್ಲೇಟರ್‌ಗೆ ಹಾಕಿ ಕನ್ನಡದ ಅನುವಾದವನ್ನು ಕ್ಷಣದಲ್ಲಿ ನನ್ನ ಮುಂದಿಟ್ಟರು. ಲೇಖಕರೊಬ್ಬರು ‘ಗೂಗಲ್ ಟ್ರಾನ್ಸ್ಲೇಟರ್‌ಗೆ ಹಾಕಿಕೊಂಡೇ ಪ್ರತಿ ವಾರ ಅಂಕಣ ಬರೆಹ ಬರೆಯುತ್ತೇನೆ ಇಲ್ಲವೆ 'speech typing' ಮಾಡುತ್ತೇನೆ’ ಎಂದರು! ಆ ಕ್ಷಣದಲ್ಲಿ ಮುತುವರ್ಜಿಯಿಂದ ಭಾಷಾಂತರ ಮಾಡುವ ನನ್ನ ಬಹುಭಾಷಾ ಪ್ರಾವೀಣ್ಯ ನಿಷ್ಪ್ರಯೋಜಕ ಎನ್ನುವ ಭಾವನೆ ಬರುವಂತೆ ಮಾಡಿದ್ದು ಸುಳ್ಳಲ್ಲ.

ಇದೇ ವಿಷಾದದಲ್ಲಿ ವಿಶಾಖಪಟ್ಟಣಕ್ಕೆ ಹೋಗಿದ್ದೆ. ಅಲ್ಲಿ ಹರುಕು-ಮುರುಕು ತೆಲುಗುವಿನಲ್ಲಿ ಹೇಗೋ ನಿಭಾಯಿಸುತ್ತಿದ್ದೆ. ಒಮ್ಮೆ ನಾನು ಹೇಳಲು ಪ್ರಯತ್ನಿಸಿದ್ದು ಚಾಲಕನಿಗೆ ಅರ್ಥವಾಗಲೇ ಇಲ್ಲ. ತತ್‌ಕ್ಷಣ ಗೂಗಲ್ ಟ್ರಾನ್ಸ್ಲೇಟರ್ ತೆರೆದು ನಾನು ಹೇಳಬೇಕೆಂದಿದ್ದನ್ನು ಟೈಪಿಸಿದೆ. ಅದು ಕೊಟ್ಟ ವಾಕ್ಯವನ್ನು ಓದಿದೆ. ಮ್ಯಾಜಿಕ್! ನಮ್ಮ ಮುಖ ಅರಳಿತು. ನಾನು ತೆಲುಗುವಿನಲ್ಲಿ ಮಾತನಾಡುತ್ತಿದ್ದೆ!.

ಮಾನವನ ಭಾಷಾ ಕೌಶಲ ಅದ್ಭುತ ಅಂದುಕೊಂಡಿದ್ದೆ. ಫೇಸ್‌ಬುಕ್‌ನಲ್ಲಿ ತನ್ನಿಂತಾನೇ ಕನ್ನಡದ ಸಂದೇಶಗಳು ಇಂಗ್ಲಿಷ್‌ಗೆ ಭಾಷಾಂತರಗೊಳ್ಳುವುದು ನೋಡುತ್ತಿದ್ದೆ. ಕೆಲವೊಮ್ಮೆ ಕನ್ನಡ ಪದ ಬೇಕೆಂದು ಗೂಗಲ್ ಮಾಡಿ ಇಂಗ್ಲಿಷ್ ಸಮಾನ ಪದ ಹಾಕಿದರೆ ಅದೇ ಪದ ಕನ್ನಡ ಲಿಪಿಯಲ್ಲಷ್ಟೆ ಬರುತ್ತಿತ್ತು. ಆದರೆ ಈ ಫಜೀತಿಗಳು ಕ್ರಮೇಣ ಸುಧಾರಿಸುತ್ತಿದ್ದವು. ಕೃತಕಬುದ್ಧಿಮತ್ತೆಯನ್ನು ನಾವು ಉಪಯೋಗಿಸಿ, ಮತ್ತೆ ಮತ್ತೆ ಅದನ್ನು ಪ್ರಶ್ನೆ ಕೇಳಿದಷ್ಟೂ ಅದು ಕಲಿಯುವುದು ಹೆಚ್ಚಾಗುತ್ತಿತ್ತು; ನಾವು ಕಲಿಯುವುದು ಕಡಿಮೆಯಾಗುತ್ತಿತ್ತು. ನನ್ನಂತಹ ಭಾಷೆಗಳ ಕುತೂಹಲಿಯನ್ನೂ ‘ಗೂಗಲ್ ಮಾಡಿದರೆ ಸಾಕು, ಸಿಕ್ಕಿಬಿಡುತ್ತದೆ’ ಎಂಬ ಧೋರಣೆ ತಳೆಯುವಷ್ಟು ಅದರ ಭಾಷಾ ಪರಿಣತಿ ಇದೆ.

ಹತ್ತಿರದ ಭವಿಷ್ಯದಲ್ಲಿ ಕೃತಕಬುದ್ಧಿಮತ್ತೆ ಮನುಷ್ಯನ ಭಾಷಾ ಕೌಶಲಗಳನ್ನೇ ಅನವಶ್ಯಕ ಎನಿಸುವಂತೆ ಮಾಡಿಬಿಡಬಹುದೆ? ಭಾಷಾಂತರದ ಇಂಜಿನ್‌ಗಳು ಸುಮಾರು ನೂರು ಭಾಷೆಗಳನ್ನು ಸಾಕಷ್ಟು ನಿಖರವಾಗಿ ಒಂದರಿಂದ ಇನ್ನೊಂದಕ್ಕೆ ತರ್ಜುಮೆ ಮಾಡಬಲ್ಲವು. ಈ ಭಾಷಾಂತರ ಮೇಲ್ನೋಟಕ್ಕೆ ಸರಿ ಎನಿಸಬಹುದು; ವ್ಯಾಕರಣ ಬದ್ಧವಾಗಿದೆ ಎನ್ನಿಸಬಹುದು. ಆದರೆ ಅದರಲ್ಲಿ ಎದ್ದು ಕಾಣುವ ಕೊರತೆ ಭಾವಹೀನತೆ. ಹಾಸ್ಯ-ವ್ಯಂಗ್ಯ-ದುಃಖ-ಪ್ರೀತಿ ಮೊದಲಾದ ಭಾವನೆಗಳನ್ನು ಭಾಷೆಯಲ್ಲಿ-ಅಕ್ಷರಗಳಲ್ಲಿ ಹಿಡಿದಿಡುವ ಸಾಮರ್ಥ್ಯ ಕೃತಕವಲ್ಲ. ಒಂದು ಭಾಷೆಯ ಧ್ವನಿ ಅದೇ ಭಾಷೆಯ ಅಕ್ಷರಗಳಲ್ಲಿಯೂ ಹಿಡಿದಿಡಲ್ಪಡುವುದೂ ಕಷ್ಟ. ಭಾಷಾಂತರದಲ್ಲಿ ಅದು ಮತ್ತಷ್ಟು ಕಷ್ಟ. ಭಾಷಾಂತರಕಾರ ಒಟ್ಟು ಸಂದರ್ಭ ಗ್ರಹಿಸದೆ ಭಾಷಾಂತರಿಸುವ ಪ್ರಯತ್ನ ಮಾಡಿದರೆ ಈ ಧ್ವನಿ ಇಲ್ಲವಾಗುವ ಸಾಧ್ಯತೆಯೇ ಹೆಚ್ಚು. ಕನ್ನಡದ ಕಾದಂಬರಿಗಳನ್ನು ಇಂಗ್ಲಿಷಿನಲ್ಲಿ ಓದುವಾಗ ಈ ಅನುಭವ ಅರಿವಿಗೆ ಬರುತ್ತದೆ. ಅತ್ಯುತ್ತಮ ಭಾಷಾಂತರ ಎನಿಸಬೇಕಾದಾಗ ಕಥೆ ಇಂತಹ ಭಾಷೆಯದು ಎಂಬ ಅರಿವೇ ನಮಗಾಗಬಾರದು. ಇಂತಹ ಭಾಷಾಂತರ ಈಗ ಪರಿಣತ-ಸೃಜನಶೀಲ ಮನುಷ್ಯ ಭಾಷಾಂತರಕಾರನಿಗೆ ಮಾತ್ರ ಸಾಧ್ಯವಿರಬಹುದಾದರೂ, ಮನುಷ್ಯರು ಅಂತಹ ಆಲ್ಗೋರಿಥಮ್ ಅನ್ನು ಕೆಲವೇ ವರ್ಷಗಳಲ್ಲಿ ರೂಪಿಸುವ ಎಲ್ಲ ಸಾಧ್ಯತೆಗಳೂ ಬಲವಾಗಿಯೇ ತೋರುತ್ತವೆ.



ತರ್ಜುಮೆಯ ಸಾಮರ್ಥ್ಯದ ಜೊತೆಗೆ ಪಠ್ಯದ ಭಾವನೆಗಳನ್ನೂ ಗ್ರಹಿಸುವುದನ್ನು ರೂಢಿಸಿಕೊಂಡ ಕೃತಕಬುದ್ಧಿಮತ್ತೆ ಬಂದರೆ ಭಾಷಾ ಕಲಿಕೆ ಯಾವ ದಿಕ್ಕಿಗೆ ಸಾಗಬಹುದು? ಭಾಷೆ ಎಂದರೆ ಕೇವಲ ಮಾತಲ್ಲ, ಅದು ಒಂದು ಸಮಾಜದ ಸಾಂಸ್ಕೃತಿಕ-ಭೌದ್ಧಿಕ-ಭಾವನಾತ್ಮಕ ಪ್ರಕ್ರಿಯೆಗಳ ಒಟ್ಟು ಸಂಕೇತವಾಗಿ, ಆ ಸಮಾಜದ ಜನರನ್ನು ಬೆಸೆಯುವ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಇದು ಭಾಷೆ-ಭಾವನೆ-ಸಮಾಜ-ಸಂಸ್ಕೃತಿಗಳ ಮಾತಾದರೆ, ಮಿದುಳಿನ ಆರೋಗ್ಯಕ್ಕೆ ಹೊಸ ಭಾಷೆಗಳನ್ನು ಕಲಿಯುವುದು ಅತ್ಯವಶ್ಯ ಎನ್ನುತ್ತದೆ ನರವಿಜ್ಞಾನ. ಅದು ಡಿಮೆನ್ಷಿಯಾ ತಡೆಯುವ ಒಂದು ಉಪಾಯ ಎನ್ನುತ್ತದೆ. ಸಮಸ್ಯಾ ಪರಿಹಾರದ ಸಾಮರ್ಥ್ಯ, ನೆನಪಿನ ಶಕ್ತಿ, ವಿಮರ್ಶಾತ್ಮಕ ಚಿಂತನೆ ಇವು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯುವವರಿಗೆ ಆಗುವ ಆನುಷಂಗಿಕ ಲಾಭಗಳು. ಹೀಗಿರುವಾಗ ಕೃತಕಬುದ್ಧಿಮತ್ತೆವನ್ನೇ ನೆಚ್ಚಿಕೊಂಡು ಸೋಮಾರಿತನ ರೂಢಿಸಿಕೊಳ್ಳುವ ನಾವು ಸಹಜವಾಗಿ ಇವೆಲ್ಲವನ್ನೂ ಇಲ್ಲವಾಗಿಸಿಕೊಳ್ಳುವ ಸಾಧ್ಯತೆಯೇ ಹೆಚ್ಚು.

ಭಾಷೆಯಲ್ಲಿ ಐದು ಮುಖ್ಯ ಅಂಶಗಗಳಿವೆ. ಸೃಜನಶೀಲತೆ (ಪ್ರಾಸ-ಪದ ಸಂಪತ್ತು, ಕಾವ್ಯ), ಆತ್ಮಾನುಭೂತಿ-ಸಹಾನುಭೂತಿ (ಸಮಾಧಾನ-ಪ್ರೋತ್ಸಾಹ-ಕಾಳಜಿ), ಬೌದ್ಧಿಕತೆ (ಗಾದೆ, ಬೋಧನೆ, ತತ್ತ್ವ), ಭಾವನಾತ್ಮಕತೆ (ಪ್ರೀತಿ-ಹಾಸ್ಯ-ದುಃಖ), ಸಂಸ್ಕೃತಿ (ಮೌಲ್ಯ, ಪರಂಪರೆ, ನಂಬಿಕೆ) ಇವು ಮಾತಿನ ಸಂವಹನವನ್ನು ಭಾಷೆ ಎನಿಸುವಂತೆ ಮಾಡುತ್ತವೆ. ‘ಕೈ ಕೆಸರಾದರೆ ಬಾಯಿ ಮೊಸರು' ಎಂಬ ಗಾದೆಗೆ ಮನುಷ್ಯ ನೀಡುವ ಭಾಷಾಂತರ 'no pain no gain'. ಕೃತಕಬುದ್ಧಿಮತ್ತೆ ನೀಡುವ ಭಾಷಾಂತರ, 'If the hands are muddy, the mouth is curdled'!

ಕ್ಷಣಗಳಲ್ಲಿ ಭಾಷಾಂತರ ಮಾಡುವ, ಪ್ರವಾಸಿಗಳಿಗೆ ತತ್‌ಕ್ಷಣ ಭಾಷಾಂತರ ಮಾಡಿ ಸಹಕರಿಸುವ ಕೃತಕಬುದ್ಧಿಮತ್ತೆ ನಿರುಪಯುಕ್ತವೆ? ಇಲ್ಲ. ಆದರೆ ಅನುಭವಗಳಿಂದ ಶ್ರೀಮಂತವಾದ, ಮಾನವ ಮೂಲವಾದ ಭಾಷಾ ಸಂಪತ್ತನ್ನು ನಾವು ಯಂತ್ರದ ಕೈಗೆ ಹಾಕಿ ಕೈಕಟ್ಟಿ ಕುಳಿತಿರುವಂತಿಲ್ಲ. ಅದರ ಸಹಾಯದಿಂದ ಹೊಸ ಭಾಷೆಯನ್ನು ಕಲಿಯುವ ಪ್ರಯತ್ನವನ್ನು ಮಾಡಬಹುದು. ಭಾಷಾ ಪ್ರಜ್ಞೆ-Linguistic consciousness ಅನ್ನು ಬಹುಭಾಷೆಗಳನ್ನು ಕಲಿಯುವ ಮೂಲಕ ರೂಢಿಸಿಕೊಳ್ಳುವ ಪ್ರಯತ್ನ ಮಾಡಬಹುದು.

ರಂಗಮಂಚದ ಮೇಲೆ ಗೆಜ್ಜೆಯದೇ ಸದ್ದು

‘ಹೆಜ್ಜೆಗೊಲಿದ ಬೆಳಕು’ ಏಕವ್ಯಕ್ತಿ ನಾಟಕದಲ್ಲಿ ಸಂಸ್ಕೃತಿ ಪ್ರಭಾಕರ

ರಾಘವೇಂದ್ರ ರಾವ್, ಕಟಪಾಡಿ

ವಿದುಷಿ ಸಂಸ್ಕೃತಿ ಪ್ರಭಾಕರ ಪ್ರಸ್ತುತಪಡಿಸಿದ ‘ಹೆಜ್ಜೆಗೊಲಿದ ಬೆಳಕು’ ಏಕವ್ಯಕ್ತಿ ನಾಟಕ ಇತ್ತೀಚೆಗೆ ಉಡುಪಿಯ ಯಕ್ಷಗಾನ ಕಲಾರಂಗದ ಇನ್ಫೋಸಿಸ್ ಸಭಾಂಗಣದಲ್ಲಿ ಪ್ರದರ್ಶನಗೊಂಡಿತು. ಹೊಯ್ಸಳ ಸಾಮ್ರಾಜ್ಯದ ಸಾಮ್ರಾಜ್ಞಿ ಶಾಂತಲೆಯ ಆತ್ಮವೃತ್ತವನ್ನು ಅಧರಿಸಿ ಲೇಖಕಿ ಸುಧಾ ಆಡುಕಳ ರಚಿಸಿದ ರಂಗಪಠ್ಯವನ್ನು ಗಣೇಶ ಎಲ್ಲೂರು ನಿರ್ದೇಶಿಸಿದರು.

ಕಲಾಭಿರುಚಿ ವ್ಯಕ್ತಿಯಿಂದ ವ್ಯಕ್ತಿಗೆ ವಿಭಿನ್ನವಾಗಿರುವುದು ಸಹಜವೇ. ಆಗಿದ್ದರೂ ನಾಟ್ಯವು ಕಲಾಭಿರುಚಿಯನ್ನು ತಣಿಸುವಷ್ಟು ಸಶಕ್ತವಾಗಿರುತ್ತದೆ ಎಂದು ಕಾವ್ಯಮೀಮಾಂಸಕರೇ ಒಪ್ಪಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಯೋಚಿಸಿ ನೋಡಿದಾಗ ವರ್ತಮಾನದ ಜಗತ್ತಿನಲ್ಲಿಯೂ ನಾಟ್ಯ ಕುರಿತಾದ ಆಸಕ್ತಿ ಕಡಿಮೆಯಾಗಿಲ್ಲ. ಬದಲಾಗಿ ವೈವಿಧ್ಯಮಯ ಸ್ವರೂಪದಲ್ಲಿ ರಸಿಕರ ಕಣ್ಣೆದುರು ಬಂದು ಕುತೂಹಲ ಮತ್ತು ಆಸಕ್ತಿಯನ್ನು ಕೆರಳಿಸುತ್ತಲೇ ಇದೆ.

ನೃತ್ಯದಲ್ಲಿ ಪಳಗಿದ ಕಲಾವಿದೆ ತಮ್ಮ ಕಲಾನೈಪುಣ್ಯದಿಂದ ಪ್ರೇಕ್ಷಕರ ಚಿತ್ತವನ್ನು ಬಹಳ ಹೊತ್ತು ಹೇಗೆ ತನ್ನೆಡೆಗೆ ಸೆಳೆಯಬಲ್ಲರು ಎಂಬುದಕ್ಕೆ ಈ ಏಕವ್ಯಕ್ತಿ ನಾಟಕವೇ ನಿದರ್ಶನ.

ನಾಟ್ಯದರಸಿ ಶಾಂತಲೆಯ ಬಾಳಿನ ಏರಿಳಿತಗಳ ಮನೋಜ್ಞ ಕಥಾಹಂದರದ ಗಟ್ಟಿ ನೆಲೆ ಈ ನಾಟಕಕ್ಕಿದ್ದು, ಐತಿಹಾಸಿಕ ಕಥೆಯೊಂದನ್ನು ರಂಗಪಠ್ಯವಾಗಿಸುವಲ್ಲಿ ಸುಧಾ ಆಡುಕಳ ಯಶಸ್ವಿಯಾಗಿದ್ದಾರೆ. ಭಾವಕ್ಕೆ ಅನುಗುಣವಾದ ಭಾಷೆಯ ಸೊಗಡನ್ನು ಕೇಳುಗರು ಪ್ರಶಂಸಿಸದೇ ಇರಲಾರರು. ರಂಗಭೂಮಿಯ ಸಾಧ್ಯತೆಗಳು ಕಲ್ಪನೆಗೆ ನಿಲುಕಲಾರವು ಎಂಬುದು ಎಷ್ಟು ಸತ್ಯವೋ, ರಂಗ ನಿರ್ದೇಶಕನ ತಾದಾತ್ಮ್ಯಭಾವವೂ ವಿಶಿಷ್ಟ ಪ್ರಭಾವ ಬೀರುತ್ತದೆ ಎಂಬುದೂ ಅಷ್ಟೇ ಸತ್ಯ. ನಿರ್ದೇಶಕ ಗಣೇಶ ಎಲ್ಲೂರ ರಂಗಪರಿಕರಗಳನ್ನು ಔಚಿತ್ಯದ ಪರಿಧಿಯನ್ನು ಮೀರದಂತೆ ಸಿದ್ಧವಸ್ತುವನ್ನಾಗಿಸಿದ ಬಗೆ ಹಿತವೆನಿಸುತ್ತದೆ.

ವಿದುಷಿ ಸಂಸ್ಕೃತಿ ರಂಗಚಲನೆಯಲ್ಲಾಗಲಿ, ನೃತ್ಯದಲ್ಲಾಗಲಿ, ಮಾತಿನ ಓಘದಲ್ಲಾಗಲಿ, ಭಾವತೀವ್ರತೆಯಲ್ಲಾಗಲಿ ತಮ್ಮನ್ನು ನಿಯಂತ್ರಿಸಿಕೊಂಡ ಬಗೆ ಕೆಲವೊಮ್ಮೆ ಅಚ್ಚರಿಗೆ ಕಾರಣವಾಗುತ್ತದೆ. ನಟಿ ಮತ್ತು ನಿರ್ದೇಶಕರ ಶ್ರದ್ಧೆಯಿಂದ ಮಾತ್ರ ಇಂತಹ ಪ್ರಯೋಗ ಸಾಧ್ಯವಾದೀತು ಎನಿಸುತ್ತದೆ.

ನೃತ್ಯವನ್ನೇ ತನ್ನ ಉಸಿರಾಗಿಸಿಕೊಂಡ ಶಾಂತಲೆಗೆ, ಹೊಯ್ಸಳರ ದೊರೆಯಿಂದ ಬಂದ ವಿವಾಹದ ಆಹ್ವಾನ ಅವ್ಯಕ್ತವಾದ ಸಂಕಟವನ್ನೇ ಉಂಟುಮಾಡುತ್ತದೆ. ನಾಡಿನ ಜನರ ಸಂಭ್ರಮವನ್ನು ಅಲ್ಲಗಳೆಯಲಾಗದ, ತನ್ನ ನೃತ್ಯದ ಪ್ರೀತಿಯನ್ನೂ ತೊರೆಯಲಾಗದ ಅವಳ ಒಳಗಿನ ಗೊಂದಲ, ತೊಳಲಾಟ ನಾಟ್ಯದ ಬಹುಮುಖ್ಯ ಸಂವೇದನೆಯ ಭಾಗವಾಗಿ ನಿಲ್ಲುತ್ತದೆ.

ಕೊನೆಗೊಮ್ಮೆ ತನ್ನ ನಾಟ್ಯದ ಭಂಗಿಗಳನ್ನೆ ಶಿಲ್ಪವಾಗಿಸುವ ಅವಳ ಹಂಬಲ, ಪ್ರಥಮರಾತ್ರಿಯ ಮಧುರ ಅನುಭವವನ್ನೂ ಮೀರಿ ನಿಲ್ಲುವುದು ಆಶ್ಚರ್ಯದ ದ್ಯೋತಕವೆಂದೇ ಭಾವಿಸಬೇಕಾಗುತ್ತದೆ. ವಿಷ್ಣುವರ್ಧನನ ಶೃಂಗಾರ ಚೇಷ್ಟೆಗಳನ್ನು, ಶಾಂತಲೆಯ ಸ್ಥಿತಪ್ರಜ್ಞ ಸ್ಥಿತಿಯನ್ನು ಏಕಕಾಲದಲ್ಲಿ ರಂಗದಲ್ಲಿ ಅಭಿನಯಿಸುವುದು ನಟಿಯ ನೈಪುಣ್ಯತೆಯನ್ನು ಒರೆಗೆ ಹಚ್ಚುತ್ತದೆ. ನಟಿ ಅದನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ.

ನಾಟಕದ ಪ್ರತಿಯೊಂದು ಹೆಜ್ಜೆಯಲ್ಲೂ ಕಾಲಿಗೆ ಕಟ್ಟಿದ ಗೆಜ್ಜೆ ಪ್ರೇಕ್ಷಕರೊಂದಿಗೆ ಮಾತನಾಡುತ್ತದೆ. ಮಾತನಾಡುತ್ತದೆ ಎನ್ನುವುದಕ್ಕಿಂತ ಅವರೊಳಗಿನ ಸೂಕ್ಷ್ಮಭಾವನೆಗಳಿಗೆ ಕನ್ನಡಿ ಹಿಡಿಯುತ್ತದೆ ಎಂಬುದೇ ಸೂಕ್ತ.

ಹೊಯ್ಸಳರ ಕುಲವನ್ನು ಬೆಳಗುವ ದೀಪವೊಂದು ಉದಿಸಿತೆಂದು ತುಂಬಿದೊಲವಿನಿಂದ ತೊಟ್ಟಿಲು ತೂಗುತ್ತ ಲಾಲಿಯನ್ನು ಹಾಡುವ ತಾಯಿಗೆ, ಹಸುಳೆಯನ್ನು ಕಳೆದುಕೊಂಡಾಗ ಆಗುವ ವೇದನೆಯೇ ವೈರಾಗ್ಯದ ಪಥವನ್ನು ಸಾಕ್ಷಾತ್ಕರಿಸುವುದು ನೋಡುಗರ ಹೃದಯವನ್ನು ಆರ್ದ್ರಗೊಳಿಸುತ್ತದೆ. ಇಂತಹ ಸಂದರ್ಭಗಳಲ್ಲಿ ನಟನೆಗೆ ಸಂಯಮ ಬೇಕು. ವಾಚಿಕಾಭಿನಯಕ್ಕಿಂತ ಇಲ್ಲಿ ಮೌನವೇ ಹೆಚ್ಚು ಪರಿಣಾಮ ಬೀರುತ್ತದೆ. ಅಂತಹ ಸ್ವಲ್ಪ ಮೌನ ಇಲ್ಲಿ ಅಪೇಕ್ಷಣೀಯವಾಗಿತ್ತು.

ಯುವ ಕಲಾವಿದರೇ ಹಿನ್ನೆಲೆ ಸಂಗೀತದ ನೇತೃತ್ವವನ್ನು ವಹಿಸಿದ್ದು ರಂಗಭೂಮಿಗೆ ಆಶಾದಾಯಕ ಸಂಗತಿ. ಸಾಹಿತ್ಯವನ್ನು, ಭಾವಬಿಂದುವನ್ನು ಪರಿಣಾಮಕಾರಿಯಾಗಿ ತಲುಪಿಸಲು ಮತ್ತಷ್ಟು ಸಾತ್ವಿಕ ಪ್ರಯತ್ನ ಸಂಗೀತಗಾರರಿಗೆ ಬೇಕು ಅನ್ನಿಸಿತು. ರಂಗ ಪ್ರಯೋಗಗಳು ಹೆಚ್ಚಾದಂತೆಲ್ಲ ಇದು ಸಾಧ್ಯವಾದೀತು. ಒಟ್ಟಿನಲ್ಲಿ ಶಾಂತಲೆಯ ಗೆಜ್ಜೆಯ ಹೆಜ್ಜೆಯು ಪರಿಪೂರ್ಣವಾದ ತೇಜಸ್ಸಿನೆಡೆಗೆ ಪ್ರಯಾಣ ಬೆಳೆಸುವಲ್ಲಿ ರಂಗ ಪ್ರಯೋಗವು ಒಂದು ಕಾವ್ಯವಾಗುತ್ತದೆ ಎಂಬುದಕ್ಕೆ ಈ ನಾಟಕ ಸಾಕ್ಷಿಯಂತಿತ್ತು. ವಿದ್ವಾನ್ ಜಿ.ಪಿ. ಪ್ರಭಾಕರ ತುಮರಿ ಅವರ ಪ್ರಜ್ಞಾನಂ ಟ್ರಸ್ಟ್ ಈ ರಂಗ ಪ್ರಯೋಗವನ್ನು ಏರ್ಪಡಿಸಿತ್ತು.

ಇ ಸ್ಪೋರ್ಟ್ಸ್ ಎಂದರೆ ಜೂಜಾಟವಷ್ಟೇ ಅಲ್ಲ

8ನೇ ಪುಟದಿಂದ...

ಇಲ್ಲಿ ನೂತನ ಪರಿಕಲ್ಪನೆಯಲ್ಲಿ ಚೆಸ್ ಸ್ಪರ್ಧೆಯನ್ನು ವಿನ್ಯಾಸಗೊಳಿಸಲಾಗಿದೆ. ಅತ್ಯಾಧುನಿಕ ಚೆಸ್ ಸಾಫ್ಟ್‌ವೇರ್ ಇರುವ ಕಂಪ್ಯೂಟರ್‌ನ ಸಹಾಯದ ಮೂಲಕ ಆಟಗಾರರು ಆಡಬಹುದಾಗಿದೆ. ಅವರಿಗೆ ಒಬ್ಬ ಸಹಾಯಕರನ್ನೂ ನೀಡಲಾಗುತ್ತದೆ. ಎಲ್ಲ ಆಟಗಾರರು ಆಡುವ ಪ್ರತಿಯೊಂದು ನಡೆಯು ಅಲ್ಲಿರುವ ದೊಡ್ಡ ಪರದೆಯ ಮೂಲಕ ಕಾಣುತ್ತದೆ. ಇದರಿಂದಾಗಿ ಪಾರದರ್ಶಕತೆ ಇರುತ್ತದೆ.

‘ಭಾರತದಲ್ಲಿ ಅಂಧರ ಚೆಸ್‌ಗೆ ಉಜ್ವಲ ಭವಿಷ್ಯ ಇದೆ. 1958ರಲ್ಲಿ ನಮ್ಮ ಸಂಘಟನೆ ಆರಂಭವಾಯಿತು. ಕಾಲಕ್ಕೆ ತಕ್ಕಂತೆ ತಂತ್ರಜ್ಞಾನವನ್ನು ಬಳಸಿಕೊಂಡು ಬೆಳೆದಿದ್ದು ನಮ್ಮ ಹೆಗ್ಗಳಿಕೆ. ದೃಷ್ಟಿದೋಷವುಳ್ಳ ಚೆಸ್ ಪಟುಗಳಿಗೆ ತರಬೇತಿ ನೀಡುವುದು, ಟೂರ್ನಿಗಳಿಗೆ ಕರೆದುಕೊಂಡು ಹೋಗುವುದು ಬಹಳ ಸವಾಲಿನ ಕೆಲಸ. ಆರ್ಥಿಕವಾಗಿ ವೆಚ್ಚದಾಯಕವೂ ಹೌದು. ಇದೀಗ ಎಸ್.ಒ.ಜಿ ಮಾಡಿರುವ ಈ ವ್ಯವಸ್ಥೆಯು ಭರವಸೆ ಮೂಡಿಸಿದೆ. ಈ ಮೂಲಕ ದೇಶದ ಗ್ರಾಮಾಂತರ ಪ್ರದೇಶಗಳ ಪ್ರತಿಭಾನ್ವಿತ ಅಂಧ ಚೆಸ್ ಆಟಗಾರರನ್ನೂ ತಲುಪಬಹುದು. ಅವರದ್ದೇ ತಾಣಗಳಲ್ಲಿ ಕುಳಿತು ಅವರು ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾದಂತ ವ್ಯವಸ್ಥೆ ಇದು. ಅಲ್ಲದೇ ಮಾನ್ಯತೆ ಕೂಡ ಸಿಗುತ್ತದೆ’ ಎಂದು ಭಾರತ ಅಂಧರ ಚೆಸ್ ಫೆಡರೇಷನ್ ಸಂಸ್ಥಾಪಕರಲ್ಲಿ ಒಬ್ಬರಾಗಿರುವ ಚಾರುದತ್ತ ಜಾಧವ್ ಹೇಳುತ್ತಾರೆ.

ಚೆಸ್ ಆಟದಲ್ಲಿ ನಿರತ ಸ್ಪರ್ಧಿಗಳು

ನೋಂದಣಿ ಹೇಗೆ?

ಎಸ್‌ಒಜಿಎಫ್ ನಿಂದ ಮೂರು ಗೇಮ್‌ಗಳ (ಚೆಸ್, ಅಂಧರ ಚೆಸ್ ಮತ್ತು ಇಂಡಿಯನ್ ರಮ್ಮಿ) ವಿಭಾಗಗಳಲ್ಲಿ ಗ್ರ್ಯಾಂಡ್‌ಮಾಸ್ಟರ್ಸ್ ಸೀರಿಸ್ ನಡೆಸುತ್ತಿದೆ. ವಲಯವಾರು ನಡೆಯುವ ಟೂರ್ನಿಗಳಲ್ಲಿ ಭಾಗವಹಿಸಲು www.soggrandmasters.com ಅಥವಾ Www.playirg.com ವೆಬ್‌ಸೈಟ್‌ಗಳ ಮೂಲಕ ನೋಂದಣಿ ಮಾಡಿಕೊಳ್ಳಬಹುದು.

ಟೈಂಪಾಸ್‌ಗಾಗಿ ಆಡುವ ಆನ್‌ಲೈನ್ ಗೇಮ್‌ಗಳನ್ನು ಸ್ಪರ್ಧಾತ್ಮಕ ಮತ್ತು ವೃತ್ತಿಪರತೆಯತ್ತ ಕೊಂಡೊಯ್ಯುವ ಅಭಿಯಾನ ಆರಂಭವಾಗಿದೆ. ಪ್ರಮುಖವಾಗಿ ಜೂಜಾಟ ಮತ್ತು ವ್ಯಸನಮುಕ್ತ ಯುವಜನತೆಯನ್ನು ಭವಿಷ್ಯದ ಇ ಸ್ಪೋರ್ಟ್ಸ್ ಚಾಂಪಿಯನ್‌ಗಳಾಗಿ ಮಾಡುವ ಅಭಿಯಾನ ಇದಾಗಿದೆ.

ನಾಲ್ಕು ವಲಯಮಟ್ಟ ಮತ್ತು ಒಂದು ರಾಷ್ಟ್ರಮಟ್ಟದ ಚಾಂಪಿಯನ್‌ಷಿಪ್ ಅನ್ನು ಎಸ್‌ಒಜಿಎಫ್ ಆಯೋಜಿಸಿದೆ. ಇವುಗಳಲ್ಲಿ 50 ಸಾವಿರಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದಾರೆ. ವಿಜೇತರಿಗೆ ಗ್ರ್ಯಾಂಡ್‌ಮಾಸ್ಟರ್ ವಿದ್ಯಾರ್ಥಿ ವೇತನವನ್ನೂ ನೀಡಲಾಗುತ್ತಿದೆ.

ಇಂಟರ್‌ನೆಟ್ ಸಂಪರ್ಕದಲ್ಲಿ ಆಗಿರುವ ಕ್ರಾಂತಿ ಮತ್ತು ಎಲ್ಲರ ಕೈಗಟಕುತ್ತಿರುವ ಸ್ಮಾರ್ಟ್‌ಫೋನ್‌ಗಳು ಇ ಸ್ಪೋರ್ಟ್ಸ್ ಬೆಳವಣಿಗೆಗೆ ಪೂರಕವಾಗಿದೆ. ಆದರೆ ಮಕ್ಕಳು ಮತ್ತು ಯುವ ಸಮುದಾಯವನ್ನು ಜೂಜಾಟದ ಗೀಳಿಗೆ ಎಳೆಯುವ ಬದಲು ಚಾಂಪಿಯನ್‌ಗಳನ್ನಾಗಿ ರೂಪಿಸುವತ್ತ ಹೆಜ್ಜೆ ಹಾಕುವುದು ಇಂದಿನ ಅನಿವಾರ್ಯತೆಯೂ ಹೌದು.

ಏಷ್ಯನ್ ಗೇಮ್ಸ್ ಪದಕಗಳ ಕನಸು

2022ರಲ್ಲಿ ಚೀನಾದ ಹಾಂಗ್‌ಝೌನಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಮೊದಲ ಬಾರಿಗೆ ಇ ಸ್ಪೋರ್ಟ್ಸ್ ಗೇಮ್‌ಗಳನ್ನು ಮೆಡಲ್ ವಿಭಾಗದಲ್ಲಿ ಆರಂಭಿಸಲಾಗಿತ್ತು.

ಭಾರತದ 15 ಸ್ಪರ್ಧಿಗಳು ಅದರಲ್ಲಿ ಭಾಗವಹಿಸಿದ್ದರು. ಆದರೆ ಪದಕ ಒಲಿದಿರಲಿಲ್ಲ. ಆ ಕೂಟದಲ್ಲಿ 7 ಗೇಮ್‌ಗಳನ್ನು ಆಡಿಸಲಾಗಿತ್ತು. ಅದರಲ್ಲಿ ಭಾರತದ ಸ್ಪರ್ಧಿಗಳು ಡೋಟಾ 2, ಫಿಫಾ ಆನ್‌ಲೈನ್ 4, ಸ್ಟ್ರೀಟ್ ಫೈಟ್ ವಿ ಮತ್ತು ಲೀಗ್ ಆಫ್ ಲೆಜೆಂಡ್ಸ್ ಗೇಮ್ ವಿಭಾಗಗಳಲ್ಲಿ ಮಾತ್ರ ಸ್ಪರ್ಧಿಸಿದ್ದರು. ಇನ್ನುಳಿದ ಗೇಮ್‌ಗಳು ಭಾರತದಲ್ಲಿ ನಿಷೇಧಕ್ಕೊಳಗಾಗಿದ್ದ ಕಾರಣ ತಂಡ ರಚಿಸಿರಲಿಲ್ಲ.

2026 ರ ಏಷ್ಯನ್ ಕೂಟದಲ್ಲಿ ಇ ಸ್ಪೋರ್ಟ್ಸ್ ಸ್ಪರ್ಧೆಗಳ ಸಂಖ್ಯೆಯನ್ನು 11ಕ್ಕೇರಿಸಲಾಗಿದೆ. ಇದು ಭಾರತಕ್ಕೆ ಅನುಕೂಲವಾಗುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಎಸ್.ಒ.ಜಿ.ಎಫ್ ಕಾರ್ಯತತ್ಪರವಾಗುವತ್ತ ಚಿತ್ತ ನೆಟ್ಟಿದೆ.

‘ಇ ಸ್ಪೋರ್ಟ್ಸ್‌ಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಏಷ್ಯನ್ ಒಲಿಂಪಿಕ್ ಸಂಸ್ಥೆ ಇಟ್ಟಿರುವ ಮಹತ್ವದ ಹೆಜ್ಜೆ ಇದಾಗಿದೆ. ಇದರಿಂದ ಅಂತರರಾಷ್ಟ್ರೀಯ ಇ ಸ್ಪೋರ್ಟ್ಸ್ ವೇಳಾಪಟ್ಟಿಯನ್ನು ರೂಪಿಸಲು ಹೆಚ್ಚು ಅನುಕೂಲವಾಗಿದೆ. ಭಾರತ ಸರ್ಕಾರವೂ ದೇಶದಲ್ಲಿ ಸ್ಪರ್ಧಾತ್ಮಕ ಹಾಗೂ ಬೌದ್ಧಿಕ ಕೌಶಲಾಧಾರಿತ ಆನ್‌ಲೈನ್ ಗೇಮ್‌ಗಳಿಗೆ ಉತ್ತೇಜನಕಾರಿಯಾದ ಯೋಜನೆ ಪ್ರಕಟಿಸುವ ನಿರೀಕ್ಷೆಯೂ ಇದೆ. ಸ್ಪರ್ಧಾಳುಗಳ ತರಬೇತಿ ಮತ್ತಿತರ ಸೌಕರ್ಯಗಳ ಅಭಿವೃದ್ಧಿಗೆ ನಾವು ಕೂಡ ಕಟಿಬದ್ಧರಾಗಿದ್ದೇವೆ’ ಎಂದು ಭಾಕ್ರಿ ತಿಳಿಸಿದ್ದಾರೆ.

ಮುನ್ನೋಟ 02-03-2025 ರಿಂದ 08-03-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಆದಾಯವು ಉತ್ತಮವಾಗಿರುತ್ತದೆ. ನಿಮ್ಮ ಕೆಲಸಗಳನ್ನು ಸಮಯಕ್ಕೆ ಸರಿಯಾಗಿ ಮಾಡಿ ಮುಗಿಸಲು ಪ್ರಯತ್ನಪಡುವಿರಿ. ಹಿರಿಯರಿಂದ ನಿಮಗೆ ಹೆಚ್ಚು ಅನುಕೂಲವಾಗುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಗಳಿಸುವ ಯೋಗವಿದೆ. ಹಳೆ ಕಾಯಿಲೆಗಳು ನಿಮ್ಮನ್ನು ಕಾಡಬಹುದು. ಧರ್ಮದಿಂದ ಶತ್ರುಗಳನ್ನು ಗೆಲ್ಲಬಹುದು. ಕೆಲವು ರಾಜಕಾರಣಿಗಳಿಗೆ ಉತ್ತಮ ಸ್ಥಾನ ಸಿಗುವ ಯೋಗವಿದೆ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಕೆಲವರಿಗೆ ನಿರೀಕ್ಷಿತ ಆದಾಯ ಬರುವ ಸಾಧ್ಯತೆಯಿದೆ. ಕೃಷಿಯಿಂದ ಹೆಚ್ಚಿನ ಆದಾಯ ದೊರೆಯುತ್ತದೆ. ಹೈನುಗಾರಿಕೆ ನಡೆಸುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕಿಂತ ಕಡಿಮೆ ಫಲಿತಾಂಶ ಬರಬಹುದು. ಮಹಿಳಾ ವೈದ್ಯರುಗಳಿಗೆ ಬೇಡಿಕೆ ಹೆಚ್ಚುತ್ತದೆ. ಸಂಗಾತಿಯ ಜೊತೆ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಆಹಾರ ವಸ್ತುಗಳನ್ನು ರಫ್ತು ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ವಾರದ ಆರಂಭದಲ್ಲಿ ದ್ವಂದ್ವವಿರುತ್ತದೆ. ನಿಮ್ಮದೇ ಆದ ಆಲೋಚನೆಗಳಿಂದ ಆದಾಯ ಹೆಚ್ಚು ಮಾಡಿಕೊಳ್ಳುವಿರಿ. ಹಿರಿಯರು ನಿಮ್ಮ ಮೇಲೆ ಪ್ರಭಾವವನ್ನು ಬೀರುವರು. ಕಟ್ಟಡ ನಿರ್ಮಾಣಕಾರರಿಗೆ ಉತ್ತಮ ಆದಾಯವಿರುವುದಿಲ್ಲ. ಕೃಷಿಯಿಂದ ಆದಾಯವಿರುತ್ತದೆ. ಸಾಹಸ ಕಲಾವಿದರುಗಳು ಸಾಹಸ ಕಲೆಯನ್ನು ಪ್ರದರ್ಶಿಸುವಾಗ ಎಚ್ಚರದಿಂದಿರಿ. ಸಂಗಾತಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ವಾರದ ಆರಂಭದಲ್ಲಿ ಸ್ಥಿರ ಮನಸ್ಸಿಲ್ಲದೆ ಒದ್ದಾಡುವಿರಿ. ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಸರಿಯಾಗಿ ಆಲೋಚಿಸಿ. ಸಮೂಹದಲ್ಲಿ ಮಾತನಾಡುವಾಗ ಎಚ್ಚರಿಕೆ ಇರಲಿ. ಧಾರ್ಮಿಕ ವಿಷಯಗಳ ಬಗ್ಗೆ ಆಸಕ್ತಿ ಹೆಚ್ಚುತ್ತದೆ. ಹಿರಿಯರ ಆಸ್ತಿ ಲಭಿಸುವ ಸಾಧ್ಯತೆಗಳಿವೆ. ಕೃಷಿಗಾಗಿ ಹೆಚ್ಚು ಹಣ ವ್ಯಯವಾಗುತ್ತದೆ. ನಿಮ್ಮ ಹಿರಿಯರು ನಿಮ್ಮ ಆರ್ಥಿಕ ಸಂಕಷ್ಟಕ್ಕೆ ಬೆಂಬಲವಾಗಿ ನಿಲ್ಲುವರು.

ಸಿಂಹ — **ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ನಿಮ್ಮದೇ ಆಲಸೀತನ ನಿಮ್ಮ ಕೆಲವು ಕೆಲಸ ಕಾರ್ಯಗಳನ್ನು ನಿಲ್ಲಿಸುತ್ತದೆ. ಆದಾಯ ಕಡಿಮೆ ಇರುತ್ತದೆ. ಧಾರ್ಮಿಕ ಕಾರ್ಯಗಳನ್ನು ಮಾಡಿ ಸಂಪಾದನೆ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವೃತ್ತಿಗೆ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಂಡು ಮುಂದುವರೆಯಬಹುದು. ಸ್ನಾಯು ಸೆಳೆತ ಇರುವವರು ಎಚ್ಚರವಹಿಸಿ. ಸಂಗಾತಿಯ ಸಹಾಯದಿಂದ ನ್ಯಾಯಾಲಯಗಳಲ್ಲಿ ಜಯ ಸಾಧಿಸಬಹುದು.

ಕನ್ಯಾ — **ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ವಾಗ್ಮಿಗಳಿಗೆ ಉತ್ತಮ ವೇದಿಕೆ ಒದಗುತ್ತದೆ. ಸಂಗಾತಿಯ ಸಹಕಾರದೊಂದಿಗೆ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ನಿಮ್ಮ ಕೆಲಸದಿಂದ ವೃತ್ತಿ ಜಾಗದಲ್ಲಿ ಅಭಿವೃದ್ಧ ಕಾಣಬಹುದು. ಭೂಮಿ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಸಂಗಾತಿ ತನ್ನ ವಿದೇಶಿ ವ್ಯವಹಾರಗಳಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖಾ 1,2,3**
ನಿಮ್ಮ ಹೇಳಿಕೆಗಳಲ್ಲೇ ಸಾಕಷ್ಟು ದ್ವಂದ್ವವಿರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಹಿರಿಯರ ಅಡ್ಡಿ ಬರಬಹುದು. ಕೃಷಿಯಿಂದ ನಿಮಗೆ ಲಾಭವಿರುತ್ತದೆ. ಕೃಷಿ ಭೂಮಿಯನ್ನು ವಿಸ್ತರಿಸುವ ಯೋಗವಿದೆ. ಕೀಲುಗಳ ನೋವು ಅಥವಾ ರಕ್ತಹೀನತೆ ಕೆಲವರನ್ನು ಕಾಡಬಹುದು. ಸಂಗಾತಿಯ ಸಲಹೆಯಿಂದ ಆದಾಯವನ್ನು ಸ್ವಲ್ಪ ಹೆಚ್ಚಿಸಿಕೊಳ್ಳಬಹುದು.

ವೃಶ್ಚಿಕ — **ವಿಶಾಖಾ 4 ಅನೂರಾಧ, ಜ್ಯೇಷ್ಠ**
ಆದಾಯವು ನಿಮ್ಮ ವೆಚ್ಚವನ್ನು ಸರಿದೂಗಿಸುತ್ತದೆ. ಶ್ರಮಪಟ್ಟು ಕೆಲಸ ಮಾಡಿ ಹಿರಿಯರ ಮೆಚ್ಚುಗೆ ಪಡೆಯುವಿರಿ. ವಾಯುಯಾನ ತಂತ್ರಜ್ಞಾನವನ್ನು ಕಲಿಯುತ್ತಿರುವವರಿಗೆ ಹೆಚ್ಚಿನ ಏಳಿಗೆ ಇರುತ್ತದೆ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು. ಬಂಧುಗಳ ನಡುವಿನ ವ್ಯವಹಾರ ನಷ್ಟಕ್ಕೆ ಕಾರಣವಾಗುತ್ತದೆ. ಸಂಗಾತಿಯಿಂದ ಆರ್ಥಿಕ ಸಹಾಯವನ್ನು ನಿರೀಕ್ಷೆ ಮಾಡಬಹುದು.

ಧನುಸ್ಸು — **ಮೂಲಾ, ಪೂರ್ವಾಷಾಢ, ಉತ್ತರಾಷಾಢ 1**
ನಿಮ್ಮ ಗೌರವವನ್ನು ಕಾಪಾಡಿಕೊಳ್ಳುವುದು ನಿಮ್ಮ ಕರ್ತವ್ಯವಾಗಿರುತ್ತದೆ. ಆದಾಯ ಕಡಿಮೆ ಇರುತ್ತದೆ. ಹೈನುಗಾರಿಕೆ ಸಂಬಂಧಿ ಉದ್ಯಮ ನಡೆಸುತ್ತಿರುವವರಿಗೆ ಹೆಚ್ಚಿನ ಅನುಕೂಲವಿರುತ್ತದೆ. ಬಡ್ಡಿ ವ್ಯವಹಾರಗಳು ಖಂಡಿತ ಬೇಡ. ಕೃಷಿಯಿಂದ ಅಭಿವೃದ್ಧಿ ಇರುತ್ತದೆ. ಹಿರಿಯರ ಕೃಷಿಭೂಮಿ ದೊರೆಯುವ ಸಾಧ್ಯತೆ ಇದೆ. ಸರ್ಕಾರಿ ಸಂಸ್ಥೆಗಳ ಜೊತೆಗೂಡಿ ಮಾಡಿದ ವ್ಯವಹಾರಗಳಲ್ಲಿ ಆದಾಯವು ಇರುವುದಿಲ್ಲ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ನಿಮ್ಮ ಪರಿಶ್ರಮದಿಂದ ಹಣ ಸಂಪಾದನೆ ಮಾಡುವಿರಿ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿಮಗೆ ಅನುಕೂಲವಿರುತ್ತದೆ. ಭೂಮಿ ಮೇಲೆ ಹೂಡಿದ್ದ ಹಣ ಈಗ ದ್ವಿಗುಣಗೊಳ್ಳುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಅಂಕ ಪಡೆಯುವ ಯೋಗವಿದೆ. ಕೆಲವರಿಗೆ ಶೀತದಿಂದ ಸಮಸ್ಯೆಗಳಾಗಬಹುದು. ವೃತ್ತಿಯಲ್ಲಿ ಹಿರಿಯರಿಂದ ಅನುಕೂಲವಾಗುತ್ತದೆ. ರೇಷ್ಮೆ ಬಟ್ಟೆಗಳನ್ನು ತಯಾರಿಸುವವರಿಗೆ ಲಾಭ ಹೆಚ್ಚುತ್ತದೆ.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಆದಾಯವು ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಭಾಷಣಕಾರರಿಗೆ ಉತ್ತಮ ವೇದಿಕೆಯಲ್ಲಿ ತಮ್ಮ ನಿಲುವನ್ನು ಮಂಡಿಸುವ ಅವಕಾಶ ದೊರೆಯುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಹಣದ ಹರಿವು ಇರುತ್ತದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಸಂಗಾತಿಯಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಸಹಕಾರ ದೊರೆಯುತ್ತದೆ. ಉದ್ಯೋಗದಲ್ಲಿ ಸ್ವಲ್ಪ ಆದಾಯ ಹೆಚ್ಚುವ ಸಾಧ್ಯತೆ ಇದೆ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಬಹಳ ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಎಲ್ಲರೊಂದಿಗೆ ವ್ಯವಹಾರಿಕವಾಗಿ ನಡೆದುಕೊಳ್ಳುವಿರಿ. ಕೃಷಿ ಕೆಲಸಗಾರರಿಗೆ ಹೆಚ್ಚಿನ ಕೆಲಸ ದೊರೆತು ಆದಾಯ ಹೆಚ್ಚುತ್ತದೆ. ಕೆಲಸ ಕಾರ್ಯಗಳಿಗೆ ಹಿರಿಯರ ಬೆಂಬಲ ಗಳಿಸಲು ಪ್ರಯತ್ನ ಪಡುವಿರಿ. ಮಕ್ಕಳಿಂದ ನಿರೀಕ್ಷಿತ ಗೌರವ ಇರುವುದಿಲ್ಲ. ಕಣ್ಣಿನ ತೊಂದರೆ ಇರುವವರು ಹೆಚ್ಚು ಎಚ್ಚರ ವಹಿಸಿ.

ಪದಬಂಧ 2881



ಮೇಲಿನಿಂದ ಕೆಳಕ್ಕೆ
1. ಹರಹರ ಎನ್ನುತ್ತಾ ಕಣ್ಣು ಹರಿ ಬಿಡುವ ಇರುಳು 4
2. ಸತ್ಯವೊಂದೇ ಸತ್ಯ 2
3. ಒಂದು ಲಕ್ಷದ ದಶಮಾಂಶ ಭಾಗ 5
4. ಊರ ಮುಂದೆ ಕನಸು ಕಂಡ ಭಿಕ್ಷುಕ 3
6. ನಯದೊಡನೆ ಸೇರಿದ ಒಳ್ಳೆಯ ನಾಜೂಕು 4
7. ಮಳೆಬಂದಾಗ ನೀರಿನಲ್ಲಿ ಹಾಯಿಬಿಡುವ ಪೇಪರ್ ನೌಕೆ 6
9. ಮೃಗಮಾನವ ಉಗ್ರ ವಿಷ್ಣುರೂಪಿಯೊಡನೆ ಸೇರಿದ ಹಣದೊಡತಿ 6
12. ವಾರದೊಳಗೇ ಬಂದಿರುವ ಕಪಿ 3
15. ಭಗವಂತನಿಗೆ ಸಂಪೂರ್ಣ ಶರಣಾದ ಅನುಯಾಯಿ 5
16. ಅಂದದ ಹೂವಿನೊಳಗಣ ಮಧುವಿನಂತಹ ಕೃಷ್ಣ ಗೆಳೆಯ 4
19. ಗುಹೆಯ ಒಡೆಯನ ಹೆಸರು ಪಡೆದವ 4
20. ಬಡವನ ಸಂಗಾತಿ 3
23. ಕವಿ ಕಂಡಿದ್ದನ್ನು ಕಾಣಲಾರ ಆದರೆ ದಿನ ಇವನಿಂದ ಹುಟ್ಟುತ್ತದೆ 2

ಎಡದಿಂದ ಬಲಕ್ಕೆ
1. ಪರಶಿವನ ಪ್ರೀತಿಯ ಹಿಂದಿ ಮಡದಿ 3
3. ಅಪಹರಿಸುವ ಶಿವ ಬೆಟ್ಟದೊಡೆಯನ ಮಗಳಾದ ಗಿರಿಜೆಯೊಡನೆ ಸೇರಿದ್ದಾನೆ 5
5. ನೆರೆರಾಜ್ಯದ ತೆಲುಗು ಭಾಷಿಗರು ಮಾಡುವ ಉತ್ಸವ 3
6. ಸಾವಿರವನ್ನು ಹೀಗೆ ಹಾಗೆ ಮಾಡಿದಾಗ ಜಗಳ ಉಂಟಾಗಬಹುದು 3
7. ಬಸವಣ್ಣನ ವಚನದಲ್ಲಿ ಕೈಲಾಸಕ್ಕೆ ಸಮನಾದ ಕಾರ್ಯ 3
8. ಮೂರು ಸಮಯದ ಅರಿವಿನ ತಿಳಿವಳಿಕೆ 5
10. ಬಯಕೆಯನ್ನು ಬಿಡುವ ಮನೋಸ್ಥಿತಿ 3
11. ಗ್ರಾಮೀಣ ಮಾತಿನ ವ್ಯವಹಾರ 3
13. ದುಃಖದಲ್ಲಿರುವವರಿಗೆ ಹೇಳುವ ಸಮಾಧಾನದ ಮಾತು 3
14. ಆಯಸ್ಕಾಂತದಿಂದ ಚುಂಬಕ ಗಾಳಿ ಉತ್ತರದಿಂದ ಈ ದಿಕ್ಕಿಗೆ ಬೀಸುತ್ತದೆ 3
15. ಅತ್ಯಂತ ಶ್ರೇಷ್ಠ 3
17. ಅಂದ ಚಂದಕ್ಕಾಗಿ ಮಾಡುವ ಅಲಂಕಾರ 3
18. ಆಲಾಪನೆಯಲ್ಲಿ ಮಂಗಳಕರ ಹಾಡಿನ ಹರಹು 5
20. ಅಚ್ಚ ಕನ್ನಡದ ಲಿಖಿತ 3
21. ಅಧರಂ, ನಯನಂ, ವದನಂ... ಕೃಷ್ಣನ ಸರ್ವಸ್ವವೂ ಜೇನಿನಂತೆ ಹಿತ 3
22. ಸರದಂತೆ ಬರುವ ಹತ್ತುದಿನಗಳ ಹಬ್ಬ 3
24. ಮೋಜಿನ ವಿಚಾರದಲ್ಲಿ ಮನಸಿಟ್ಟ ಭೋಗಿ 5
25. ಬೀಳ್ಕೊಟ್ಟಾಗ ಕೊನೆಯಲ್ಲಿ ಗಳಿಕೆ ಇದೆ 3

ಪದಬಂಧ ಉತ್ತರ -2880

ಮೇಲಿಂದ ಕೆಳಕ್ಕೆ
1. ಗುಳಿಕಕಾಲ 2.ರಾತ್ರಿರಾಣಿ 3.ಭಾವಸಂಗಮ 4.ರಕ್ಷಕ 8.ಪ್ರಾಶನ 10.ದರುಶನ 12.ನಿರುತ್ಸಾಹ 13.ಜಾದವಕುಲ 14.ರಾಜಸ 15.ಮಾನಸಮ್ಮಾನ 16.ಮಸುಕು 17.ವಾಸುದೇವ

ಎಡದಿಂದ ಬಲಕ್ಕೆ
1.ಗುರುದ್ವಾರಾ 3.ಭಾಷಾಂತರ 5.ಕಟಕ 6.ರಾಘವ 7.ಕಾಡುಪ್ರಾಣಿ 9.ಸಂಪಾದಕ 11.ಅನಿಲ 13.ಜಾನಕಿರಾಮ 15.ಮಾನಸ 16.ಮಹದೇವ 17.ವಾಸಸ್ಥಾನ 18.ಕುಣಿಸು 19.ಸಹಿತ 20.ಕುತೂಹಲ 21.ವರದಾನ

ಸಸ್ಯಗಳ ಸಂಗದಿ ಬಿಜಿಎಲ್ ಸ್ವಾಮಿ ಮತ್ತು ಶಿಷ್ಯರು


ಬಿಜಿಎಲ್ ಸ್ವಾಮಿ

ವಿನಾಶದಂಚಿಗೆ ಜಾರಿರುವ ಸಹ್ಯಾದ್ರಿಯ ಹಲವು ಅಮೂಲ್ಯ ಸಸ್ಯಪ್ರಭೇದಗಳನ್ನು ಶಿರಸಿಯ ಬಿಎಲ್‌ಆರ್‌ಎಫ್‌ನ ಸಂಶೋಧನಾ ಕೇಂದ್ರವು ತನ್ನ ಹಸಿರುಮನೆಯಲ್ಲಿ ಬೆಳೆಸುತ್ತಿದೆ...

ಕೇಶವ ಎಚ್. ಕೊರ್ಸೆ

ಜಗದೀಶ್ಚಂದ್ರ ಬೋಸ್, ಬೀರ್ಬಲ್ ಸಹಾನಿ, ಪಂಚಮ್ ಮಹೇಶ್ವರಿ, ಮುಂತಾದ ಶ್ರೇಷ್ಠ ಭಾರತೀಯ ಸಸ್ಯಶಾಸ್ತ್ರಜ್ಞರ ಸಾಲಿಗೆ ಸೇರುವ ಪ್ರತಿಭೆ ಮತ್ತು ಕೊಡುಗೆ ಬಿಜಿಎಲ್ ಸ್ವಾಮಿ ಅವರದ್ದು. ಬೆಂಗಳೂರಿನಲ್ಲಿ ಓದಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪಡೆದು, ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಅನುಭವ ಗಳಿಸಿ, ಮದ್ರಾಸಿನಲ್ಲಿ ದೀರ್ಘಕಾಲ ಅಧ್ಯಾಪಕರಾಗಿದ್ದ ಅವರ ವೃತ್ತಿಜೀವನ ತುಂಬ ಫಲಪ್ರದವಾದದ್ದು. ಆ ಸಾಧನೆಯ ವ್ಯಾಪ್ತಿಯೂ ಅಷ್ಟೇ ದೊಡ್ಡದು. ಜೀವನದುದ್ದಕ್ಕೂ ಅಧ್ಯಾಪನದ ಜೊತೆಗೆ ಸಂಶೋಧನೆಯಲ್ಲೂ ತೊಡಗಿಕೊಂಡು ಜಾಗತಿಕಮಟ್ಟದ ಸಂಶೋಧನಾ ನಿಯತಕಾಲಿಕಗಳಲ್ಲಿ ಪ್ರಬಂಧ ಮಂಡಿಸಿದರು. ಮುನ್ನೂರಕ್ಕೂ ಹೆಚ್ಚಿನ ಅವರ ಸಂಶೋಧನಾ ಲೇಖನಗಳೇ ಇದಕ್ಕೆ ಸಾಕ್ಷಿ.

ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅನನ್ಯ. 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕಾ', 'ಪ್ರಾಧ್ಯಾಪಕನ ಪೀಠದಲ್ಲಿ' ಸೇರಿದಂತೆ 29ಕ್ಕೂ ಮಿಕ್ಕಿ ಮೌಲಿಕ ಕೃತಿಗಳನ್ನು ರಚಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ 'ಹಸಿರುಹೊನ್ನು' ಕೃತಿಯಂತೂ ಸಸ್ಯಶಾಸ್ತ್ರ ಆಸಕ್ತರ ಕೈಪಿಡಿ

ಬಿಎಲ್‌ಆರ್‌ಎಫ್ ಸಂಶೋಧನಾ ಕೇಂದ್ರದಲ್ಲಿ ಅಮೂಲ್ಯ ಸಸ್ಯಪ್ರಭೇದಗಳ ಸಂರಕ್ಷಣೆ

ಎಂಬ ಹೆಗ್ಗಳಿಕೆಯದು. ತಮ್ಮ ಪುಸ್ತಕ ಹಾಗೂ ಲೇಖನಗಳಿಗೆ ತಾವೇ ರೇಖಾಚಿತ್ರ ಹಾಗೂ ತೈಲವರ್ಣ ಚಿತ್ರ ಬಿಡಿಸುತ್ತಿದ್ದರು. ಕನ್ನಡ ಹಾಗೂ ಇಂಗ್ಲಿಷ್ ಹೊರತಾಗಿ ತಮಿಳು, ಮಲಯಾಳ, ಫ್ರೆಂಚ್, ಜರ್ಮನ್, ಸ್ಪಾನಿಶ್ ಭಾಷೆಗಳ ಪರಿಚಯವೂ ಅವರಿಗಿತ್ತು. ಹಸ್ತಪ್ರತಿ ಮತ್ತು ಶಾಸನಗಳನ್ನು ಅಭ್ಯಸಿಸಿ ಅವುಗಳಲ್ಲಿ ಅಡಗಿರುವ ಸಸ್ಯ ಸಂಬಂಧಿ ಮಾಹಿತಿ ಹೊರಗೆಡಹುತ್ತಿದ್ದರು. ವಯೊಲಿನ್ ನುಡಿಸುತ್ತಿದ್ದರು; ಶಾಸ್ತ್ರೀಯ ಸಂಗೀತದ ವಿಮರ್ಶಾ ಲೇಖನಗಳನ್ನೂ ಬರೆಯುತ್ತಿದ್ದರು.

ಸಸ್ಯಶಾಸ್ತ್ರದಲ್ಲಿ ಕೈಗೊಂಡ ಸಂಶೋಧನೆಯ ಹರವೂ ವಿಶಾಲವಾದದ್ದು. ವರ್ಗೀಕರಣ ಶಾಸ್ತ್ರ, ಅಂಗಾಂಗ ರಚನೆ, ಭ್ರೂಣ ಶಾಸ್ತ್ರ, ಸಸ್ಯ ಸಂಕುಲ ವಿಕಾಸ ಇತ್ಯಾದಿ. ಇವುಗಳಲ್ಲಿ ವರ್ಗೀಕರಣ ಶಾಸ್ತ್ರಕ್ಕೆ ನೀಡಿದ ಕೊಡುಗೆ ಮಹತ್ವದ್ದು. ಸಸ್ಯ ಪ್ರಭೇದವೊಂದನ್ನು ಗುರುತಿಸಿ, ಸೂಕ್ತ ಕುಟುಂಬಕ್ಕೆ ವರ್ಗೀಕರಿಸಿ, ಹೊಸ ಪ್ರಭೇದವಾದರೆ ಹೆಸರಿಸುವುದು- ಇವೆಲ್ಲ ಈ ಶಾಸ್ತ್ರದ ಭಾಗ. ಇದರಲ್ಲಿ ಕ್ಷಮತೆ ಸಾಧಿಸಬೇಕಾದರೆ ಸೈದ್ಧಾಂತಿಕ ಜ್ಞಾನ ಹಾಗೂ ಪ್ರಯೋಗಾಲಯ ಕೌಶಲ್ಯಗಳ ಜೊತೆಗೆ, ನಿಸರ್ಗದ ಹೊರಾಂಗಣದಲ್ಲಿ ಕ್ಷೇತ್ರಾಧ್ಯಯನ ನಡೆಸುವ ಕ್ಷಮತೆಯೂ ಬೇಕು. ಕಂಪ್ಯೂಟರ್, ಇಂಟರ್‌ನೆಟ್, ಜಿಪಿಎಸ್, ಡಿಜಿಟಲ್ ಕ್ಯಾಮೆರಾ, ಸ್ಮಾರ್ಟ್‌ಫೋನ್ ಇತ್ಯಾದಿ ಏನೂ ಇಲ್ಲದ ಆ ಕಾಲದಲ್ಲಿ, ವ್ಯಾಪಕ ಕ್ಷೇತ್ರಾಧ್ಯಯನ ನಡೆಸಿ ಪ್ರಯೋಗಾಧಾರಿತ ಸಂಶೋಧನಾ ಕೈಗೊಂಡ ಬಿಜಿಎಲ್ ಸಾಧನೆ ದೊಡ್ಡದು.

ಬಿಜಿಎಲ್ ನಂತರ ಬಂದ ಫಾದರ್ ಜೆ. ಸಲ್ಡಾನ, ಸಿ.ಆರ್.ನಾಗೇಂದ್ರ, ಯೋಗನರಸಿಂಹ, ಬಿ.ಎ. ರಾಜಿ, ಉಡುಪಿಯ ಕೆ.ಗೋಪಾಲಕೃಷ್ಣ ಭಟ್, ಹಲವಾರು ಪ್ರಸಿದ್ಧ ವರ್ಗೀಕರಣ ಶಾಸ್ತ್ರಜ್ಞರಿಗೆ ಪ್ರೇರಣೆಯಾದರು. ಶ್ರದ್ಧೆಯಿಂದ ಸಸ್ಯಶಾಸ್ತ್ರದ ಅಧ್ಯಾಪನ-ಸಂಶೋಧನೆ ನಡೆಸುತ್ತಲೇ ಹೊಸ ಪ್ರಭೇದಗಳನ್ನು ಗುರುತಿಸುತ್ತ, ಜಿಲ್ಲೆ-ಪ್ರದೇಶಗಳ ಸಸ್ಯಯಾದಿ (ಫ್ಲೋರಾ) ರಚಿಸಿ, ವರ್ಗೀಕರಣ ಶಾಸ್ತ್ರವನ್ನು ಜಾಗತಿಕ ಗುಣಮಟ್ಟದೊಂದಿಗೆ ಪೋಷಿಸಿಕೊಂಡು ಬಂದ ಸಸ್ಯಶಾಸ್ತ್ರಜ್ಞರು ಅವರೆಲ್ಲ. ಮೂಲ ವಿಜ್ಞಾನದಲ್ಲಿ ವಿದ್ಯಾರ್ಥಿಗಳ ಆಸಕ್ತಿ ತೀವ್ರವಾಗಿ ಕುಂದುತ್ತಿದೆ ಎನ್ನಲಾಗುವ ಈ ದಿನಗಳಲ್ಲಿ, ಸಸ್ಯ ವರ್ಗೀಕರಣ ಶಾಸ್ತ್ರವೇ ನೇಪಥ್ಯಕ್ಕೆ ಸರಿಯುತ್ತಿರುವಂತೆ ತೋರುತ್ತಿದೆ. ಹವಾಮಾನ ಬದಲಾವಣೆ ಪರಿಣಾಮದಿಂದ ಜೀವ ವೈವಿಧ್ಯದ ನಾಶ ಹೆಚ್ಚುತ್ತಿರುವಾಗ, ಅವನ್ನು ಸಂರಕ್ಷಿಸಲು ಕೈಗೊಳ್ಳಬೇಕಾಗಿರುವ ಬಹುಮುಖಿ ಪ್ರಯತ್ನಗಳಲ್ಲಿ ಈ ಜ್ಞಾನ ಶಿಸ್ತನ್ನು ಉಳಿಸಿಕೊಳ್ಳುವುದೂ ಅಗತ್ಯ.

ಬಿಜಿಎಲ್ ಕನ್ನಡ ಕೃತಿಗಳೆಂದರೆ ಸಸ್ಯ ಸಂಕುಲಗಳ ವೈವಿಧ್ಯಮಯ ಪ್ರಪಂಚದ ಅನಾವರಣವೇ ಸರಿ. 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕಾ' ಪುಸ್ತಕ ಇದಕ್ಕೆ ಒಳ್ಳೆಯ ಉದಾಹರಣೆ. ಬಟಾಟೆ, ಟೊಮೊಟೊಗಳಂಥ ಸಾಮಾನ್ಯ ಗಿಡಗಳೂ ಈ ಮೊದಲು ಖಂಡಾಂತರ ಪ್ರಯಾಣಿಸಿ, ಈ ನೆಲದ ಹೊಲದಲ್ಲರಳಿ, ನಮ್ಮ ಅಡುಗೆ ಮನೆ ಸೇರಿದ ಅದ್ಭುತ ಕಥನವನ್ನು ತೆರೆದಿಡುತ್ತದೆ. ಸಸ್ಯಶಾಸ್ತ್ರೀಯ ವಿವರಗಳೊಂದಿಗೆ ಇತಿಹಾಸ, ಭೂಗೋಳಶಾಸ್ತ್ರ, ಮಾನವಶಾಸ್ತ್ರ, ಪರಿಸರಶಾಸ್ತ್ರವೂ ಅಲ್ಲಿದೆ. 'ಹಸಿರು ಹೊನ್ನು' ಕೃತಿ ಪಶ್ಚಿಮಘಟ್ಟಗಳ ಕಣಿವೆಗಳಲ್ಲಿ ಗಿಡಹುಡುಕಿ ಕ್ಷೇತ್ರಾಧ್ಯಯನಕ್ಕೆ ಸಾಗುವ ರೋಮಾಂಚನ, ಅಪರೂಪದ ಸಸ್ಯಗಳ ಗುಣರೂಪ ವರ್ಣನೆ, ಪುರಾಣ, ಇತಿಹಾಸ ಹಾಗೂ ಜೀವವಿಕಾಸದಲ್ಲಿ ಅವುಗಳಿಗಿರುವ ಸ್ಥಾನವನ್ನು ತೋರುತ್ತವೆ. ಎಳವೆಯಲ್ಲೇ ವಿಜ್ಞಾನದಲ್ಲಿ ಆಸಕ್ತಿ ಮೂಡಿಸಲು ರಚಿಸಬಹುದಾದ ಉತ್ಕೃಷ್ಟ ಪುಸ್ತಕಗಳಿಗೆ ಮಾದರಿ ಇವು.

ಅವರ ಸಂಶೋಧನಾ ಪ್ರಬಂಧಗಳಲ್ಲಂತೂ ದಕ್ಷಿಣ ಭಾರತದ ಹಾಗೂ ಪಶ್ಚಿಮಘಟ್ಟಗಳ ಅಮೂಲ್ಯ ಸಸ್ಯ ಪ್ರಭೇದಗಳ ಜ್ಞಾನಗಂಗೆಯೇ ಹರಿದಿದೆ. ಕರ್ನಾಟಕ ಹಾಗೂ ಕೇರಳದ ಸಹ್ಯಾದ್ರಿಯ ಮಳೆಕಾಡಿನ ಅರಣ್ಯ ಪರಿಸರದಲ್ಲಿ ಮಾತ್ರ ದೊರಕುವ ಅಪರೂಪದ ಆರ್ಕಿಡ್ ಪ್ರಭೇದಗಳು, ವಿಶಿಷ್ಟ ಹುಲ್ಲಿನ ವರ್ಗ, ವಿರಳವಾದ ಬಳ್ಳಿ, ಗಿಡ ಮರದ ಪ್ರಭೇದಗಳು, ಹೂಬಿಡದ ಸೈಕಾಸ್ ಅಂಥ ಪ್ರಭೇದಗಳು- ಎಷ್ಟೆಲ್ಲ ಬಗೆ ಅದರಲ್ಲಿ! ಈ ತೆರನ ವಿಸ್ತೃತ ಅಧ್ಯಯನದ ಆಧಾರದಲ್ಲಿ ಅವರು ಬರೆದ 'Flower to Fruit – Embryology of Flowering Plants' ಎಂಬ ಕೃತಿಯಂತೂ ಉತ್ಕೃಷ್ಟ ಪಠ್ಯಪುಸ್ತಕ.

ಇನ್ನು, ಅವರೇ ಹುಡುಕಿ ಹೆಸರಿಸಿದ ಎರಡು ಹೊಸ ಸಸ್ಯ ಪ್ರಭೇದಗಳ ವಿವರಣೆಯಂತೂ ಆಸಕ್ತಿದಾಯಕ. ಒಂದು, 'Sarcandra irvingbaileyi' ಎಂಬ ನೀರು-ಆಹಾರ ಸಾಗಿಸಲು ಕೊಳವೆ ಅಂಗಾಂಶಗಳೇ ಇಲ್ಲದ ವಿಶಿಷ್ಟ ಸಸ್ಯ. ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಸಂಶೋಧಕ-ಮಾರ್ಗದರ್ಶಕರಾಗಿದ್ದ ಪ್ರಸಿದ್ಧ ಸಸ್ಯಶಾಸ್ತ್ರಜ್ಞ ಐರ್ವಿಂಗ್ ವಿಡ್ಮೆರ್ ಬೇಲ್ಲೈ ಅವರ ಸ್ಮರಣೆಗಾಗಿ ಹೆಸರಿಸಿದ ಗಿಡವದು. ಇನ್ನೊಂದು 'Ascarina maheshwari'. ತಾವೇ ಹುಡುಕಿದ ಈ ಪ್ರಭೇದಕ್ಕೆ ಪ್ರಸಿದ್ಧ ಸಸ್ಯಶಾಸ್ರಜ್ಞ ಪಿ.ಮಹೇಶ್ವರಿಯವರ ಹೆಸರನ್ನಿರಿಸಿದ್ದಾರೆ.

ಆನಂತರದ ವರ್ಷಗಳಲ್ಲಿ ಅವರ ಮಾರ್ಗದರ್ಶನ ಅಥವಾ ಪ್ರೇರಣೆ ಪಡೆದ ಸಂಶೋಧಕರು ತಾವು ಹುಡುಕಿದ ಹೊಸ ಪ್ರಭೇದಗಳಿಗೆ ಅವರ ಹೆಸರನ್ನಿರಿಸಿ ಗುರು ಕಾಣಿಕೆ ನೀಡಿದ್ದಾರೆ. ಒಬ್ಬ ಅಧ್ಯಾಪಕ ಹಾಗೂ ವಿಜ್ಞಾನಿಗೆ ಇದಕ್ಕಿಂತ ದೊಡ್ಡ ಗೌರವ ಉಂಟೇ? ಇಂದು ಎಂಟಕ್ಕೂ ಹೆಚ್ಚಿನ ಬಿಜಿಎಲ್ ಹೆಸರಿನ ಸಸ್ಯ ಪ್ರಭೇದಗಳಿವೆ. 'Ascarina swamiyana' ಎಂಬ ಸಣ್ಣ ಗಿಡ, ಮಂಡ್ಯ-ಹಾಸನ ಸೀಮೆಯ ಹುಲ್ಲುಗಾವಲಿನಲ್ಲಿ ಕಾಣುವ ಅಪರೂಪದ 'Cycas swamyi', ಹುಲ್ಲಿನ ವರ್ಗಕ್ಕೆ ಸೇರುವ 'Bulbostylis swamyi, Eleocharis swamyi' ಇತ್ಯಾದಿಗಳೆಲ್ಲ ಇದರಲ್ಲಿ ಸೇರಿವೆ. ಸಸ್ಯಶಾಸ್ತ್ರದಲ್ಲಿ ನಮ್ಮ ನಾಡಿನ ಹೆಸರನ್ನು ಜಾಗತಿಕಮಟ್ಟದಲ್ಲಿ ಚಿರಸ್ಥಾಯಿಯಾಗಿಸಿದ ಸಂಗತಿಗಳಿವು.

ಈ ಸಸ್ಯವೈವಿಧ್ಯವೆಲ್ಲ ಸಂರಕ್ಷಿಸಲೇಬೇಕಾದ್ದು. ಈ ನಿಟ್ಟಿನಲ್ಲಿ ಶಿರಸಿಯ ಯುವ ಸಂಶೋಧಕ ವಿನಯ ಕುಮಾರ್ ಭಂಡಿ ಹಾಗೂ ಸಂಗಡಿಗರು ಕೈಗೊಂಡಿರುವ ಪ್ರಯತ್ನ ಉಲ್ಲೇಖನೀಯ. ಬಿಜಿಎಲ್ ಅಧ್ಯಯನದ ಕಕ್ಷೆಗೆ ದಕ್ಕಿದ ಹಾಗೂ ವಿನಾಶದಂಚಿಗೆ ಜಾರಿರುವ ಸಹ್ಯಾದ್ರಿಯ ಹಲವು ಅಮೂಲ್ಯ ಸಸ್ಯಪ್ರಭೇದಗಳನ್ನು ತಮ್ಮ ಬಿಎಲ್‌ಆರ್‌ಎಫ್ ಸಂಶೋಧನಾ ಕೇಂದ್ರದ ಹಸಿರುಮನೆಯಲ್ಲಿ ಬೆಳೆಸುತ್ತಿದ್ದಾರೆ. ಅಗತ್ಯವಿದ್ದಲ್ಲಿ ಅಂಗಾಂಶ ಕೃಷಿ ತಂತ್ರಜ್ಞಾನದ ಮೂಲಕ ಅವನ್ನು ಪುನರುತ್ಪಾದಿಸಿ, ಕಾಡಿನಲ್ಲಿ ಮತ್ತೆ ನೆಲೆಯೂರಿಸುವ ಕಾರ್ಯಯೋಜನೆಯನ್ನೂ ರೂಪಿಸುತ್ತಿದ್ದಾರೆ. ಯುವ ತಲೆಮಾರಿನ ಈ ಜೀವವೈವಿಧ್ಯ ಸಂರಕ್ಷಣಾ ಕಾರ್ಯ ಅನುಪಮವಾದದ್ದು. ಅದು ಬಿಜಿಎಲ್ ಅವರಿಗೆ ನೀಡಬಹುದಾದ ಶ್ರೇಷ್ಠ ಗೌರವವೂ ಹೌದು.

ಸರ್ಕಾಂಡ್ರ ಪ್ರಭೇದದ ಸ್ವಸ

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಮಹಮ್ಮದ್ ರಫೀಕ್ ಕೊಟ್ಟೂರು ಅವರ ಹಂಪಿ ಎಕ್ಸ್‌ಪ್ರೆಸ್
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ನಿರ್ಮಲ 'ನಿಶೆ' ಅವರ ಸಾತತ್ಯತೆ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಕೂಡ್ಲಿಗಿ ಹುಣಸೆ ಸುಗ್ಗಿ ಸಂಭ್ರಮ

8ನೇ ಪುಟದಿಂದ...

ಈ ಗೊಳ್ಳೆಯು ಅಧಿಕ ಶಾಖವನ್ನು ಉತ್ಪತ್ತಿ ಮಾಡುವುದರಿಂದ ಇಟ್ಟಿಗೆ ಚೆನ್ನಾಗಿ ಸುಡುತ್ತದೆ. ಹಣ್ಣಿನ ನಾರು ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ಬಳಕೆಯಾಗುತ್ತದೆ. ಹಾಗೆಯೇ ಹಣ್ಣಿನಿಂದ ಬೇರ್ಪಡಿಸಿದ ಹುಣಸೆಬೀಜ ಕ್ವಿಂಟಲ್‌ಗೆ ಅಂದಾಜು ₹1,500 ರಿಂದ ₹2,000 ಗಳಿಗೆ ಮಾರಾಟವಾಗುತ್ತದೆ. ಗುತ್ತಿಗೆದಾರನ ಖರ್ಚಿಗೆ ಕೈ ಹಿಡಿಯುತ್ತದೆ. ಈ ಬೀಜವೂ ಗೋಂದಿಗಾಗಿ ಮತ್ತು ಕಾಫಿಯ ಮಿಶ್ರಣಕ್ಕಾಗಿ ಬಳಕೆಯಾಗುತ್ತದೆ.

ಹುಣಸೆ ಚಟ್ನಿ ಇಲ್ಲದೆ ಊಟವಿಲ್ಲ

ಈ ಭಾಗದಲ್ಲಿ ಯಾವುದೇ ರೀತಿಯ ಊಟವಾದರೂ ಸರಿಯೇ, ಉಪ್ಪಿನ ಜೊತೆಯಲ್ಲಿ ಹುಣಸೆ ಚಟ್ನಿಯನ್ನು ಊಟದ ಆರಂಭದಲ್ಲಿಯೇ ಬಡಿಸಲಾಗುತ್ತದೆ. 'ಹಿಂದೆ ಬಡತನವಿದ್ದ ಕಾಲದಲ್ಲಿ ಹುಣಸೆ ಚಟ್ನಿ, ಮುದ್ದೆ ತಿಂದು ಬದುಕಿದ್ವಿ' ಎನ್ನುತ್ತಾರೆ ಗೆದ್ದಲಗಟ್ಟೆ ಬಸವರಾಜಣ್ಣ. ಇನ್ನು ಕೆಲವರು ಹುಣಸೆ ಚಟ್ನಿಯನ್ನು ರುಬ್ಬಿ ಮನೆ ದೇವರ ತೇರಿನ ದಿನ ತಮ್ಮ ಮನೆಗೆ ಬರುವ ಸ್ವಾಮೀಜಿಗಳಿಗೆ ಮೊದಲು ಬಡಿಸಿ, ನಂತರ ತಾವು ಬಳಸುವ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

ತಮ್ಮ ಹೊಲ, ಕಣದಲ್ಲಿನ ಹುಣಸೆಮರಗಳಲ್ಲಿ ಬಿಟ್ಟಿರುವ ಹುಣಸೆಹಣ್ಣನ್ನು ಮತ್ತು ಹದವಾಗಿ ರುಬ್ಬಿದ ಬಾಯಲ್ಲಿ ನೀರೂರುವ ಹುಣಸೆ ಚಟ್ನಿಯನ್ನು ದೂರದೂರುಗಳ ಸಂಬಂಧಿಕರಿಗೆ ನೀಡುವ ಪರಿಪಾಟವೂ ಇದೆ. ಈ ಮೂಲಕ ಹುಣಸೆ ಸಂಬಂಧವನ್ನು ಬೆಸೆಯುವ ರಾಯಭಾರಿಯಾಗಿಯೂ ಕೆಲಸ ಮಾಡುತ್ತದೆ.

'ಕೂಡ್ಲಿಗಿ ತಾಲ್ಲೂಕಿನ ಉಷ್ಣ ಹವಾಗುಣ, ಬಯಲು ಪ್ರದೇಶ ಮತ್ತು ಕಡಿಮೆ ಮಳೆಯೂ ಹುಣಸೆಮರಗಳು ಸಮೃದ್ಧವಾಗಿ ಬೆಳೆಯಲು ಕಾರಣವಾಗಿದೆ. ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯ ಇಲ್ಲದಿದ್ದರೂ, ಇಲ್ಲಿನ ಬರ ಪರಿಸ್ಥಿತಿಯನ್ನು ಎದುರಿಸಿ, ಬದುಕು ಕಟ್ಟಿಕೊಳ್ಳಲು ಈ ನೆಲಕ್ಕೆ ಹೊಂದಿಕೊಳ್ಳುವ ಹುಣಸೆಸಸಿಗಳನ್ನು ಹೊಲದ ಬದುಗಳಲ್ಲಿ, ಕಣಗಳಲ್ಲಿ ಮತ್ತು ಬಯಲಲ್ಲಿ ನೆಟ್ಟು ಅದರಿಂದ ಬರುವ ಆದಾಯವನ್ನು ನೆಚ್ಚಿಕೊಂಡ ಹಲವರ ಜೀವನ ಸಾಗುತ್ತಿದೆ. ಇಂತಹ ಹುಣಸೆಹಣ್ಣಿನ ಮೌಲ್ಯವರ್ಧನೆ ಮಾಡಿ ಹೆಚ್ಚಿನ ಆದಾಯ ಗಳಿಸಬಹುದು' ಎಂದು ಹುಲಿಕೆರೆಯ ಅರಣ್ಯ ಕೃಷಿಕ ಎಚ್. ವಿ.ಸಜ್ಜನ್ ಹೇಳುತ್ತಾರೆ.

ಶಾಸಕ ಡಾ.ಶ್ರೀನಿವಾಸ ಎನ್. ಟಿ ಅವರು ತಾಲ್ಲೂಕಿಗೆ ಹುಣಸೆಹಣ್ಣಿನ ಸಂಸ್ಕರಣ ಘಟಕ ತರುವ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಾಗಿ ಈಗಾಗಲೇ ಗುಡೆಕೋಟೆ ಮತ್ತು ಕೂಡ್ಲಿಗಿ ಹೊರ ವಲಯದಲ್ಲಿ ಜಾಗವನ್ನು ಪರಿಶೀಲಿಸಲಾಗಿದೆ. ನಬಾರ್ಡ್ ನೆರವಿನ ಯೋಜನೆ ಇದಾಗಿದೆ. ಎಲ್ಲವೂ ಸುಸೂತ್ರವಾಗಿ ಸಾಗಿದರೆ ಹುಣಸೆಹಣ್ಣಿನ ಸಂಸ್ಕರಣ ಘಟಕ ಹೊಂದಿದ ಮೊದಲ ತಾಲ್ಲೂಕು ಎಂಬ ಹೆಗ್ಗಳಿಕೆಗೆ ಕೂಡ್ಲಿಗಿ ಪಾತ್ರವಾಗಲಿದೆ.

ಹುಣಸೆಹಣ್ಣಿನ ನಾಲ್ಕು ತಿಂಗಳ ಸುಗ್ಗಿಯಲ್ಲಿ ಗುತ್ತಿಗೆದಾರರಿಂದ ಹಿಡಿದು ರೈತರು, ಮಹಿಳೆಯರು, ಟ್ರ್ಯಾಕ್ಟರ್, ಟೆಂಪೊ ಮಾಲೀಕರು, ಮಧ್ಯವರ್ತಿಗಳು ಸೇರಿದಂತೆ ಸಾವಿರಾರು ಮಂದಿಗೆ ಕೆಲಸ ನೀಡುವ ಮೂಲಕ ಕೋಟ್ಯಂತರ ರೂಪಾಯಿಗಳ ವ್ಯವಹಾರ ನಡೆಯುತ್ತದೆ. ಈ ಸಮಯದಲ್ಲಿ ತಾಲ್ಲೂಕಿನಾದ್ಯಂತ ಎಲ್ಲೇ ಹೋದರೂ ರಾಶಿ ರಾಶಿ ಹುಣಸೆ ಬೋಟುಗಳನ್ನು ಜಜ್ಜುವ, ತೊಳೆ ಬಿಡಿಸುವ, ಪುಟ್ಟಿಗಳಲ್ಲಿ ಹಣ್ಣನ್ನು ಸಿದ್ಧಪಡಿಸುವ, ಮಾರಾಟ ಮಾಡುವ ದೃಶ್ಯ ಕಂಡುಬರುತ್ತದೆ. ಹಾಗೆಯೇ ರೊಕ್ಕ ಎಣಿಸುವ ದೃಶ್ಯವೂ ಕೂಡ.

ಹುಣಸೆ ಹಣ್ಣು ಸಂಸ್ಕರಣೆ ಮಾಡುತ್ತಿರುವ ಮಹಿಳೆಯರು

ಕೋಟಿ ವಹಿವಾಟು

ಹುಣಸೆಮರದ ಮಾಲೀಕರಿಗೆ ಮರಕ್ಕೆ ಅಂದಾಜು ₹3,000 ದಿಂದ ₹5,000 ನೀಡಲಾಗುತ್ತದೆ. ಗುತ್ತಿಗೆದಾರರಿಗೆ ಅಂದಾಜು ಎಲ್ಲಾ ಖರ್ಚು ತೆಗೆದು ಮರಕ್ಕೆ ₹2000 ದಿಂದ ₹3000 ವರೆಗೂ ಉಳಿತಾಯವಾಗಬಲ್ಲದು. ಈ ಬಾರಿ ಇಳುವರಿ ಕಡಿಮೆ ಇದ್ದು, ಮಾರುಕಟ್ಟೆಯಲ್ಲಿ ಹುಣಸೆಹಣ್ಣಿಗೆ ಬೇಡಿಕೆ ಜಾಸ್ತಿ ಇದೆ. ಪ್ರಸ್ತುತ ಹೂ ಹಣ್ಣಿಗೆ ಒಂದು ಕ್ವಿಂಟಲ್ ಗೆ₹ 7,000 ರಿಂದ ₹9,000 ಬೆಲೆ ಇದ್ದು, ಚಪಾತಿ ಹಣ್ಣಿಗೆ ₹18,000 ದಿಂದ 22,000 ವರೆಗೂ ದರವಿದೆ. ತಾಲ್ಲೂಕಿನಲ್ಲಿ ಅಂದಾಜು ₹4 ರಿಂದ 5 ಕೋಟಿಗಳ ವ್ಯವಹಾರವಾಗುತ್ತದೆ.

ಅಂಕಸಮುದ್ರ ಕೆರೆ...

ಪಕ್ಷಿ ವೀಕ್ಷಣೆಯಲ್ಲಿ ತೊಡಗಿರುವ ವಿದೇಶಿಗರು

8ನೇ ಪುಟದಿಂದ...

ಮಾರ್ಷ್ ಹ್ಯಾರಿಯರ್ (ಜಾಗು ಸೆಳೆವ), ಚೆಸ್‌ನೆಟ್ ಟೇಲ್ಡ್ ಸ್ಟಾರ್ಲಿಂಗ್, ಕಾಮನ್ ಸ್ಯಾಂಡ್‌ಪೈಪರ್ (ಗದ್ದೆಗೊರವ), ಬ್ರೌನ್ ಶ್ರೈಕ್ (ಕಂದು ಕಳಿಂಗ), ಕಾಮನ್ ಸ್ಟೋನ್‌ಚಾಟ್ (ಕಲ್ಲು ಚಟಕ), ವುಡ್ ಸ್ಯಾಂಡ್‌ಪೈಪರ್ (ಚುಕ್ಕೆ ಗದ್ದೆಗೊರವ), ಬ್ಲಾಕ್ ಹೆಡೆಡ್ ಬಂಟಿಂಗ್ (ಕಪ್ಪು ತಲೆಯ ದೊಡ್ಡ ಗುಬ್ಬಚ್ಚಿ), ಸ್ಪೋಟೆಡ್ ರೆಡ್‌ಶಾಂಕ್, ಯುರೆಸಿಯನ್ ವಿಜಿಯನ್, ನಾರತನ್ ಪಿನ್‌ಟೆಲ್, ರೂಡಿ ಶೆಲ್‌ಡಕ್, ಗಾರ್ಗೆನಿ (ಬಿಳಿ ಹುಬ್ಬಿನ ಬಾತು), ನಾರ್ಥರ್ನ್ ಶೋವಲರ್ (ಚಲುಕ ಬಾತು), ಕಾಮನ್ ಟೆಲ್-ಹೀಗೆ ಬಾನಾಡಿಗಳ ಪ್ರಭೇದಗಳ ಸಂಖ್ಯೆ ಬೆಳೆಯುತ್ತಲೇ ಹೋಗುತ್ತದೆ.

ಸಂತಾನೋತ್ಪತ್ತಿ ನಡೆಸುವುದಕ್ಕಾಗಿ ಬರುವ 80ಕ್ಕೂ ಹೆಚ್ಚು ಪ್ರಭೇದಗಳಲ್ಲಿ ಮುಖ್ಯವಾಗಿ ಪೇಂಟೆಂಡ್ ಸ್ಟಾರ್ಕ್ (ಬಣ್ಣದ ಕೊಕ್ಕರೆ) ಸ್ಪಾಟ್ ಬಿಲ್ಡ್ ಪೆಲಿಕಾನ್ (ಹೆಜ್ಜಾರ್ಲೆ), ಕೋಂಬ್ ಡಕ್ (ಬಾಚಣಿಗೆ ಬಾತುಕೋಳಿ), ಇಂಡಿಯನ್ ಕಾರ್ಮೊರೆಂಟ್ (ಉದ್ದಕೊಕ್ಕಿನ ಕಾಗೆ), ಡಾರ್ಟರ್ (ಹಾವಕ್ಕಿ), ಲೆಸರ್ ವಿಸಿಲಿಂಗ್ ಡಕ್ (ಚಿಕ್ಕ ಸಿಳ್ಳೆಬಾತು), ಲಿಟಲ್ ಕಾರ್ಮೊರೆಂಟ್ (ಸಣ್ಣ ನೀರು ಕಾಗೆ), ಲಾರ್ಜ್ ಕಾರ್ಮೊರೆಂಟ್ (ದೊಡ್ಡ ನೀರುಕಾಗೆ), ಗ್ಲೋಸಿ ಐಬೀಸ್ (ಮಿಂಚು ಕೆಂಬರಲು), ಕಾಮನ್ ಟೇಲರ್ ಬರ್ಡ್ (ಸಿಂಪಿಗೆ), ರೆಡ್ ವೆಂಟೆಡ್ ಬುಲ್‌ಬುಲ್ (ಕೆಂಪು ಚಿಬ್ಬೊಟ್ಟೆಯ ಪಿಕಳಾರ), ಲಾರ್ಜ್ ಗ್ರೇ ಬಾಬ್‌ಲರ್, ಕಾಪರ್‌ಸ್ಮಿತ್ ಬರ್ಬೆಟ್ ಸೇರಿದಂತೆ ಇಲ್ಲಿನ ಪ್ರದೇಶವನ್ನು ಹೆರಿಗೆ ಮನೆಯನ್ನಾಗಿಸಿಕೊಂಡಿವೆ.

ನೀರುನಾಯಿಗಳು ಚಿನ್ನಾಟ...

ಪಕ್ಷಿಪ್ರಿಯರನ್ನು ಆಕರ್ಷಿಸುವ ಈ ಪ್ರದೇಶದಲ್ಲಿ ನೀರುನಾಯಿಗಳ ತುಂಟಾಟ ನೋಡಲು ಬಲು ಚೆಂದ. ತುಂಗಭದ್ರಾ ಹಿನ್ನೀರು ಮತ್ತು ಕೆರೆಯ ಪ್ರದೇಶದ ನಡುವೆ ಕೇವಲ 500 ಮೀಟರ್ ಅಂತರವಿದೆ. ಅಲ್ಲಿಂದ ಬಂದಿರುವ ನೀರುನಾಯಿಗಳು ಕಳೆದ ವರ್ಷ ಆರು ಇದ್ದವು. ಈ ವರ್ಷವೂ ಇಲ್ಲಿಯೇ ಇವೆ. ಪಕ್ಷಿಧಾಮದಲ್ಲಿ ದೊರೆಯುವ ಕ್ಯಾಟ್ ಫಿಷ್ (ಮುರುಗೋಡ) ಇವುಗಳಿಗೆ ಭರ್ಜರಿ ಭೋಜನ ಒದಗಿಸುತ್ತಿವೆ. ಬಾನಾಡಿಗಳ ಜೀವವೈವಿಧ್ಯಕ್ಕೆ ಕಂಟಕವಾಗಿರುವ ಕ್ಯಾಟ್‌ಫಿಷ್‌ಗಳಿಗೆ, ಅವುಗಳ ಉಪಟಳಕ್ಕೆ ಬ್ರೇಕ್ ಹಾಕಲು ಪ್ರಕೃತಿಯೇ ನೀರುನಾಯಿಗಳನ್ನು ಸ್ವಾಗತಿಸಿದಂತಿದೆ.

ಮೊದಲ ಓದು

ಹೆಣ್ಣು ಹೆತ್ತವರಿಗಾಗಿ, ಹೆರದವರಿಗಾಗಿ

ಹೆಣ್ಣು ಹೆತ್ತವರಿಗೆ, ಹೆಣ್ಣು ಹೆರದವರಿಗೆ ಎಂಬ ಅಡಿ ಸಾಲಿನೊಂದಿಗಿರುವ ಈ ಪುಸ್ತಕ ಮಕ್ಕಳನ್ನ ಬೆಳೆಸುವುದು, ತಾವು ಬೆಳೆಸಿದ್ದು ಎರಡನ್ನೂ ದಾಖಲಿಸುತ್ತಾರೆ. ಮಗು ಹುಟ್ಟಿದೆಯೆಂಬ ಸಂಭ್ರಮದಲ್ಲಿ ಅಪ್ಪನೂ, ಅಮ್ಮನೂ ಹುಟ್ಟುವುದು ಸಹಜ. ಹಾಗೆ ಪಾಲಕರಾಗಿ ಬೆಳೆಯುವುದು, ಆ ಆತಂಕ, ಆನಂದ ಎರಡನ್ನೂ ಬರೆಯುತ್ತ ನಾಗತಿಹಳ್ಳಿ ಹೋಗಿದ್ದಾರೆ.

ತಮ್ಮ ಬೆಳವಣಿಗೆಯೊಂದಿಗೆ ತಮ್ಮ ಮಗಳು 'ಕನಸು' ಬೆಳೆಯುತ್ತ, ಬದುಕು ಸಾಕಾರಗೊಂಡಿದ್ದನ್ನು ಬರೆಯುತ್ತ ಹೋಗಿದ್ದಾರೆ. ಇದು ಅವರ ಅಂತರ್ಯದ ಪಯಣವೂ ಹೌದು. ಅಪ್ಪನಾದ ನಂತರದ ಯಾನವನ್ನೂ ಪ್ರವಾಸ ಕಥನದಂತೆಯೇ ಹೇಳುತ್ತ ಹೋಗುವ ಲೇಖಕರು, ಮೊದಲ ಹೆಣ್ಣುಮಗು, ಎರಡನೆಯ ಮಗುವಿಗೆ ಪುಟ್ತಾಯಿ ಆಗುವ ಸೌಂದರ್ಯವನ್ನೂ ಚಿತ್ರಿಸಿದ್ದಾರೆ.

ಸಿಹಿ ಮತ್ತು ಕನಸು ಎಂಬ ಇಬ್ಬರು ಮಕ್ಕಳ ಬಾಲ್ಯದಲ್ಲಿ ನಾವು ನಮ್ಮ ಮಕ್ಕಳೊಡನೆ ಕಳೆಯಬಹುದಾದ ರಸಮಯ ಕ್ಷಣಗಳನ್ನೂ, ಕಥಾ ಸಮಯವನ್ನೂ, ದೂರು ದುಮ್ಮಾನಗಳನ್ನು ಎದುರಿಸುವುದನ್ನೂ, ಬೆಳೆದ ಮಕ್ಕಳೊಂದಿಗೆ ಬರುವ ಭಿನ್ನಾಭಿಪ್ರಾಯಗಳನ್ನು ಒಪ್ಪುವ ಬಗೆ ಎಲ್ಲವೂ ಹೆಣ್ಣು ಹೆತ್ತವರಿಗೆ, ಹೆರದವರಿಗೆ ಮಾತ್ರವಲ್ಲ, ಮಕ್ಕಳಾದವರಿಗೆ, ಮಕ್ಕಳಾಗುವವರಿಗೂ ಸಹಾಯಕ ಎನ್ನುವಂತಿವೆ. ಕನ್ನಡದಲ್ಲಿ 'ಪೇರೇಂಟಿಂಗ್' ಕುರಿತ ಈ ಕೃತಿ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಎಲ್ಲರಿಗೂ ತಮ್ಮ ಬಾಲ್ಯ ಮತ್ತು ತಮ್ಮ ತಾಯ್ತನದ ಸಮಯವನ್ನು ನೆನಪಿಸುತ್ತದೆ. ತಾಯ್ತನವಿಲ್ಲಿ ಮಹಿಳೆಯರಿಗೆ ಮಾತ್ರ ಸಂಬಂಧಿತವಲ್ಲ ಎಂಬುದು ಸ್ಪಷ್ಟವಾಗಿ ನಿರೂಪಿತವಾಗಿದೆ.



ಪು: 128 ₹180

ಪುಟ್ಟಿಗೊಂದು ಪುಟ್ಟಿ
ಲೇ: ನಾಗತಿಹಳ್ಳಿ ಚಂದ್ರಶೇಖರ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ
ಸಂ: 99005 55255

ಸಾಮಾಜಿಕ ಪ್ರಜ್ಞೆಯ ವಿವೇಕ ದೃಷ್ಟಿ

ಅಗ್ರಹಾರ ಕೃಷ್ಣಮೂರ್ತಿ ಅವರು ಬರೆದ ಲೇಖನಗಳು ಮತ್ತು ಸಾಹಿತ್ಯ ಕೃತಿಗಳ ವಿಮರ್ಶೆಗಳನ್ನು 'ಕಾಲ್ದಾರಿ' ಕೃತಿಯಲ್ಲಿ ಸಂಕಲಿಸಿದ್ದಾರೆ. 'ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರತಿಷ್ಠಿತ ಕೇಂದ್ರಗಳೂ' ಈ ಲೇಖನ ಓದುಗನನ್ನೂ ಆತ್ಮವಿಮರ್ಶೆಗೆ ಒಡ್ಡಿಕೊಳ್ಳುವಂತೆ ಮಾಡುತ್ತದೆ.

2015ರಲ್ಲಿ 'ಪ್ರಶಸ್ತಿ ವಾಪಾಸಾತಿ ಆಂದೋಲನ' ಜರುಗಿತ್ತು. ಆ ವರ್ತಮಾನಕ್ಕೂ ಈ ಲೇಖನ ಕೈಗನ್ನಡಿಯಂತೆ ಇದೆ. ಎಂ.ಎಂ.ಕಲಬುರ್ಗಿ ಅವರ ಹತ್ಯೆ ಕೇಂದ್ರ ಸಾಹಿತ್ಯ ಅಕಾಡೆಮಿಗೆ ಪ್ರಾದೇಶಿಕ ವ್ಯವಹಾರದಂತೆ ಗೋಚರಿಸಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ 1975ರಲ್ಲೇ ಆರಂಭವಾಗಿತ್ತು. ಆಗ ಸೆನ್ಸಾರ್‌ಶಿಪ್ ಖಂಡಿಸಿ ಲೇಖಕಿ ನಯನಾತಾರಾ ಸೆಹಗಲ್ ಅವರು ಪತ್ರಿಕೆಯೊಂದಕ್ಕೆ ಬರೆದ ಲೇಖನದ ಸಾರವನ್ನೂ ಇಲ್ಲಿ ನೀಡಿದ್ದಾರೆ. ಸಲ್ಮಾನ್ ರಶ್ದಿ ಅವರ 'ದಿ ಸೆಟಾನಿಕ್ ವರ್ಸಸ್' ಕಾದಂಬರಿಯನ್ನು ಭಾರತ ಸರ್ಕಾರ ನಿಷೇಧಿಸಿತು. ಲೇಖಕರ ವಿರುದ್ಧ ಫತ್ವಾ ಕೂಡ ಹೊರಡಿಸಲಾಗಿತ್ತು. ಆದರೆ 'ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಲೇಖಕರನ್ನು ಕೊಲ್ಲುವ ಆದೇಶಗಳ ವಿರುದ್ಧ ಒಂದು ನಿರ್ಣಯ ಮಂಡಿಸಲು ಆಗ ನಡೆದ ಸರ್ವಸದಸ್ಯರ ಸಭೆಗೆ ಸಾಧ್ಯವಾಗಲೇ ಇಲ್ಲ' ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಸ್ವರೂಪವನ್ನು ಪ್ರಶ್ನಿಸುತ್ತಾರೆ.

ಮೊಗಳ್ಳಿ ಗಣೇಶ್ ಅವರ 'ಬುಗರಿ' ಕಥೆ ಹಿನ್ನೆಲೆಯಲ್ಲಿ ಅವರ ಸಾಹಿತ್ಯ ಅವಲೋಕನವನ್ನು 'ಸಂಕೇತಗಳ ಸುತ್ತ ಬುಗರಿ' ಟಿಪ್ಪಣಿಯಲ್ಲಿ ಮಾಡುತ್ತಾರೆ. 'ಭಾವಕೋಶ ಅರಳುವ ಪರಿ', 'ಭೂಮಿ ಬದುಕಿನ ಸುಗಂಧ', 'ಶಿವಪ್ರಕಾಶ ಕಾವ್ಯ; ಕೆಲವು ಟಿಪ್ಪಣಿಗಳು', 'ಕರೀಗೌಡರ ಕಥನ ಸಂಜೀವನ', 'ಸಾಂಸ್ಕೃತಿಕ ಪಲ್ಲಟ-ಸಿಹಿಮೀನು' ಸೇರಿ 30 ಲೇಖನಗಳನ್ನು ಈ ಕೃತಿ ಒಳಗೊಂಡಿದೆ.

ಪು: 224 ₹230

ಕಾಲ್ದಾರಿ
ಲೇ: ಅಗ್ರಹಾರ ಕೃಷ್ಣಮೂರ್ತಿ
ಪ್ರ: ಪಲ್ಲವ ಪ್ರಕಾಶನ
ಸಂ: 8880087235

ದಲಿತ ಸಂವೇದನೆಯ ಪ್ರಬಂಧಗಳಗುಚ್ಛ

ದಲಿತರ ನೋವು, ಸಂಕಟ, ಬವಣೆ, ತಾರತಮ್ಯ, ಖುಷಿ, ಜೀವನ ಪದ್ಧತಿಯನ್ನು ಶಕ್ತವಾಗಿ ಹಿಡಿದಿಟ್ಟಿರುವ ಲಲಿತ ಪ್ರಬಂಧದ ಗುಚ್ಛ ಇದು. ಹಳ್ಳಿಯ ಸೊಗಡು, ಬದುಕು, ಆಚರಣೆಗಳ ಮೇಲೂ ಇಲ್ಲಿನ ಪ್ರಬಂಧಗಳು ಬೆಳಕು ಚೆಲ್ಲುತ್ತವೆ. ಬರಹದಲ್ಲಿ ಮಿಳಿತಗೊಂಡಿರುವ ದಲಿತ ಸಂವೇದನೆ ಹಾಗೂ ಪರಿಸರ ಪ್ರಜ್ಞೆ ಪುಸ್ತಕದ ತೂಕವನ್ನು ಹೆಚ್ಚಿಸಿದೆ. ತಮ್ಮ ನೋವುಗಳನ್ನೇ ಲೇಖಕರು ಅಕ್ಷರ ರೂಪಕ್ಕಿಳಿಸಿದ್ದಾರೆ ಎನ್ನುವಷ್ಟು ಇಲ್ಲಿನ ಬರಹಗಳು ಆಪ್ತವಾಗಿವೆ.

ಹಾಸ್ಯ, ವ್ಯಂಗ್ಯ, ವಿಷಾದ, ಭಾವುಕತೆ, ಬಂಡಾಯ ಇಲ್ಲಿನ ಪ್ರಬಂಧಗಳಲ್ಲಿ ಪ್ರಮುಖ ಗುಣ. ವಿಷಯದ ಆಯ್ಕೆ, ಅದರ ನಿರೂಪಣೆ, ಅದರಲ್ಲಿ ಅಡಕವಾಗಿರುವ, ನೋವು, ತಳಮಳ, ದುರಂತ ಓದುಗನ ಭಾವಕೋಶಕ್ಕೆ ನಾಟುತ್ತದೆ. ಇಲ್ಲಿರುವ ಬಹುತೇಕ ಪ್ರಬಂಧಗಳು ಹಳ್ಳಿಯ ಹಿಂದಿನ ಜೀವನ ಹಾಗೂ ಈಗಿನ ಬದುಕಿನ ಬಗೆಗಿನ ಮುಖಾಮುಖಿಯೂ ಹೌದು. ಕಾಲಗಳು ಹಲವು ಉರುಳಿದರೂ ಸಮಾಜದಲ್ಲಿ ಇನ್ನೂ ಚಾಲ್ತಿಯಲ್ಲಿರುವ ಅನಿಷ್ಟಗಳ ಬಗೆಗಿನ ಸಾತ್ವಿಕ ಸಿಟ್ಟು, ವಿಷಾದವನ್ನು ಲೇಖಕರು ಮನತಟ್ಟುವ ಹಾಗೆ ವಿವರಿಸಿದ್ದಾರೆ.

'ಇಲಿ ಬೇಟೆ' ಪ್ರಬಂಧದ ಕಥಾನಾಯಕ ಮರಿಯನ ಪಾತ್ರವು ದಲಿತರ ಜೀವನ ಚರಿತ್ರೆಯನ್ನೇ ಕಟ್ಟಿಕೊಟ್ಟಂತಿದೆ. ಇದು ಕೇವಲ ಮರಿಯನ ಕಥೆ ಮಾತ್ರವಲ್ಲ, ದಲಿತರ ವ್ಯಥೆಯೂ ಹೌದು. ಸಮಾಜದಲ್ಲಿ ಮರೆಯಾಗುತ್ತಿರುವ ಮಾನವೀಯ ಸಂವೇದನೆಯನ್ನು ಪ್ರಬಂಧಗಳು ಬಡಿದೆಬ್ಬಿಸುತ್ತವೆ. ಕೆಲವು ಕಡೆ ತುಸು ಹೆಚ್ಚೇ ಎನಿಸುವ ವಿವರಗಳು ತಾಳ್ಮೆ ಪರೀಕ್ಷಿಸಿದರೂ, ಕುತೂಹಲವನ್ನು ಕಾಪಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿವೆ.



ಪು: 120 ₹150

ಒಂದು ತಲೆ ಚವುರದ ಕಥೆ
ಲೇ: ಡಾ. ಶಿವರಾಜ ಬ್ಯಾಡರಹಳ್ಳಿ
ಪ್ರ: ಕಿರಂ ಪ್ರಕಾಶನ
ಸಂ: 70901 80999

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಕರ್ವೊನಲು

ಕರ್ವೊನಲು (ನಾ). ಕಪ್ಪುನದಿ; ಯಮುನಾ ನದಿ; ಕಾಳಿಂದಿ

ತೇಜಸ್ವಿ ರಾಮಚಂದ್ರನು ಚಿತ್ರಕೂಟದ ಚಿತ್ರಶೈಲದ ಕಾಡಿನ ವೈಭವವನ್ನು ತೋರಿಸುತ್ತ ಬರುತ್ತಿರುತ್ತಾನೆ. ಆಗ ಅಲ್ಲಿ ಹರಿಯುತ್ತಿದ್ದ ಮಂದಾಕಿನಿಯನ್ನು ವರ್ಣಿಸುವಾಗ ಕುವೆಂಪು ಅವರು 'ಕರ್ವೊನಲ್' ಎಂಬ ಪದ ಪ್ರಯೋಗಿಸಿದ್ದಾರೆ.

ಮುಂದೆ ಮೆರೆದತ್ತು ಮಂದಾಕಿನಿಯ
ಕರ್ವೊನಲ್,
ಕಣ್ಗಪ್ಪು ನೀರಾಯ್ತೊ, ಬಾನ್ನೀಲಿ
ತೊರೆಯಾಯ್ತೊ,
ಗಿರಿವನ ಶ್ಯಾಮಲತೆ ಸೋರಿ ಕಣಿವೆಯ ಸೇರಿ
ವಾರಿ ರೂಪಿಂದೆ ಪರಿದಪ್ಪುದೆಂಬಂತೆ ವೋಲ್.

ಸದ್ದಿಲಿ

ಸದ್ದಿಲಿ (ಗು). ಶಬ್ದವಿಲ್ಲದ; ಪ್ರಶಾಂತವಾದ
(ನಾ). ಶಬ್ದವಿಲ್ಲದಿರುವುದು; ನಿಶ್ಶಬ್ದವಾದುದು

ಹೊಲದಲ್ಲಿ ಒಬ್ಬಳೇ ಹಳದಿಯ ಪೈರನ್ನು ಕೊಯ್ಯುವ ಬಾಲೆ ತನ್ನ ಮನದ ಹಾಡನ್ನು ಎದೆ ಸೆಳೆಯುವಂತೆ ಹಾಡುತ್ತಿದ್ದಾಳೆ. 'ಸದ್ದಿಲಿ' ಪದದಿಂದ ಕುವೆಂಪು ಅವರು ಸಹೃದಯನಿಗೆ ಆ ಶಬ್ದವಿಲ್ಲದ ಪ್ರಶಾಂತ ಕಣಿವೆಯ ಹಿರಿಮೆ, ಸೊಗಸು, ಹೆಮ್ಮೆ (ಪೆಂಪು) ಹೆಚ್ಚುವಂತೆ ಆ ಗಾನದ ಇಂಪು ಹರಿಯುತ್ತಿದೆ ಆಲಿಸು! ಎಂದು ಆಹ್ವಾನಿಸಿದ್ದಾರೆ.

'ಆಲಿಸು! ಸದ್ದಿಲಿ ಕಣಿವೆಯ ಪೆಂಪು
ಹೆಚ್ಚಲು ಹರಿವುದು ಗಾನದ ಇಂಪು.
(ಹೊಲದ ಹುಡುಗಿ – ಕೊಳಲು)

ವಾಲಿಯ ಕುಮಾರ ಅಂಗದನು ಸಭೆ ಕರೆದು, ಸೀತಾನ್ವೇಷಣೆಗೆ ಹೋಗಿದ್ದ ದಳಗಳ ನಾಯಕರ ಅನುಭವ ಕೇಳುತ್ತಾನೆ. ಆಗ ಮೈಂದನು ತಮ್ಮ ತಂಡ ಮರುಳುಗಾಡಿನಲ್ಲಿ ಅಲೆದು ಬಾಯಾರಿ ಬಳಲಿದ್ದನ್ನು 'ಭೂಮಿಯ ಹಸುರಿನ ಐಶ್ವರ್ಯವನ್ನು ಹಿಂದಿಕ್ಕಿ, ಮುಂದು ಮುಂದಕ್ಕೆ ಸಾಗಲು ಕಿವಿಗೆ ಮಸಣದ ಮೌನವು ಏಕನಾದವಾಗಿ ಮೀಟಿತು' ಎಂದು ಹೇಳುತ್ತಾನೆ. ಆ ಮೌನವನ್ನು ಚಿತ್ರಿಸುವಾಗ ಕುವೆಂಪು ಅವರು 'ಸದ್ದಿಲಿತನ' ಪದವನ್ನು ಹೀಗೆ ಪ್ರಯೋಗಿಸಿದ್ದಾರೆ:

'ಪಿತಿಕ್ಕುತುರ್ವರೆಯ ಪಚ್ಚೆಯೈಶ್ವರ್ಯಮಂ
ಮುಂದು ಮುಂದಕೆ
ಪರಿಯಲೇಕನಾದತೆಯಾಯ್ತು
ಕಿವಿಗೆ ಸದ್ದಿಲಿತನಂ ಮಸಣದಾ'

ಹೆಗ್ಗೆಚ್ಚು

ರಾಣಾಪ್ರತಾಪ ಸಿಂಹನ ರಾಜ್ಯದ ಮೇಲೆ ಅಕಬರನ ಸೈನಿಕರು ದಾಳಿ ಮಾಡುವರು. ಆಗ ಪ್ರತಾಪಸಿಂಹನ ಸೈನಿಕರು ತಮ್ಮ ನಾಡನ್ನು ಉಳಿಸಿಕೊಳ್ಳಲು ಸ್ವಾತಂತ್ರ್ಯದೀಪ್ತಿಗೊಳಗಾಗಿ ಹೋರಾಡುವರು. ಸ್ವಾಭಿಮಾನಿಗಳಾದ ಅವರ ಹೋರಾಟದ ಸಾಹಸವನ್ನು ಚಿತ್ರಿಸುವಾಗ ಕುವೆಂಪು ಅವರು 'ಹೆಗ್ಗೆಚ್ಚು' ಪದ ಪ್ರಯೋಗಿಸಿದ್ದಾರೆ. 'ಹೆಗ್ಗೆಚ್ಚು' ಹಿರಿದಾದ ಉದ್ದೇಶದ ದೊಡ್ಡ ಧೈರ್ಯ ಎಂಬ ಅರ್ಥವನ್ನು ವ್ಯಂಜಿಸುತ್ತದೆ.

ನಾಗಸಾಧುವೊಬ್ಬರು ಕ್ಯಾಮೆರಾ ಫ್ರೇಮ್ ಒಳಗೆ ಸೆರೆಸಿಕ್ಕಿದ್ದು ಹೀಗೆ..

ಕಣ್ಣುಹಾಯಿಸಿದಷ್ಟು ದೂರಕ್ಕೆ ಭಕ್ತಸಾಗರವೇ ಅಲ್ಲಿತ್ತು...

ವಿರಾಟ ಕುಂಭಮೇಳಕ್ಕೆ ಸಾಕ್ಷಿಯಾಗಲು ಕೋಟ್ಯಂತರ ಜನರು ಪ್ರಯಾಗರಾಜ್ ತಲುಪಿದ್ದರು. ಅವರವರ ಭಕುತಿಗೆ, ಆಸೆಗೆ, ಕನಸಿಗೆ ತಕ್ಕಂತೆ ಮೇಳದಲ್ಲಿ ಲೀನವಾಗಿದ್ದರು. ಪ್ರಜಾವಾಣಿ ಹಿರಿಯ ಫೋಟೊ ಜರ್ನಲಿಸ್ಟ್ ತಾಜುದ್ದೀನ್ ಆಜಾದ್ ತಮ್ಮ ಕ್ಯಾಮೆರಾವನ್ನು ಹೆಗಲಿಗೇರಿಸಿಕೊಂಡು ಮಹಾಮೇಳವನ್ನು ಇಲ್ಲಿ ದಾಖಲಿಸಿದ್ದಾರೆ.

ಕ್ಯಾಮೆರಾ ಕಣ್ಣಲ್ಲಿ ಕುಂಭಮೇಳ...

ಪ್ರಯಾಗರಾಜ್‌ನಲ್ಲಿ ನಡೆದ ಮಹಾ ಕುಂಭಮೇಳದ ಸಂಭ್ರಮಕ್ಕೆ ಸಾಕ್ಷಿಯಾಗಬೇಕು, ಅಲ್ಲಿನ ದೃಶ್ಯ ವೈಭವವನ್ನು ಕ್ಯಾಮೆರಾ ಫ್ರೇಮ್‌ನಲ್ಲಿ ಸೆರೆಹಿಡಿಯಬೇಕೆಂಬ ಆಸೆ ಮನದಲ್ಲಿ ಮೂಡಿತ್ತು. ಕಲಬುರಗಿಯಿಂದ ಅತ್ತ ಹೊರಟೆ. ಮೂರು ದಿನ ಹೇಗೋ ಪ್ರಯಾಣ ಮಾಡಿ ಅಲ್ಲಿಗೆ ತಲುಪಿದಾಗ ತಡರಾತ್ರಿಯಾಗಿತ್ತು. ಆಗ ಮೊದಲು ಕಣ್ಣಿಗೆ ಬಿದ್ದಿದ್ದೇ ಟ್ರಾಫಿಕ್. ಅಲ್ಲಿ ಜನದಟ್ಟಣೆ ಎಷ್ಟಿತ್ತೆಂದರೆ, ಕಣ್ಣು ಹಾಯಿಸಿದಷ್ಟು ದೂರದವರೆಗೂ ಜನವೋ ಜನ, ವಾಹನವೋ ವಾಹನ.

ಅಂದು ಮಾಘಸ್ನಾನವಿತ್ತು. ಬೋಟಿಂಗ್‌ನಲ್ಲೇ ತ್ರಿವೇಣಿ ಸಂಗಮಕ್ಕೆ ಹೋದೆ. ಅಲ್ಲಿ ಬಸ್‌ಗಳು ನಿಲ್ದಾಣದಲ್ಲಿ ಸಾಲುಗಟ್ಟಿ ನಿಂತಂತೆ, ದೋಣಿಗಳು ಲಂಗರು ಹಾಕಿ ನಿಂತಿದ್ದು ಗಮನ ಸೆಳೆಯಿತು. ಗುಜರಾತಿನ ಒಂದು ಕುಟುಂಬ ತಾವಷ್ಟೇ ಅಲ್ಲ; ತಮ್ಮ ಮನೆಯಲ್ಲಿ ಸಾಕಿದ ನಾಯಿಗಳನ್ನೂ ಕರೆತಂದು ಪುಣ್ಯಸ್ನಾನ ಮಾಡಿಸಿತು!

ಮೈಕೊರೆಯುವ ಚಳಿಯಿಂದ ಪಾರಾಗಲು ಜನರು ಬೆಂಕಿ ಸುತ್ತ ಕುಳಿತು ಮೈ ಬೆಚ್ಚಗಾಗಿಸಿಕೊಳ್ಳುತ್ತಿದ್ದರು. ಬಿಸಿ ಬಿಸಿ ಚಹಾ ಕುಡಿಯಲು ನೂಕುನುಗ್ಗಲೇ ಉಂಟಾಗಿತ್ತು.

ತಣ್ಣನೆಯ ನೀರು, ಚುಮುಚುಮು ಚಳಿ ಮಧ್ಯೆ ಅಲ್ಲಿ ಭಕ್ತಿಯ ಹೊಳೆಯೇ ಹರಿಯುತ್ತಿತ್ತು. ನಾನು ಕರುನಾಡು ಹಾಗೂ ಮಹಾರಾಷ್ಟ್ರದಲ್ಲಿನ ಹಲವು ಜಾತ್ರೆಗಳು, ಉತ್ಸವಗಳಿಗೆ ಸಾಕ್ಷಿಯಾಗಿದ್ದೆ. ಆದರೆ, ಇಷ್ಟೊಂದು ಭಕ್ತಸಾಗರ ನೋಡಿದ್ದು ಇದೇ ಮೊದಲು. ಅಲ್ಲಿದ್ದ ಭಕ್ತರ ಸಂಖ್ಯೆ ಊಹಿಸಲಾಗದಷ್ಟಿತ್ತು. ದೇಶದ ವಿವಿಧ ಸಂಸ್ಕೃತಿಗಳ ಸಂಗಮವೂ ಆಗಿತ್ತು. ಜನರು ತಮ್ಮ ಸಂಸ್ಕೃತಿಗೆ ಅನುಗುಣವಾಗಿ ಪೂಜೆ-ಪುನಸ್ಕಾರ ಮಾಡುತ್ತಿದ್ದರು.

ನದಿ ದಂಡೆಯಲ್ಲಿ ದೇಶದ ವಿವಿಧೆಡೆಯ ಮಠಾಧೀಶರು ಮತ್ತು ಪ್ರಮುಖರು ಅಖಾಡಗಳನ್ನು ನಿರ್ಮಿಸಿದ್ದರು. ಆಯಾ ರಾಜ್ಯಗಳಿಂದ ಬಂದ ಭಕ್ತರು ತಮ್ಮ ಮಠಾಧೀಶರು ನಿರ್ಮಿಸಿದ ಅಖಾಡಗಳಲ್ಲಿ ಬಿಡಾರ ಹೂಡುತ್ತಿದ್ದರು. ಅಲ್ಲಿ ಹಗಲಿರುಳೆನ್ನದೆ ಪ್ರಸಾದ ವಿತರಣೆಯಾಗುತ್ತಲೇ ಇತ್ತು.

ಈ ಮಹಾಮೇಳವು ಸಂಭ್ರಮಕ್ಕೆ ಮಾತ್ರ ಸೀಮಿತವಾಗದೆ, ಹಲವರಿಗೆ 'ಅನ್ನ'ದ ದಾರಿ ಮಾಡಿಕೊಟ್ಟಿತ್ತು. ಹಣತೆ, ಎಣ್ಣೆ, ಕುಂಕುಮ-ಭಂಡಾರ, ರುದ್ರಾಕ್ಷಿಗಳ ಮಾರಾಟದ ಭರಾಟೆ ಜೋರಾಗಿತ್ತು. ಇಲ್ಲಿ ಒಂದಲ್ಲ; ಎರಡಲ್ಲ; ಹತ್ತಾರು ಬಗೆಯ ರುದ್ರಾಕ್ಷಿಗಳು ಕಾಣಸಿಕ್ಕವು.

ಇನ್ನು ಕುಂಭಮೇಳದಲ್ಲಿ ಹೆಚ್ಚಾಗಿ ಆಕರ್ಷಿಸಿದ್ದು ನಾಗಸಾಧುಗಳು. ಅವರ ಉಡುಗೆ-ತೊಡುಗೆ, ಸಾಹಸ ಸೆಳೆದವು. ಫಕೀರರ ಮಾದರಿಯಲ್ಲಿ ಅಲ್ಲಿನ ನಾಗಾಸಾಧುಗಳೂ ನವಿಲು ಗರಿಗಳನ್ನು ಹಿಡಿದು ಭಕ್ತರನ್ನು ಆಶೀರ್ವದಿಸುತ್ತಿದ್ದರು. ಭಕ್ತರಿಂದ ಕಾಣಿಕೆ ಸ್ವೀಕರಿಸುವುದಷ್ಟೇ ಅಲ್ಲ; ತಮ್ಮ ಬಳಿ ಇದ್ದ ಹಣ, ಚಹಾ-ತಿಂಡಿಯನ್ನೂ ಕೊಡುತ್ತಿದ್ದರು. ದೇವರ ನಾಮಸ್ಮರಣೆಯಲ್ಲಿ ಅಸಂಖ್ಯಾತ ಭಕ್ತಗಣ ಮುಳುಗಿತ್ತು.

ತ್ರಿವೇಣಿ ಸಂಗಮದಲ್ಲಿ ಜನಸಾಗರದಂತೆ ಪಕ್ಷಿಗಳ ಸಾಗರವೂ ಕಂಡುಬಂತು. ನದಿಗೆ ಪವಿತ್ರಸ್ನಾನಕ್ಕೆ ಬಂದ ಭಕ್ತರು ವಿವಿಧ ಆಹಾರ ಖಾದ್ಯಗಳನ್ನು ಪಕ್ಷಿ ಸಂಕುಲಕ್ಕೆ ಉಣಿಸುತ್ತಿದ್ದರು.

ಅಪಾರ ಸಂಖ್ಯೆಯಲ್ಲಿ ಜನರು ಸೇರಿದ್ದ ಸ್ಥಳದಲ್ಲಿ ಅವರೆಲ್ಲರನ್ನೂ ಒಂದೇ ಫ್ರೇಮ್‌ನಲ್ಲಿ ಸೆರೆಹಿಡಿಯುವ ಸವಾಲು ನನ್ನ ಮುಂದಿತ್ತು. ಒಂದೆಡೆ ನಿಂತು ಫೋಟೊ ತೆಗೆಯಲೂ ಕಷ್ಟವಾಗುತ್ತಿತ್ತು. ತಳ್ಳಾಟ-ನೂಕಾಟ ಮುಂದುವರಿದೇ ಇತ್ತು. ಇವೆಲ್ಲದರ ಮಧ್ಯೆಯೇ ರಾಶಿಗಟ್ಟಲೆ ಚಿತ್ರಗಳನ್ನು ಸೆರೆಹಿಡಿದು, ಊರಿನತ್ತ ಮುಖಮಾಡಿದೆ. ❖

ಭಕ್ತಿಯಲ್ಲಿ ಮಿಂದವರು

ಭಕ್ತಸಾಗರದಂತೆ ಪ್ರಯಾಗರಾಜ್‌ನಲ್ಲಿ ಪಕ್ಷಿಗಳ ಸಾಗರ...

ಸಂಗಮದಲ್ಲಿ ದೋಣಿಗಳಲ್ಲಿ ಪಯಣ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಅದಲು ಬದಲು!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ವ್ಯಕ್ತಿಯೊಬ್ಬರು ಪಾರ್ಕ್‌ನಲ್ಲಿ ತಮ್ಮ ಸಾಕಿದ ನಾಯಿಯೊಂದಿಗೆ ವಾಕಿಂಗ್ ಮಾಡುತ್ತಿದ್ದರು. ಅದೇ ವೇಳೆ ಎದುರಿನಿಂದ ಮಹಿಳೆಯೊಬ್ಬರು ತಮ್ಮ ಸಾಕಿದ ನಾಯಿಯೊಂದಿಗೆ ಬರುತ್ತಿದ್ದರು. ನಾಯಿಗಳೆರಡು ಪರಸ್ಪರ ನೋಡಿ ಬೊಗಳಲಾರಂಭಿಸಿದವು. ಮರುಕ್ಷಣದಲ್ಲೇ ಒಂದರ ಮೇಲೆ ಇನ್ನೊಂದು ಹಾರಿ ಜಗಳವಾಡಿದವು. ಆ ಜಗಳದಲ್ಲಿ ಅವುಗಳಿಗೆ ಕಟ್ಟಿದ್ದ ಬೆಲ್ಟ್‌ಗಳೂ ಅದಲು ಬದಲಾದವು. ಆ ವ್ಯಕ್ತಿ ಮತ್ತು ಮಹಿಳೆ ತಮ್ಮ ನಾಯಿಗಳಿಗೆ ಕಟ್ಟಿದ್ದ ಬೆಲ್ಟ್ ಅನ್ನು ಹಿಡಿದೆಳೆದು ತಮ್ಮ ಪಾಡಿಗೆ ವಾಕಿಂಗ್ ಮುಂದುವರಿಸಿದರು. ನಾಯಿಗಳು ಪರಸ್ಪರ ಬದಲಾಗಿರುವುದು ಅವರ ಅರಿವಿಗೆ ಬರಲೇ ಇಲ್ಲ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ನಿಸದಹರ್ಷ ಎಸ್.
ಬೆಂಗಳೂರು

ಅಕ್ಷರ ಎಂ.ಎಸ್.
ಮೈಸೂರು

ಸಾಹಿತ್ಯ
ವಿಜಯನಗರ

ಹರ್ಷವರ್ಧನ್ ಕೆ.ಎಂ.
ದಾವಣಗೆರೆ

ನಿರಂಜನ ಪಾಟೀಲ
ಗದಗ

ಮೋಹಿತ್ ಎಂ.ವಿ.
ತುಮಕೂರು

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ಹಸು	+	ಸರಿ	+	ಕ	=	
2	ವೇದ	+	ಗಣಿ	+	ರಾ	=	
3	ಜನ	+	ಮೀನು	+	ಮ್ಮ	=	
4	ಹದ	+	ನಯ	+	ವ	=	
5	ಹವಾ	+	ದಿನ	+	ನಂ	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ ವಾಕ್ಯಗಳಲ್ಲಿ ಹೊಲದಲ್ಲಿ ಬೆಳೆಯುವ ಕೆಲವು ಬೆಳೆಗಳ ಹೆಸರುಗಳನ್ನು ತುಂಬಿ ಓದಿದರೆ ಅವು ಅರ್ಥಪೂರ್ಣವಾಗುತ್ತದೆ. ಸರಿಯಾದ ಪದ ತುಂಬಿರಿ.

1	ಜೋ		ಕೂಗು
2	ಅವರು ನಮಗೆ		ರದ ಸಂಬಂಧಿ
3	ಆತನ		ನಾಡಿನಲ್ಲೆಲ್ಲ ತುಂಬಾ ಪ್ರಸಿದ್ಧ
4			ಕ್ಕ ತಂದು ಸಾಲ ತೀರಿಸಿದೆ
5			ದ್ದ ಮಾತನಾಡಬೇಡ
6	ಅ		ಕ್ಕಾರ ಕೂಗುತ್ತಾ ಜನ ಇತ್ತ ಬರುತ್ತಿದ್ದಾರೆ
7	ಎಲ್ಲರೂ		ನಿಂದ ಬನ್ನಿರಿ
8	ಆತನದು		ಲ್ಲದ ಮಾತು
9			ಲ್ಲಾ ಜಾತ್ರೆಗೆ ಬಂದವರೆ
10	ಇವರಿಗೆ		ಷ್ಟು ಕಾಳಜಿ ಇಲ್ಲ

ಹೊಂದಿಸು ಆನಂದಿಸು

ಇಲ್ಲಿ ಕೊಟ್ಟಿರುವ ಹರಳುಗಳಲ್ಲಿ ಎಡದಿಂದ ಬಲಕ್ಕೆ ಪ್ರತಿ ಸಾಲಿನಲ್ಲಿ 4 ಉಳಿಯುವಂತೆ ಹಾಗೂ ಮೇಲಿನಿಂದ ಕೆಳಕ್ಕೆ ಪ್ರತಿ ಸಾಲಿನಲ್ಲಿ 4 ಹರಳುಗಳು ಉಳಿಯುವಂತೆ ಕೆಲವು ಹರಳುಗಳನ್ನು ಹೊರಗೆ ತೆಗೆಯಿರಿ.



ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು

ಇಮೇಲ್ ವಿಳಾಸ: majakoora@prajavani.co.in

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಗಣಿತದಲ್ಲಿ ಗರ್ದಿಗಮ್ಮತ್ತು

CHECK-ಚೌಕ

ಇಲ್ಲಿ ಮೇಲ್ನೋಟಕ್ಕೆ 9 ಚೌಕಗಳು ಕಂಡರೂ ಯೋಚಿಸಿದಾಗ 14 ಚೌಕಗಳು ಕಾಣಸಿಗುತ್ತವೆ. 'ಚೆಕ್' ಮಾಡಿ ನೋಡಿ...

ಸಿನಿ ಸ್ವಾರಸ್ಯ

ಇಲ್ಲಿ ಕೊಟ್ಟಿರುವ ಅಕ್ಷರಗಳ ಹಿಂದೆ ಒಂದು ಚಲನಚಿತ್ರದ ಹೆಸರಿನ ಎಂಟು ಅಕ್ಷರಗಳನ್ನು ವಿಭಾಗಿಸಿ ಎರಡೆರಡು ಅಕ್ಷರ ಆಯ್ಕೆ ಮಾಡಿಕೊಂಡು ತುಂಬಿ ಓದಿದರೆ ಅವು ಅರ್ಥಪೂರ್ಣವಾಗುತ್ತವೆ. ನೀವು ಆ ಸಿನಿಮಾ ಹೆಸರು ಕಂಡುಹಿಡಿದು ಅದರ ಎರಡು ಅಕ್ಷರ ತುಂಬಿ.

1			ಗಳ ಕವನ
2			ಖಚಿತ ಸಿಂಹಾಸನ
3			ಕಾ ದೇವಿ
4			ರ ಕೀರ್ತನೆಗಳು

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ವಲಸೆಹಕ್ಕಿ 2.ಹಣದುಬ್ಬರ 3.ಸಮೀಕರಣ 4.ಅರಣ್ಯನಾಶ 5.ಗಣತಿದಾರ

ಜಾಣಪದ ಆಟ: 1.ಬೇಳೆ 2.ಸೇವೆ 3.ಕೋಳಿ 4.ವೇಳೆ 5.ಹೋಳು 6.ನೇರ 7.ಸೇರು 8.ವೀರ 9.ನೀಲಿ 10.ಬೀಗ

ಮೋಜಿನ ಇಂಗ್ಲಿಷ್: 1.BEE 2.DAY 3.FEE 4.KEY 5.SAY 6.TEA 7.YOU 8.WAY 9.ZOO 10.PEA

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹475
12 ಕ್ಕೆ ₹65
ಮೈಸೂರು
100ಕ್ಕೆ ₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹500-695
ದ್ವಿತಳಿ (ಬಿ.ವಿ) ₹391-865

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹188.50
ಆರ್‌ಎಸ್‌ಎಸ್-5 ₹183.50
ಗುಡ್ ಲಾಟ್ ₹177.50
(ಪ್ರತಿ ಕೆ.ಜಿಗೆ)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಎಸ್. ಚಿಕ್ಕಸಾಂಭಯ್ಯ, ಚನ್ನಪಟ್ಟಣ
ಜನನ: 20-04-1932 ನಿಧನ: 20-02-2025
ಇವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 03.03.2025ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ. ಸಾತನೂರಿನ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತ ಕುಟುಂಬ ವರ್ಗ
ಮೊ: 9448880888

ನಿಮಗೆ ಹೆಚ್ಚಿನ ಅವಕಾಶಗಳಿಲ್ಲ– ಟ್ರಂಪ್ • ಯುದ್ಧದ ಬಗ್ಗೆ ದೊಡ್ಡದನಿಯಲ್ಲಿ ಮಾತನಾಡಿದ್ದೀರಾ– ಝೆಲೆನ್‌ಸ್ಕಿ

ಟ್ರಂಪ್–ಝೆಲೆನ್‌ಸ್ಕಿ ನಡುವೆ ವಾಗ್ಯುದ್ಧ

ಫೋರ್ಟ್ ಲಾಡೆರ್ಡೇಲ್, ಅಮೆರಿಕ (ಎ.ಪಿ): ರಷ್ಯಾ ಜೊತೆಗಿನ ಅಮೆರಿಕದ ರಾಜತಾಂತ್ರಿಕ ಬಾಂಧವ್ಯ ಕುರಿತು ಉಕ್ರೇನ್ ಅಧ್ಯಕ್ಷರು ಎತ್ತಿದ್ದ ಪ್ರಶ್ನೆಯೂ ಉಭಯ ರಾಷ್ಟ್ರಗಳ ಅಧ್ಯಕ್ಷರ ನಡುವೆ ಬಿಸಿ ಚರ್ಚೆಗೆ ಕಾರಣವಾಗಿದೆ.

‘ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಯೋತ್ಪಾದಕ’ ಎಂದು ವಾಗ್ದಾಳಿ ನಡೆಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ‘ಜಗತ್ತು ಅವರ ಜತೆ ರಾಜಿಯಾಗಬಾರದು’ ಎಂದು ಪ್ರತಿಪಾದಿಸಿದರು.

ಒಮ್ಮೆ ಝೆಲೆನ್‌ಸ್ಕಿ ಅವರತ್ತ ಬೆರಳು ತೋರಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ‘ನೀವು ರಿಯಾಯಿತಿ ಕೋರುವ ಸ್ಥಿತಿಯಲ್ಲಿ ಈಗ ಇಲ್ಲ. ಅಮೆರಿಕಕ್ಕೆ ನೀವು ಅಗೌರವ ತೋರುತ್ತಿದ್ದೀರಿ’ ಎಂದು ಕಿಡಿಕಾರಿದರು.

ಝೆಲೆನ್‌ಸ್ಕಿ ಮತ್ತು ಅಮೆರಿಕ ಅಧ್ಯಕ್ಷ, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ನಡುವಿನ ಚರ್ಚೆಯ ಚಿತ್ರಣ ಇಲ್ಲಿದೆ.

ಜೆ.ಡಿ ವ್ಯಾನ್ಸ್: ಹಿಂದೆಯೂ ವ್ಲಾಡಿಮಿರ್ ಪುಟಿನ್ ಕುರಿತು ಕಟುವಾಗಿ ಮಾತನಾಡಿದ್ದೇವೆ. ಟ್ರಂಪ್ ಉತ್ತಮ ರಾಜತಾಂತ್ರಿಕತೆ ಮಾಡುತ್ತಿದ್ದಾರೆ.

ಝೆಲೆನ್‌ಸ್ಕಿ: ನಿಮಗೊಂದು ಪ್ರಶ್ನೆ ಕೇಳಲೇ? ಅವರು (ಪುಟಿನ್) ಉಕ್ರೇನ್‌ನ ದೊಡ್ಡ ಪ್ರದೇಶವನ್ನು 2014ರಲ್ಲಿ ಅತಿಕ್ರಮಿಸಿದರು. ಇಷ್ಟು ವರ್ಷ ನಾನು ಬೈಡನ್ ಕುರಿತಷ್ಟೇ ಮಾತನಾಡಲಿಲ್ಲ. ಹಿಂದೆ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ, ಟ್ರಂಪ್, ಬೈಡನ್, ಈಗ ಮತ್ತೆ ಟ್ರಂಪ್ ಬಗ್ಗೆ ಮಾತನಾಡುತ್ತಿದ್ದೇನೆ. ಟ್ರಂಪ್ ಈಗಲಾದರೂ ಅವರಿಗೆ (ಪುಟಿನ್) ತಡೆ ಒಡ್ಡುವರೇ? 2014ರಲ್ಲಿ ಯಾರೂ ಅವರನ್ನು ತಡೆಯಲಿಲ್ಲ.

ಟ್ರಂಪ್: ‘2015?’

ಝೆಲೆನ್‌ಸ್ಕಿ: ‘2014’

ಟ್ರಂಪ್: ‘ಓಹ್, 2014? ಆಗ ನಾನಿರಲಿಲ್ಲ ಬಿಡಿ’

ವ್ಯಾನ್ಸ್: ಅದು ಸರಿಯಾದ ಮಾತು.

ಝೆಲೆನ್‌ಸ್ಕಿ: ನಿಜ. 2014ರಲ್ಲಿ ಮತ್ತು 2022ರವರೆಗೂ ಪರಿಸ್ಥಿತಿ ಹಾಗೇ ಇದೆ. ಜನರು ಸಾಯುತ್ತಿದ್ದಾರೆ. ನಿಮ್ಮಂತೆಯೇ ನಾನೂ ಅಧ್ಯಕ್ಷ. 2019ರಲ್ಲಿ ಒಪ್ಪಂದಕ್ಕೆ ಬಂದಿದ್ದೆವು. ಫ್ರೆಂಚ್ ಅಧ್ಯಕ್ಷ ಎಮ್ಯಾನ್ಯುಯೆಲ್ ಮಾರ್ಕನ್, ಜರ್ಮನ್‌ನ ಚಾನ್ಸೆಲರ್ ಅಂಜೆಲಾ ಮಾರ್ಕೆಲ್ ಜೊತೆಗೂ ಒಪ್ಪಂದ ಆಗಿತ್ತು. ಕದನವಿರಾಮ ಒಪ್ಪಂದ ಆಗಿತ್ತು. ಅತಿಕ್ರಮಣ ಆಗುವುದಿಲ್ಲ ಎಂದೇ ಎಲ್ಲ ಹೇಳಿದ್ದರು. ನಂತರ ಕದನವಿರಾಮ ಉಲ್ಲಂಘಿಸಲಾಯಿತು. ಅವರು ಜನರನ್ನು ಕೊಂದರು. ಕೈದಿಗಳ ವಿನಿಮಯ ಆಗಲಿಲ್ಲ. ಇದು, ಯಾವ ರೀತಿಯ ರಾಜತಾಂತ್ರಿಕತೆ. ವ್ಯಾನ್ಸ್, ನೀವು ಮಾತನಾಡುತ್ತಿರುವ ರಾಜತಾಂತ್ರಿಕತೆಯ ಅರ್ಥ ಏನು?

ವ್ಯಾನ್ಸ್: ಅಧ್ಯಕ್ಷರೆ, ನೀವು ಅಮೆರಿಕದ ಮಾಧ್ಯಮದ ಎದುರು ಅಮೆರಿಕಕ್ಕೆ ಅಗೌರವ ತೋರುತ್ತಿದ್ದೀರಿ. ತಿಕ್ಕಾಟ ಅಂತ್ಯಗೊಳಿಸುವ ಯತ್ನಕ್ಕಾಗಿ ಟ್ರಂಪ್ ಅವರಿಗೆ ನೀವು ಕೃತಜ್ಞತೆ ಸಲ್ಲಿಸಬೇಕು.

ಝೆಲೆನ್‌ಸ್ಕಿ: ನಾವು ಎಂತಹ ಸಮಸ್ಯೆ ಎದುರಿಸುತ್ತಿದ್ದೇವೆ ಎಂದು ಗೊತ್ತಾ? ಉಕ್ರೇನ್‌ಗೆ ಒಮ್ಮೆ ಭೇಟಿ ನೀಡಿ.

ವ್ಯಾನ್ಸ್: ನಾವು ಗಮನಿಸಿದ್ದೇನೆ. ಓದಿದ್ದೇನೆ. ಅಲ್ಲಿ ಏನಾಗುತ್ತಿದೆ ಎಂದು ಗೊತ್ತಿದೆ.

ಝೆಲೆನ್‌ಸ್ಕಿ: ಯುದ್ಧದ ಅವಧಿಯಲ್ಲಿ ಎಲ್ಲರಿಗೂ ಸಮಸ್ಯೆಗಳಿರುತ್ತವೆ. ನಿಮಗೂ ಕೂಡಾ. ಆದರೆ, ನಿಮಗೆ ಹತ್ತಿರದಲ್ಲಿ ಸಮುದ್ರವಿದೆ. ಈಗ ಅರ್ಥವಾಗುವುದಿಲ್ಲ. ಮುಂದೆ ಗೊತ್ತಾಗುತ್ತದೆ.

ಟ್ರಂಪ್: ನಾವು ಏನು ಅನುಭವಿಸುತ್ತೇವೆ ಎಂದು ನೀವು ಹೇಳುವ ಅಗತ್ಯವಿಲ್ಲ

ಝೆಲೆನ್‌ಸ್ಕಿ: ನಾನು ನಿಮಗೆ ಹೇಳುತ್ತಿಲ್ಲ. ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದೇನೆ.

ಟ್ರಂಪ್: ನೀವು ಈಗ ನಮಗೆ ಹೇಳುವ ಸ್ಥಿತಿಯಲ್ಲಿ ಇಲ್ಲ.

ವ್ಯಾನ್ಸ್: ಆದರೆ, ನೀವು ಅದನ್ನೇ ಮಾಡುತ್ತಿದ್ದೀರಿ (ಝೆಲೆನ್‌ಸ್ಕಿ ಉದ್ದೇಶಿಸಿ)

ಟ್ರಂಪ್: ಝೆಲೆನ್‌ಸ್ಕಿ, ಈಗ ನಿಮ್ಮ ಸ್ಥಿತಿ ಸರಿಯಾಗಿಲ್ಲ. ಕಷ್ಟದ ಸ್ಥಿತಿ ತಂದುಕೊಂಡಿದ್ದೀರಿ.

ಝೆಲೆನ್‌ಸ್ಕಿ: ಯುದ್ಧ ಆರಂಭವಾದ ದಿನದಿಂದಲೇ....

ಟ್ರಂಪ್: ನೀವು ಹೇಳುವ ಸ್ಥಿತಿಯಲ್ಲಿ ಇಲ್ಲ. ಆ ಅವಕಾಶಗಳು ಇಲ್ಲ.

ಝೆಲೆನ್‌ಸ್ಕಿ: ಅವಕಾಶದ ಪ್ರಶ್ನೆಯಲ್ಲ. ಗಂಭೀರವಾಗಿ ಹೇಳುತ್ತಿದ್ದೇನೆ.

ಟ್ರಂಪ್: 3ನೇ ವಿಶ್ವಯುದ್ಧಕ್ಕೆ ಆಸ್ಪದವಾಗುವಂತೆ ಲಕ್ಷಾಂತರ ಜನರ ಜೀವನದ ಜೊತೆ ಆಟವಾಡುತ್ತಿದ್ದೀರಿ?

ಝೆಲೆನ್‌ಸ್ಕಿ: ಏನು ಮಾತನಾಡುತ್ತಿದ್ದೀರಿ ನೀವು ಯುದ್ಧದ ಬಗ್ಗೆ ದೊಡ್ಡ ದನಿಯಲ್ಲಿ ಮಾತನಾಡುವಿರಾ? ನೀವು ಮಾತನಾಡಬಹುದು.

ಟ್ರಂಪ್: ನಿಮ್ಮ ರಾಷ್ಟ್ರ ಅಪಾಯದಲ್ಲಿದೆ.

ಝೆಲೆನ್‌ಸ್ಕಿ: ನನಗೆ ಗೊತ್ತಿದೆ, ಗೊತ್ತಿದೆ....

ಟ್ರಂಪ್: ನಿಮ್ಮಲ್ಲಿ ಅಮೆರಿಕದ ಸೇನಾ ಪರಿಕರಗಳು ಇಲ್ಲದಿದ್ದರೆ, ಕೆಲವೇ ವಾರದಲ್ಲಿ ಯುದ್ಧ ಮುಗಿಯುತ್ತಿತ್ತು.

ಝೆಲೆನ್‌ಸ್ಕಿ: ಮೂರು ದಿನಗಳಲ್ಲಿ.... ಪುಟಿನ್ ಹಾಗೇ ಹೇಳಿದ್ದನ್ನು ಕೇಳಿಸಿಕೊಂಡಿದ್ದೇನೆ.

ಟ್ರಂಪ್: ಬಹುಶಃ ಅದಕ್ಕೂ ಕಡಿಮೆ ಅವಧಿ.

ವ್ಯಾನ್ಸ್: ಸುಮ್ಮನೆ ನೀವು ಅಧ್ಯಕ್ಷರಿಗೆ ಕೃತಜ್ಞತೆ ಸಲ್ಲಿಸಿ.

ಝೆಲೆನ್‌ಸ್ಕಿ: ನಾನು ಅನೇಕ ಬಾರಿ ಹೇಳಿದ್ದೇನೆ. ಅಮೆರಿಕದ ಜನರಿಗೆ ಕೃತಜ್ಞತೆಗಳು.

ಟ್ರಂಪ್: ನಿಮಗೆ ಹೆಚ್ಚು ಆಯ್ಕೆಗಳಿಲ್ಲ. ನಿಮ್ಮ ಜನರು ಸಾಯುತ್ತಿದ್ದಾರೆ. ಕದನವಿರಾಮ ಒಪ್ಪಿಕೊಂಡರೆ. ಮತ್ತಷ್ಟು ಗುಂಡುಗಳು ತೂರಿಬಂದು ನಿಮ್ಮವರು ಸಾಯುವುದು ತಪ್ಪಲಿದೆ.

ಝೆಲೆನ್‌ಸ್ಕಿ: ಖಂಡಿತವಾಗಿ ನಾವು ಯುದ್ಧ ನಿಲ್ಲಿಸಲು ಬಯಸುತ್ತೇವೆ. ಅದಕ್ಕೆ ಖಚಿತವಾದ ಭರವಸೆ ಬೇಕು.

ಟ್ರಂಪ್: ಒಪ್ಪಂದ ಆಗಿದ್ದಕ್ಕಿಂತಲೂ ವೇಗವಾಗಿ ಕದನವಿರಾಮದ ಅವಕಾಶ ನಿಮಗೆ ಸಿಗಲಿದೆ.

ಝೆಲೆನ್‌ಸ್ಕಿ: ಕದನವಿರಾಮ ಬಗ್ಗೆ ನಮ್ಮ ಜನರನ್ನು ಕೇಳುತ್ತೇನೆ?

ಟ್ರಂಪ್: ಹಿಂದಿನ ಚರ್ಚೆ ನನ್ನೊಂದಿಗಲ್ಲ. ಬೈಡನ್ ಹೆಸರಿನವರ ಜೊತೆಗೆ ಆಗಿದ್ದು. ಅವರು ಬುದ್ಧಿವಂತರಲ್ಲ.

ಝೆಲೆನ್‌ಸ್ಕಿ: ಆದರೆ, ಅವರು ನಿಮ್ಮ ಅಧ್ಯಕ್ಷರು.

ಟ್ರಂಪ್: ಕ್ಷಮಿಸಿ. ಅದು ಒಬಾಮಾ ಜೊತೆಗೆ ಆಗಿದ್ದ ಚರ್ಚೆ. ಆಗ ಅವರು ನಿಮಗೆ ಭರವಸೆ ನೀಡಿದ್ದರು. ನಾನು ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದೆ. ನೀವು ನನಗೇ ಕೃತಜ್ಞರಾಗಿರಬೇಕು. ಪುಟಿನ್ ಕೂಡಾ ನನಗೆ ಗೌರವ ನೀಡುತ್ತಾರೆ.

ಸರಿ. ನಾವು ಸಾಕಷ್ಟು ನೋಡಿದ್ದೇವೆ. ಈಗ ನಿಮಗೆ ಏನು ಅನಿಸುತ್ತದೆ. ಇದು, ಟಿ.ವಿಯಲ್ಲಿ ದೊಡ್ಡ ಚರ್ಚೆ ಆಗಲಿದೆ. ಅಷ್ಟನ್ನು ನಾನು ಹೇಳಬಯಸುತ್ತೇನೆ...

ಝೆಲೆನ್‌ಸ್ಕಿ ಜೊತೆಗಿನ ಚರ್ಚೆಯಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ –ಎ.ಪಿ ಚಿತ್ರ

ನಮಗೆ ಶಾಂತಿ ಬೇಕಾಗಿದೆ. ಅದಕ್ಕಾಗಿಯೇ ನಾನು ಅಮೆರಿಕಕ್ಕೆ ತೆರಳಿ ಅಧ್ಯಕ್ಷ ಟ್ರಂಪ್ ಅವರನ್ನು ಭೇಟಿಯಾಗಿದೆ. ಖನಿಜ ಸಂಪನ್ಮೂಲ ಕುರಿತ ಒಪ್ಪಂದ ಶಾಂತಿ ಸ್ಥಾಪನೆಗೆ ಮೊದಲ ಹೆಜ್ಜೆಯಷ್ಟೇ.
ವೊಲೊಡಿಮಿರ್ ಝೆಲೆನ್‌ಸ್ಕಿ, ಉಕ್ರೇನ್ ಅಧ್ಯಕ್ಷ

ಉಕ್ರೇನ್‌ಗೆ ಯುರೋಪ್ ರಾಷ್ಟ್ರಗಳ ಬೆಂಬಲ

ವಾಷಿಂಗ್ಟನ್ (ಪಿಟಿಐ): ವಾಕ್ಸಮರ ವಿಸ್ತೃತ ಚರ್ಚೆಗೆ ಗ್ರಾಸವಾದ ಹಿಂದೆಯೇ ಝೆಲೆನ್‌ಸ್ಕಿ ಅವರಿಗೆ ಜಾಲತಾಣದಲ್ಲಿ ಬೆಂಬಲದ ಮಹಾಪೂರವೇ ಹರಿದುಬರುತ್ತಿದೆ. ಬೆಂಬಲ ವ್ಯಕ್ತಪಡಿಸಿದವರಿಗೆ ಅವರು ಧನ್ಯವಾದ ಸಲ್ಲಿಸಿದ್ದಾರೆ.

‘ನಿಮ್ಮ ಘನತೆ ಉಕ್ರೇನ್‌ನ ಜನರ ಧೈರ್ಯವನ್ನು ಬಿಂಬಿಸಲಿದೆ. ಧೈರ್ಯವಾಗಿರಿ. ಹೆದರದೇ ಮುನ್ನುಗಿ. ನೀವೂ ಒಬ್ಬಂಟಿಯಲ್ಲ’ ಎಂದು ಐರೋಪ್ಯ ಒಕ್ಕೂಟದ (ಇಯು) ಅಧ್ಯಕ್ಷೆ ಉರ್ಸುಲಾ ವಾನ್ ಡರ್ ಲೆಯೆನ್ ತಿಳಿಸಿದ್ದಾರೆ.

‘ಉಕ್ರೇನ್ ಸಂತ್ರಸ್ತ ಸ್ಥಾನದಲ್ಲಿದೆ. ನೆರವು ನೀಡಬೇಕಿದೆ. ಯುರೋಪ್, ಕೆನಡಾ, ಜಪಾನ್ ಸೇರಿ ಎಲ್ಲ ರಾಷ್ಟ್ರಗಳು ನೆರವಾಗಬೇಕು’ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮಾಕ್ರನ್ ತಿಳಿಸಿದ್ದಾರೆ.

ಶ್ವೇತಭವನ ಈ ಬಗ್ಗೆ ಹೇಳಿಕೆ ನೀಡಿದ್ದು, ‘ಅಧ್ಯಕ್ಷರು, ಉಪಾಧ್ಯಕ್ಷರ ಪರವಾಗಿ ಹಲವರು ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ’ ಎಂದು ತಿಳಿಸಿದೆ.

ಧನ್ಯವಾದ ಅಮೆರಿಕ – ಝೆಲೆನ್‌ಸ್ಕಿ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷರ ಜೊತೆಗಿನ ಬಿಸಿ ಚರ್ಚೆಯ ಬೆನ್ನಲ್ಲೇ, ರಷ್ಯಾದ ವಿರುದ್ಧ ಹೋರಾಟಕ್ಕೆ ನಿರಂತರ ಬೆಂಬಲ ವ್ಯಕ್ತಪಡಿಸಿದ ಅಮೆರಿಕಕ್ಕೆ ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಧನ್ಯವಾದ ಸಲ್ಲಿಸಿದ್ದಾರೆ.

ಶ್ವೇತಭವನದಿಂದ ನಿರ್ಗಮಿಸಿದ ಕೆಲವೇ ನಿಮಿಷಗಳಲ್ಲಿ ಅವರು ‘ಎಕ್ಸ್’ ಮೂಲಕ ‘ಧನ್ಯವಾದ ಅಮೆರಿಕ, ನಿಮ್ಮ ಬೆಂಬಲಕ್ಕೆ ಧನ್ಯವಾದಗಳು. ಈ ಭೇಟಿಗೆ ಅವಕಾಶ ನೀಡಿದ್ದಕ್ಕೆ ಧನ್ಯವಾದಗಳು’ ಎಂದಿದ್ದಾರೆ.

‘ಇದಕ್ಕಾಗಿ ಅಮೆರಿಕದ ಅಧ್ಯಕ್ಷ, ಸಂಸತ್ತಿಗೂ ಧನ್ಯವಾದಗಳು. ಉಕ್ರೇನ್ ಶಾಂತಿಯನ್ನು ಎದುರು ನೋಡುತ್ತಿದೆ. ನಾವು ಕೂಡಾ ಆ ನಿಟ್ಟಿನಲ್ಲಿಯೇ ಕೆಲಸ ಮಾಡುತ್ತಿದ್ದೇವೆ’ ಎಂದು ತಿಳಿಸಿದ್ದಾರೆ.

ಟ್ರಂಪ್ ತಾಳ್ಮೆ ವಹಿಸಿದ್ದು ಹೇಗೆ? –ರಷ್ಯಾ

ಮಾಸ್ಕೊ (ಪಿಟಿಐ): ‘ಆಶ್ಚರ್ಯ.. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರಿಗೆ ಹೊಡೆಯದೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಗೆ ಸಂಯಮವನ್ನು ಕಾಯ್ದುಕೊಂಡರು..?’ ಎಂದು ರಷ್ಯಾ ಪ್ರಶ್ನಿಸಿದೆ.

ಅಮೆರಿಕದ ಓವಲ್ ಕಚೇರಿಯಲ್ಲಿ ನಡೆದಿದ್ದ ಸಭೆಯಲ್ಲಿ ಟ್ರಂಪ್ ಅವರು ಝೆಲೆನ್‌ಸ್ಕಿ ಅವರ ಮೇಲೆ ಕೂಗಾಡಿದ್ದರು. 3ನೇ ವಿಶ್ವಯುದ್ಧಕ್ಕೆ ಆಸ್ಪದವಾಗುವಂತೆ ಲಕ್ಷಾಂತರ ಜನರ ಜೀವನದ ಜೊತೆ ಆಟವಾಡುತ್ತಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡಿದ್ದರು. ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾರಿಯಾ ಝಖಾರೊವಾ, ‘2022ರಲ್ಲಿ ಉಕ್ರೇನ್ ಏಕಾಂಗಿಯಾಗಿತ್ತು’ ಎಂಬುದು ಝೆಲೆನ್‌ಸ್ಕಿ ಅವರ ದೊಡ್ಡ ಸುಳ್ಳು’ ಎಂದಿದ್ದಾರೆ. ರಷ್ಯಾದ ಮಾಜಿ ಅಧ್ಯಕ್ಷ ಡಿಮಿಟ್ರಿ ಮೆಡ್‌ವೆಡೆವ್, ‘ಝೆಲೆನ್‌ಸ್ಕಿ ಅವರು ಅಹಂಕಾರವುಳ್ಳ ಹಂದಿ. ಓವಲ್ ಕಚೇರಿಯಲ್ಲಿ ಸರಿಯಾದ ಪೆಟ್ಟು ಬಿದ್ದಿದೆ’ ಎಂದಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

31 ದಶಲಕ್ಷ ಟನ್ ಗೋಧಿ ಖರೀದಿ ಗುರಿ: ಕೇಂದ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಏಪ್ರಿಲ್‌ನಿಂದ ಆರಂಭವಾಗಲಿರುವ 2025–26ನೇ ಮಾರುಕಟ್ಟೆ ವರ್ಷದಲ್ಲಿ 31 ದಶಲಕ್ಷ ಟನ್‌ನಷ್ಟು ಗೋಧಿ ಖರೀದಿಗೆ ನಿರ್ಧರಿಸಿದೆ. ಪ್ರತಿ ಕ್ವಿಂಟಲ್ ಗೋಧಿಗೆ ₹2,425 ಬೆಂಬಲ ಬೆಲೆ ನಿಗದಿಪಡಿಸಿದೆ.

2024–25ನೇ ಬೆಳೆ ವರ್ಷದಲ್ಲಿ (ಜುಲೈನಿಂದ ಜೂನ್) 115 ದಶಲಕ್ಷ ಟನ್ ಗೋಧಿ ಉತ್ಪಾದನೆಯಾಗಿದೆ. ಇದರಿಂದ ಕೇಂದ್ರ ಕೃಷಿ ಸಚಿವಾಲಯವು ಸಂಗ್ರಹಣೆಯ ಗುರಿಯನ್ನು ಮಿತಿಗೊಳಿಸಿದೆ ರಾಜ್ಯಗಳ ಆಹಾರ ಕಾರ್ಯದರ್ಶಿಗಳ ಜೊತೆಗೆ ನಡೆದ ಸಭೆಯಲ್ಲಿ ಹಿಂಗಾರು ಅವಧಿಯಲ್ಲಿ ಬೆಳೆದಿರುವ ಗೋಧಿ, ಭತ್ತ ಹಾಗೂ ಒರಟು ಧಾನ್ಯಗಳ ಖರೀದಿಗೆ ಸಂಬಂಧಿಸಿದಂತೆ ಚರ್ಚಿಸಿದ ಬಳಿಕ ಈ ನಿರ್ಧಾರ ಕೈಗೊಂಡಿದೆ ಎಂದು ಹೇಳಲಾಗಿದೆ.

2025–26ನೇ ಮಾರುಕಟ್ಟೆ ವರ್ಷದಲ್ಲಿ 70 ಲಕ್ಷ ಟನ್ ಅಕ್ಕಿ ಮತ್ತು ರಾಗಿ, ಜೋಳ, ಸಜ್ಜೆ ಸೇರಿ ಒಟ್ಟು 16 ಲಕ್ಷ ಟನ್ ಒರಟು ಧಾನ್ಯಗಳನ್ನು ಖರೀದಿಸುವ ಗುರಿ ಹೊಂದಿದೆ.

ನಿಗದಿತ ಗುರಿಗಿಂತ ಅತಿಹೆಚ್ಚು ಪ್ರಮಾಣದಲ್ಲಿ ಗೋಧಿ ಮತ್ತು ಅಕ್ಕಿ ಖರೀದಿಸಬೇಕು. ದೇಶದಲ್ಲಿ ಅಪೌಷ್ಟಿಕತೆ ನಿವಾರಣೆಯ ದೃಷ್ಟಿಯಿಂದ ಸಿರಿಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಬೇಕು. ಇದರಿಂದ ಬೆಳೆ ವೈವಿಧ್ಯಕ್ಕೆ ನೆರವಾಗಲಿದೆ ಎಂದು ರಾಜ್ಯಗಳು, ಕೇಂದ್ರಕ್ಕೆ ಮನವಿ ಮಾಡಿವೆ. ಭಾರತೀಯ ಆಹಾರ ನಿಗಮ ಮತ್ತುಆಯಾ ರಾಜ್ಯದ ಖರೀದಿ ಏಜೆನ್ಸಿಗಳು ರೈತರಿಂದ ಗೋಧಿ ಖರೀದಿಸಲಿದ್ದು, ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳಿಗೆ ಹಂಚಿಕೆ ಮಾಡಲಾಗುತ್ತದೆ.

ಕರ್ನಾಟಕದಲ್ಲಿ ದಾಲ್ಮಿಯಾ ಹೂಡಿಕೆ

ನವದೆಹಲಿ (ಪಿಟಿಐ): ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ವಾರ್ಷಿಕ 60 ಲಕ್ಷ ಟನ್ ಸಿಮೆಂಟ್ ತಯಾರಿಕೆ ಸಂಬಂಧ ಈ ಎರಡು ರಾಜ್ಯಗಳಲ್ಲಿ ₹3,520 ಕೋಟಿ ಬಂಡವಾಳ ಹೂಡಿಕೆ ಮಾಡಲಾಗುವುದು ಎಂದು ಸಿಮೆಂಟ್ ತಯಾರಿಕಾ ಕಂಪನಿಯಾದ ದಾಲ್ಮಿಯಾ ಭಾರತ್ ತಿಳಿಸಿದೆ.

ಕರ್ನಾಟಕದ ಬೆಳಗಾವಿಯಲ್ಲಿ ರುವ ಘಟಕದಲ್ಲಿ ಸಿಮೆಂಟ್ ಉತ್ಪಾದಿಸುವ ಗುರಿ ಹೊಂದಲಾಗಿದೆ. ಮಹಾರಾಷ್ಟ್ರದ ಪುಣೆ ಘಟಕದಲ್ಲೂ ಉತ್ಪಾದನೆಗೆ ಒತ್ತು ನೀಡಲು ನಿರ್ಧರಿಸ ಲಾಗಿದೆ ಎಂದು ಹೇಳಿದೆ.

ಸಾಲ ಹಾಗೂ ಕಂಪನಿಯ ಸ್ವಂತ ಹಣದಿಂದ ಈ ಘಟಕಗಳಲ್ಲಿ ಬಂಡವಾಳ ಹೂಡಿಕೆ ಮಾಡಲಾಗುತ್ತದೆ ಎಂದು ತಿಳಿಸಿದೆ.

ಅಸ್ಸಾಂ ಮತ್ತು ಬಿಹಾರದಲ್ಲಿಯೂ ತನ್ನ ಘಟಕ ವಿಸ್ತರಣೆಗೆ ಕಂಪನಿ ನಿರ್ಧರಿಸಿದೆ.

‘ದಾಲ್ಮಿಯಾ ಭಾರತ್‌ನ ಎರಡನೇ ಹಂತದ ವಿಸ್ತರಣೆಯ ಭಾಗವಾಗಿ ಈ ಹೂಡಿಕೆ ಮಾಡಲಾಗುತ್ತಿದೆ’ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಪುನೀತ್ ದಾಲ್ಮಿಯಾ ಹೇಳಿದ್ದಾರೆ.

ಸೆಬಿ ಅಧ್ಯಕ್ಷರಾಗಿ ತುಹಿನ್ ಕಾಂತಾ ಪದಗ್ರಹಣ

ಮುಂಬೈ (ಪಿಟಿಐ): ರಾಷ್ಟ್ರೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) 11ನೇ ಅಧ್ಯಕ್ಷರಾಗಿ ತುಹಿನ್ ಕಾಂತಾ ಪಾಂಡೆ ಅವರು, ಶನಿವಾರ ಅಧಿಕಾರ ಸ್ವೀಕರಿಸಿದ್ದಾರೆ.

ಅಧ್ಯಕ್ಷೆಯಾಗಿದ್ದ ಮಾಧವಿ ಪುರಿ ಬುಚ್ ಅವರ ಮೂರು ವರ್ಷದ ಅಧಿಕಾರಾವಧಿಯು ಇತ್ತೀಚೆಗೆ ಮುಕ್ತಾಯಗೊಂಡಿತ್ತು. ತೆರವಾಗಿದ್ದ ಈ ಸ್ಥಾನಕ್ಕೆ ತುಹಿನ್ ಅವರನ್ನು ಮೂರು ವರ್ಷದ ಅವಧಿಗೆ ನೇಮಕ ಮಾಡಿ ಕೇಂದ್ರ ಸರ್ಕಾರವು ಆದೇಶ ಹೊರಡಿಸಿತ್ತು.

ಮುಂಬೈನ ಪ್ರಮುಖ ವಾಣಿಜ್ಯ ಕೇಂದ್ರವಾದ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್‌ನಲ್ಲಿರುವ ಸೆಬಿಯ ಮುಖ್ಯ ಕಚೇರಿಗೆ ಬೆಳಿಗ್ಗೆ ಆಗಮಿಸಿದ ಅವರು, ಅಧಿಕಾರ ವಹಿಸಿಕೊಂಡರು.

ಫೆಬ್ರುವರಿಯಲ್ಲಿ ₹1.84 ಲಕ್ಷ ಕೋಟಿ ವರಮಾನ

ಜಿಎಸ್‌ಟಿ ಸಂಗ್ರಹ ಏರಿಕೆ

ನವದೆಹಲಿ (ಪಿಟಿಐ): ಫೆಬ್ರುವರಿ ತಿಂಗಳಿನಲ್ಲಿ ಸರಕು ಮತ್ತು ಸೇವಾ ತೆರಿಗೆ ಮೂಲಕ ₹1.84 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ವರಮಾನ ಸಂಗ್ರಹದಲ್ಲಿ ಶೇ 9.1ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ದೇಶೀಯ ಮಟ್ಟದಲ್ಲಿ ಸರಕು ಮತ್ತು ಸೇವೆಯ ಬಳಕೆ ಸದೃಢವಾಗಿದ್ದು, ವರಮಾನ ಸಂಗ್ರಹ ಹೆಚ್ಚಳಕ್ಕೆ ನೆರವಾಗಿದೆ. ಇದು ಆರ್ಥಿಕ ಬೆಳವಣಿಗೆ ದರ ಏರಿಕೆಯ ಸೂಚಕವಾಗಿದೆ ಎಂದು ಹೇಳಿದೆ.

ದೇಶೀಯ ವಹಿವಾಟು ಮೇಲಿನ ಜಿಎಸ್‌ಟಿ ಸಂಗ್ರಹದಲ್ಲಿ ಶೇ 10.2ರಷ್ಟು ಹೆಚ್ಚಳವಾಗಿದ್ದು, ₹1.42 ಲಕ್ಷ ಕೋಟಿ ಸಂಗ್ರಹವಾಗಿದೆ. ಆಮದು ಮೇಲಿನ ಸಂಗ್ರಹದಲ್ಲಿ ಶೇ 5.4ರಷ್ಟು ಏರಿಕೆಯಾಗಿದ್ದು, ₹41,702 ಕೋಟಿ ಸಂಗ್ರಹವಾಗಿದೆ.

ಫೆಬ್ರುವರಿಯಲ್ಲಿ ಒಟ್ಟು ₹20,889 ಕೋಟಿ ಮರುಪಾವತಿ ಮಾಡಲಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 17.3ರಷ್ಟು ಹೆಚ್ಚಳವಾಗಿದೆ. ಒಟ್ಟಾರೆ ನಿವ್ವಳ ವರಮಾನ ಸಂಗ್ರಹ ₹1.63 ಲಕ್ಷ ಕೋಟಿ ಆಗಿದೆ.

‘ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆಯಾಗಿರುವುದು ಜಾಗತಿಕ ಆರ್ಥಿಕ ಸವಾಲುಗಳನ್ನು ದೇಶದ ಆರ್ಥಿಕತೆಯು ಸಮರ್ಥವಾಗಿ ಎದುರಿಸುತ್ತಿದೆ ಎಂಬುದರ ಸೂಚಕವಾಗಿದೆ’ ಎಂದು ಇವೈ ಇಂಡಿಯಾದ ತೆರಿಗೆ ಪಾಲುದಾರ ಸೌರಭ್ ಅಗರ್ವಾಲ್ ಹೇಳಿದ್ದಾರೆ. ಆಮದು ಮೇಲಿನ ವರಮಾನ ಸಂಗ್ರಹಕ್ಕೆ ಹೋಲಿಸಿದರೆ ದೇಶೀಯ ವರಮಾನ ಸಂಗ್ರಹವು ಸ್ಥಿರವಾಗಿದೆ. ಆತ್ಮನಿರ್ಭರ ಭಾರತ ನಿರ್ಮಾಣ ನೀತಿಯ ಅನುಷ್ಠಾನವು ಇದಕ್ಕೆ ಸಹಕಾರಿಯಾಗಿದೆ ಎಂದು ಹೇಳಿದ್ದಾರೆ.

‘ಈ ಏರಿಕೆಯು ಮಾರ್ಚ್ ತ್ರೈಮಾಸಿಕದಲ್ಲಿ ಆರ್ಥಿಕತೆ ಬೆಳವಣಿಗೆಯು ಸದೃಢವಾಗಲು ಸಹಕಾರಿಯಾಗಲಿದೆ. ಮಹಾಕುಂಭ ಮೇಳವು ಮುಂದಿನ ತಿಂಗಳ ವರಮಾನ ಸಂಗ್ರಹಕ್ಕೆ ಎಷ್ಟರ ಮಟ್ಟಿಗೆ ನೆರವಾಗಿದೆ ಎಂಬುದು ಗೊತ್ತಾಗಲಿದೆ’ ಎಂದು ತೆರಿಗೆ ಸಲಹಾ ಸಂಸ್ಥೆಯಾದ ಕೆಪಿಎಂಜಿ ಪಾಲುದಾರ ಅಭಿಷೇಕ್ ಜೈನ್ ಹೇಳಿದ್ದಾರೆ.



ಕರ್ನಾಟಕದಲ್ಲಿ ಹೆಚ್ಚಳ

‘ಹರಿಯಾಣ, ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಮಧ್ಯಪ್ರದೇಶ, ಕರ್ನಾಟಕದಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿ ಶೇ 10ರಿಂದ ಶೇ 20ರಷ್ಟು ಹೆಚ್ಚಳವಾಗಿದೆ. ಇದಕ್ಕೆ ಹೋಲಿಸಿದರೆ ತೆಲಂಗಾಣ, ಗುಜರಾತ್, ಅಸ್ಸಾಂ, ಆಂಧ್ರಪ್ರದೇಶ, ಒಡಿಶಾದಲ್ಲಿ ಶೇ 1ರಿಂದ ಶೇ 4ರಷ್ಟು ಇಳಿಕೆಯಾಗಿದೆ’ ಎಂದು ಡೆಲಾಯ್ಟ್ ಇಂಡಿಯಾದ ಪಾಲುದಾರ ಎಂ.ಎಸ್. ಮಣಿ ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಫೆಬ್ರುವರಿ ವರೆಗೆ ₹20.13 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ಮರುಪಾವತಿ ಬಳಿಕ ನಿವ್ವಳ ಜಿಎಸ್‌ಟಿ ಸಂಗ್ರಹ ₹17.79 ಲಕ್ಷ ಕೋಟಿ ಆಗಿದೆ.

ಕುಸುಬೆ ಖರೀದಿಗೆ ಅನುಮತಿ

ಪ್ರಜಾವಾಣಿ ವಾರ್ತೆ



ಶಿವಾನಂದ ಪಾಟೀಲ

ಬೆಂಗಳೂರು: ರಾಜ್ಯ ಸರ್ಕಾರದ ಮನವಿ ಮೇರೆಗೆ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಕುಸುಬೆ ಖರೀದಿಸಲು ಒಪ್ಪಿಗೆ ನೀಡಿದೆ. ಪ್ರತಿ ಕ್ವಿಂಟಲ್‌ಗೆ ₹5,940 ದರ ನಿಗದಿಪಡಿಸಿದೆ.

ರಾಜ್ಯದ ಬೀದರ್, ಧಾರವಾಡ, ದಾವಣಗೆರೆ, ಗದಗ, ವಿಜಯಪುರ, ಕಲಬುರಗಿ, ಚಿತ್ರದುರ್ಗ, ಕೊಪ್ಪಳ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಕುಸುಬೆ ಬೆಳೆಯಲಾಗುತ್ತಿದೆ.

‘ಪ್ರಸ್ತುತ ಮಾರುಕಟ್ಟೆಯಲ್ಲಿ ಕುಸುಬೆ ದರ ಕುಸಿದಿದೆ. ಹಾಗಾಗಿ, ಬೆಂಬಲ ಬೆಲೆಯಡಿ ಖರೀದಿಗೆ ಸರ್ಕಾರದಿಂದ ಪ್ರಸ್ತಾವ ಸಲ್ಲಿಸಲಾಗಿತ್ತು. ಇದಕ್ಕೆ ಅನುಮೋದನೆ ನೀಡಿದೆ. ಸಂಬಂಧಪಟ್ಟವರಿಗೆ ಖರೀದಿ ಪ್ರಕ್ರಿಯೆ ಆರಂಭಿಸಲು ನಿರ್ದೇಶನ ಕೂಡ ನೀಡಲಾಗಿದೆ’ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ ತಿಳಿಸಿದ್ದಾರೆ.

ಈಗಾಗಲೇ ಕಟಾವು ಪ್ರಕ್ರಿಯೆ ಆರಂಭವಾಗಿದ್ದು, ಮಾರ್ಚ್ ತಿಂಗಳವರೆಗೆ ನಡೆಯಲಿದೆ. ಏಪ್ರಿಲ್‌ವರೆಗೂ ಮಾರುಕಟ್ಟೆಗೆ ಆವಕವಾಗಲಿದೆ. ರೈತರು ಮುಕ್ತ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡದೆ ಖರೀದಿ ಕೇಂದ್ರಗಳ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಕೋರಿದ್ದಾರೆ.

ಗಂಗಾ ನದಿ ನೀರು ಒಪ್ಪಂದ ಚರ್ಚೆ ನಾಳೆ ಬಾಂಗ್ಲಾದ ನಿಯೋಗ ಭೇಟಿ

ಢಾಕಾ (ಪಿಟಿಐ): ಗಂಗಾ ನದಿ ನೀರು ಒಪ್ಪಂದ ಕುರಿತು ಚರ್ಚಿಸಲು 11 ಸದಸ್ಯರ ಬಾಂಗ್ಲಾದೇಶದ ನಿಯೋಗವು ಸೋಮವಾರ ಭಾರತಕ್ಕೆ ಭೇಟಿ ನೀಡಲಿದೆ. ಒಪ್ಪಂದವು 2026ರಲ್ಲಿ ನವೀಕರಣಗೊಳ್ಳಬೇಕಿದೆ. ಇದು, ಉಭಯ ದೇಶಗಳ ತಾಂತ್ರಿಕ ಪರಿಣತರ ನಡುವಿನ 86ನೇ ಸಭೆಯಾಗಿದೆ. ಗಂಗಾ ನದಿ ನೀರು ಹಂಚಿಕೆ ಕುರಿತಂತೆ 30 ವರ್ಷಗಳ ಹಿಂದೆ ಒಡಂಬಡಿಕೆ ಆಗಿದೆ.

ಬಾಂಗ್ಲಾದೇಶದ ಜಂಟಿ ನದಿ ಆಯೋಗದ (ಜೆಆರ್‌ಸಿ) ಸದಸ್ಯ ಮೊಹಮ್ಮದ್ ಅಬುಲ್ ಹೊಸೈನ್ ನೇತೃತ್ವದ ನಿಯೋಗ ಮಾರ್ಚ್ 3ರಂದು ಕೋಲ್ಕತ್ತಕ್ಕೆ ಬರಲಿದೆ. ಮಾರ್ಚ್5ರ ವರೆಗೂ ನದಿ ಪಾತ್ರವನ್ನು ಪರಿಶೀಲಿಸಲಿದೆ. ಮಾರ್ಚ್ 6–7ಕ್ಕೆ ಕೋಲ್ಕತ್ತದಲ್ಲಿ ಸಭೆ ನಡೆಯಲಿದೆ ಎಂದು ಈ ಕುರಿತ ಪತ್ರದಲ್ಲಿ ವಿವರಿಸಲಾಗಿದೆ.

ಭಾರತದ ಜಲಶಕ್ತಿ ಸಚಿವಾಲಯದ ಪ್ರಕಾರ, ಭಾರತ ಮತ್ತು ಬಾಂಗ್ಲಾದೇಶದ ನಡುವೆ 54 ನದಿಗಳು ಹಂಚಿಕೆ ಆಗಲಿವೆ. ಭಾರತ–ಬಾಂಗ್ಲಾದೇಶ ಜಂಟಿ ನದಿ ಆಯೋಗವನ್ನು 1972ರಲ್ಲಿ ರಚಿಸಲಾಗಿತ್ತು. 1996ರ ಡಿಸೆಂಬರ್ 12ರಂದು ಆಗಿನ ಭಾರತದ ಪ್ರಧಾನಿ ಎಚ್.ಡಿ.ದೇವೇಗೌಡ ಮತ್ತು ಆಗಿನ ಬಾಂಗ್ಲಾದೇಶದ ಪ್ರಧಾನಿಯಾಗಿದ್ದ ಶೇಖ್ ಹಸೀನಾ ಅವರು ಗಂಗಾ ನದಿ ನೀರು ಒಪ್ಪಂದಕ್ಕೆ ಸಹಿ ಹಾಕಿದ್ದರು.

ಜಿಎಸ್‌ಟಿ ಬಾಕಿ: ಹುಂಡೈಗೆ ನೋಟಿಸ್

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಕಂಪನಿಗೆ ₹15 ಕೋಟಿ ಜಿಎಸ್‌ಟಿ ಬಾಕಿಗೆ ಸಂಬಂಧಿಸಿದಂತೆ ನೋಟಿಸ್ ನೀಡಲಾಗಿದೆ.

ತಮಿಳುನಾಡಿನ ಕೇಂದ್ರ ಜಿಎಸ್‌ಟಿ ವಿಭಾಗದ ಹೆಚ್ಚುವರಿ ಆಯುಕ್ತರಿಂದ ನೋಟಿಸ್ ಸ್ವೀಕರಿಸಲಾಗಿದೆ. 2020–21ರಿಂದ 2021–2022ರ ವರೆಗೆ ನಿಗದಿಪಡಿಸಿದ್ದ ತೆರಿಗೆಗಿಂತ ಕಡಿಮೆ ಪಾವತಿಸಿರುವ ಬಗ್ಗೆ ತಿಳಿಸಲಾಗಿದೆ. ಈ ಮೊತ್ತದಲ್ಲಿ ₹1.34 ಕೋಟಿ ದಂಡವೂ ಸೇರಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

2ನೇ ಹಂತದ ಕದನ ವಿರಾಮ ಚರ್ಚೆ

ಕೈರೊ (ಎಪಿ): ‘ಎರಡನೇ ಹಂತದ ಕದನವಿರಾಮ ಕುರಿತಂತೆ ಇಸ್ರೇಲ್ ಹಾಗೂ ಹಮಾಸ್ ನಡುವಿನ ಮಾತುಕತೆಯಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಶನಿವಾರ ಮತ್ತೆ ಮಾತುಕತೆ ನಡೆಯುವ ಕುರಿತು ಖಚಿತತೆಯಿಲ್ಲ’ ಎಂದು ಹಮಾಸ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

15 ತಿಂಗಳ ಅವಧಿಯ ಯುದ್ಧದ ಬಳಿಕ ಜಾರಿಗೊಳಿಸಿದ್ದ ಮೊದಲ ಹಂತದ ಕದನ ವಿರಾಮದ ಅವಧಿ ಮಾ.1ಕ್ಕೆ ಮುಗಿದಿದೆ. ಈಗ ಎರಡನೇ ಹಂತದ ಮಾತುಕತೆಗೆ ಚಾಲನೆ ನೀಡಲು ನಿರ್ಧರಿಸಲಾಗಿದೆ.

ಮಾತುಕತೆ ಬಳಿಕ ಹಮಾಸ್ ಬಂಡುಕೋರರು ಮತ್ತಷ್ಟು ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಲು ನಿರ್ಧರಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೇಕಾಗಿದ್ದಾರೆ
ಹೋಮ್ ನರ್ಸಿಂಗ್
ಸಂಸ್ಥೆಯಲ್ಲಿ ಕೆಲಸ ಮಾಡಲು ಸೇವಾ ಮನೋಭಾವವುಳ್ಳ ಹುಡುಗಿಯರು, ಮಹಿಳೆಯರು ಮತ್ತು ಹುಡುಗರಿಗೆ ವಸತಿಯೊಂದಿಗೆ ಆಹಾರ ಸೌಲಭ್ಯವಿರುತ್ತದೆ. ಸಂಬಳ: 18 ರಿಂದ 25000 ವರೆಗೆ.
ಸಂಪರ್ಕಿಸಿ: 8147731788

Multiple Vacancy

ಬಿಲಿಯರ್ಡ್ಸ್ ರೂಮ್ ಕೆ ಮಾರ್ಕರ್ ಬೇಕಾಗಿದ್ದಾರೆ ದಯವಿಟ್ಟು ಸಂಪರ್ಕಿಸಿ ಮೊಬೈಲ್ ಸಂಖ್ಯೆ 7090650796 ಜೆಪಿ ನಗರ್ 2 ನೇ ಹಂತ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವೈವಾಹಿಕ

Brides Wanted

Telugu

Chennai, Balija Naidu only son with assets in Chennai & Bengaluru 30 years / 5.5 / B.E., M.S. (USA) Runs Own Profitable Business, (Digital Marketing) Family Business Book Publishers & Exporters. Seeks well educated bride.
Contact: 98404 45567
wjsurresh@gmail.com

HARSHA INSTITUTIONS
WE ARE HIRING - WALK-IN INTERVIEWS - 09 MARCH 2025 - SUNDAY AT HARSHA INSTITUTIONS CAMPUS, NELAMANGALA
HARSHA INTERNATIONAL PUBLIC SCHOOL (CBSE) & PRE-UNIVERSITY COLLEGE:
- Pre School (Mother Teacher- UG Degree, MTT/NTT/B.Ed. Preferred)
- Primary Teacher: English, Assistant Teacher & Computer Science (PRT- UG Degree, B.Ed. Preferred)
- Middle School: Science & Computer Science (PRT- PG Degree, B.Ed. Preferred)
- Senior Secondary: Physics, Computer Science & Biology (PGT- PG Degree, B.Ed. Preferred)
- PUC Lecturer: Physics, Chemistry, Economics & Computer Science (PG Degree, B.Ed. Preferred)
- Physical Education Instructor (with Specialisation; M.P.Ed.)
- Drum Instructor/ Instruments Instructor (Suitable qualification)
HARSHA INSTITUTE OF TECHNOLOGY:
- PRINCIPAL/DIRECTOR- Ph.D. in Engineering/Technology (Preferably in CS, Data Science, AI, Cyber Security) with preferably 10 years experience
HARSHA SCHOOL OF LAW:
- PRINCIPAL- Ph.D. in Law/LL.M with at least 15 years of experience in teaching/ research/ administration in a recognised law institution
HARSHA INSTITUTIONS:
- Graphic Designer (Suitable qualification)
- Marketing Executive (Suitable qualification)
Experienced candidates preferred (Freshers can apply/ walk-in for the interview)
WALK-IN INTERVIEWS ON 09 MARCH 2025, SUNDAY at HARSHA INSTITUTIONS CAMPUS, NELAMANGALA.
Call us on: 91765-43836/ 96204-23304/ 96069-45418/ 90350-87210
Mail your resumes to: hr@harshainstitutions.com/ vp.hips@harshainstitute.edu.in

PUBLIC NOTICE

ಕರ್ನಾಟಕ ಪ್ರದೇಶ ಬಲಿಜ ಸಂಘ (ರಿ)
ಆನೇಕಲ್ ತಿಮ್ಮಯ್ಯ ಚಾರಿಟೇಬಲ್ ಟ್ರಸ್ಟ್ (ರಿ),
ನಂ.31, 1ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560018
ಚುನಾವಣಾ ಪ್ರಕಟಣೆ
ಮೇಲ್ಕಂಡ ಸಂಘದ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಸಂಘದ ಆಡಳಿತ ಮಂಡಳಿಗೆ ಹಾಗೂ ಆನೇಕಲ್ ತಿಮ್ಮಯ್ಯ ಚಾರಿಟೇಬಲ್ ಟ್ರಸ್ಟ್‌ನ ಆಡಳಿತ ಮಂಡಳಿಗೆ 4 ಟ್ರಸ್ಟಿಗಳನ್ನು, ಚುನಾವಣಾ ದಿನಾಂಕದಿಂದ ಮುಂದಿನ 05 ವರ್ಷಗಳ ಅವಧಿಗೆ ದಿನಾಂಕ: 23–03–2025ನೇ ಭಾನುವಾರ ಬೆಳಿಗ್ಗೆ 9:00 ಘಂಟೆಯಿಂದ ಸಂಜೆ 4:00 ಗಂಟೆಯವರೆಗೆ, ಕರ್ನಾಟಕ ಪ್ರದೇಶ ಬಲಿಜ ಸಂಘದ ಆವರಣ, ನಂ.31, 1ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು–560018, ಇಲ್ಲಿ ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಸಲು ಪ್ರಾರಂಭ ದಿನಾಂಕ: 06–03–2025 ಹಾಗೂ ಕೊನೆಯ ದಿನಾಂಕ: 13–03–2025, ನಾಮಪತ್ರಗಳ ಪರಿಶೀಲನೆ ದಿನಾಂಕ:14–03–2025, ನಾಮಪತ್ರಗಳು ವಾಪಸಾತಿ ದಿನಾಂಕ:15–03–2025. ಈ ಕುರಿತು ಚುನಾವಣಾ ವೇಳಾಪಟ್ಟಿ ಈಗಾಗಲೇ ಸದಸ್ಯರ ವಿಳಾಸಕ್ಕೆ ಅಂಚೆ ಮೂಲಕ ರವಾನಿಸಲಾಗಿದ್ದು, ಇದು ತಲುಪದೆ ಇದ್ದಲ್ಲಿ, ಇದನ್ನೇ ಚುನಾವಣಾ ಸೂಚನಾ ಪತ್ರವೆಂದು ಪರಿಗಣಿಸಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ. ಮತದಾನ ಮಾಡಲು ಸಂಘವು ವಿತರಿಸಿರುವ ಗುರುತಿನ ಕಾರ್ಡ್ ಕಡ್ಡಾಯವಾಗಿರುತ್ತದೆ. ಗುರುತಿನ ಕಾರ್ಡ್ ಇಲ್ಲದೇ ಇದ್ದ ಪಕ್ಷದಲ್ಲಿ ತಕ್ಷಣವೇ ತಾತ್ಕಾಲಿಕ ಗುರುತಿನ ಕಾರ್ಡ್‌ಅನ್ನು ಸಂಘದ ಕಛೇರಿಗೆ ಎರಡು ಭಾವಚಿತ್ರ ಮತ್ತು ಆಧಾರ್ ಕಾರ್ಡ್ ಪ್ರತಿಯನ್ನು ಸಲ್ಲಿಸಿ ಪಡೆಯತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಸಂಘದ ವ್ಯವಸ್ಥಾಪಕರ ಮೊಬೈಲ್ ಸಂಖ್ಯೆ: 9060241370 ಅನ್ನು ಸಂಪರ್ಕಿಸಲು ಕೋರಿದೆ.
ದಿ: 02–03–2025 ಸಹಿ/– ಕಾರ್ಯದರ್ಶಿ ಸ್ಥಳ: ಬೆಂಗಳೂರು

ಪ್ರವಾಸ

Travel

ವಿಮಾನದಲ್ಲಿ 10 ದಿನಗಳು ಸಿಂಗಾಪುರ, ಮಲೇಷ್ಯಾ, ಥೈಲ್ಯಾಂಡ್ 20/4/2025 ಮತ್ತು 7 ದಿನಗಳು ಶ್ರೀಲಂಕಾ 14/3/2025, ಹಿರಿಯ ನಾಗರಿಕರಿಗೆ 5000 ರಿಯಾಯಿತಿ! ಸಂಪರ್ಕಿಸಿ: ನಿಸರ್ಗ ಹಾಲಿಡೇಸ್, ಬೆಂಗಳೂರು. ಮೊ: 9900664943, 9880241669

ಕಾಶಿಯಾತ್ರೆ: 14.3.2025, 14.4.2025 ರಿಂದ 7ದಿನಗಳು ವಾರಣಾಸಿ,ಪ್ರಯಾಗ್ ರಾಜ್ ಗಯಾ ಬೈದ್ಯನಾಥ್,ಅಯೋಧ್ಯ. ಚಾರ್ ಧಾಮ್ ಸ್ಪೆಷಲ್ ಯಾತ್ರೆ: 28.5.25 ರಿಂದ 14ದಿನಗಳು ಕೇದಾರನಾಥ್,ಬದರಿನಾಥ್ (ಪುಷ್ಕರ್ ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು. 9741024122, 9740311411.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
*Conditions apply
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560

ಛತ್ತೀಸಗಢದಲ್ಲಿ ಎನ್‌ಕೌಂಟರ್ ಇಬ್ಬರು ನಕ್ಸಲರ ಹತ್ಯೆ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಶನಿವಾರ ಬೆಳಿಗ್ಗೆ ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ನಕ್ಸಲರು ಹತ್ಯೆಯಾಗಿದ್ದಾರೆ.

'ಇಲ್ಲಿನ ಕಿಸ್ತಾರಾಮ್ ಪೊಲೀಸ್ ಠಾಣೆ ವ್ಯಾಪ್ತಿಯ ಅರಣ್ಯದಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ನಕ್ಸಲರು ಗುಂಡಿನ ದಾಳಿ ನಡೆಸಿದ್ದಾರೆ. ಪ್ರತಿದಾಳಿ ವೇಳೆ ಇಬ್ಬರು ನಕ್ಸಲರು ಮೃತಪಟ್ಟಿದ್ದಾರೆ' ಎಂದು ಸುಕ್ಮಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ.

'ಖಚಿತ ಮಾಹಿತಿ ಆಧರಿಸಿ, ಜಿಲ್ಲಾ ಮೀಸಲು ಪೊಲೀಸ್ ಪಡೆ, ಕೋಬ್ರಾ ಹಾಗೂ ಕೇಂದ್ರಿಯ ಮೀಸಲು ಪೊಲೀಸ್ ಪಡೆಯ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಸ್ಥಳದಿಂದ ಇಬ್ಬರು ನಕ್ಸಲರ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ. ಮತ್ತಷ್ಟು ಶೋಧ ಮುಂದುವರಿದಿದೆ' ಎಂದು ಅವರು ಮಾಹಿತಿ ನೀಡಿದರು.

ಎಸ್‌ಎಲ್‌ಬಿಸಿ ಸುರಂಗ ಕುಸಿತ: ರಕ್ಷಣಾ ಕಾರ್ಯಾಚರಣೆಯಲ್ಲಿ ಪ್ರಗತಿ

ಕಾರ್ಮಿಕರು ಸಿಲುಕಿರುವ ಸ್ಥಳ ಪತ್ತೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಹೈದರಾಬಾದ್: ನಾಗರ್‌ಕರ್ನೂಲ್‌ನ ಶ್ರೀಶೈಲಂ ಎಡ ದಂಡೆ ಕಾಲುವೆಯ (ಎಸ್‌ಎಲ್‌ಬಿಸಿ) ಸುರಂಗದೊಳಗೆ ಎಂಟು ಕಾರ್ಮಿಕರು ಸಿಲುಕಿರುವ ಸ್ಥಳವನ್ನು ಗುರುತಿಸಲು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ತಂಡಗಳು ಯಶಸ್ವಿಯಾಗಿವೆ.

ನ್ಯಾಷನಲ್ ಜಿಯೋಫಿಸಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನ (ಎನ್‌ಜಿಆರ್‌ಐ) ಗ್ರೌಂಡ್ ಪೆನೆಟ್ರೇಟಿಂಗ್ ರೇಡಾರ್ (ಜಿಪಿಆರ್) ತಂತ್ರಜ್ಞಾನವನ್ನು ಬಳಸಿ ಕಾರ್ಮಿಕರು ಸಿಲುಕಿರುವ ಜಾಗ ಗುರುತಿಸಲು ಸಾಧ್ಯವಾಗಿದೆ. ಆದರೆ ಅವರು ಜೀವಂತವಾಗಿದ್ದಾರೆಯೇ ಎಂಬುದು ಸ್ಪಷ್ಟವಾಗಿಲ್ಲ.

ಕಾರ್ಮಿಕರು ಸಿಲುಕಿರುವ ಜಾಗವನ್ನು ರೇಡಾರ್ ಮೂಲಕ ಪತ್ತೆ ಮಾಡಿರುವುದನ್ನು ತೆಲಂಗಾಣದ ಸಚಿವ ಜೂಪಲ್ಲಿ ಕೃಷ್ಣರಾವ್ ಖಚಿತಪಡಿಸಿದ್ದಾರೆ.

ರಕ್ಷಣಾ ಕಾರ್ಯಾಚರಣೆಯ ದೃಶ್ಯ — ಪಿಟಿಐ ಚಿತ್ರ

ನೀರಾವರಿ ಸಚಿವ ಎನ್.ಉತ್ತಮ್ ಕುಮಾರ್ ರೆಡ್ಡಿ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ಅಧಿಕಾರಿಗಳ ಜತೆ ಶನಿವಾರ ಸಭೆಯಲ್ಲಿ ಭಾಗವಹಿಸಿದ ಕೃಷ್ಣ ರಾವ್, 'ರಕ್ಷಣಾ ಕಾರ್ಯಾಚರಣೆಯಲ್ಲಿ ಕಳೆದ ಎರಡು ದಿನಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ' ಎಂದರು.

'ನಾಲ್ವರು ಕಾರ್ಮಿಕರನ್ನು ಭಾನುವಾರ ಸಂಜೆಯೊಳಗೆ ಹೊರತರುವ ವಿಶ್ವಾಸವಿದೆ. ಇನ್ನುಳಿದ ನಾಲ್ವರು ಟನೆಲ್ ಬೋರಿಂಗ್ ಮಷಿನ್ (ಟಿಬಿಎಂ) ಅಡಿಯಲ್ಲಿ ಸಿಲುಕಿರುವ ಸಾಧ್ಯತೆಯಿದ್ದು, ಅವರನ್ನು ಹೊರತರಲು ಇನ್ನೆರಡು ದಿನಗಳು ಬೇಕಾಗಬಹುದು' ಎಂದು ಸುದ್ದಿಗಾರರಿಗೆ ತಿಳಿಸಿದೆ.

ಕಾರ್ಮಿಕರ ಸ್ಥಿತಿಯ ಬಗ್ಗೆ ಕೇಳಿದಾಗ, ಬದುಕುಳಿಯುವ ಸಾಧ್ಯತೆಗಳು ಕಡಿಮೆ ಎಂದು ದುರಂತ ನಡೆದ ಮೊದಲ ದಿನವೇ ಹೇಳಿದ್ದನ್ನು ಸಚಿವರು ನೆನಪಿಸಿಕೊಂಡರು. ನಿರ್ಮಾಣ ಹಂತದಲ್ಲಿರುವ ಎಸ್‌ಎಲ್‌ಬಿಸಿ ಸುರಂಗ ಫೆ.22ರಂದು ಕುಸಿದಿತ್ತು. ಇಬ್ಬರು ಎಂಜಿನಿಯರ್‌ಗಳು ಒಳಗೊಂಡಂತೆ ಒಳಗೆ ಸಿಲುಕಿರುವ ಎಂಟು ಮಂದಿಯನ್ನು ರಕ್ಷಿಸುವ ಕಾರ್ಯದಲ್ಲಿ 11 ತಂಡಗಳು ಕೈಜೋಡಿಸಿವೆ.

ಟಿಬಿಎಂ ತೆರವಿಗೆ ಪ್ರಯತ್ನ

ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿರುವ ತಂಡಗಳು ಟನೆಲ್ ಬೋರಿಂಗ್ ಮಷಿನ್‌ಅನ್ನು (ಟಿಬಿಎಂ) ಕತ್ತರಿಸಿ ತೆರವುಗೊಳಿಸುವ ಕೆಲಸದಲ್ಲಿ ನಿರತವಾಗಿವೆ. ಟಿಬಿಎಂ ಮೇಲೆ ಕಾಂಕ್ರೀಟ್ ಹಾಗೂ ಕಬ್ಬಿಣದಿಂದ ಕೂಡಿದ ಅವಶೇಷಗಳು ಬಿದ್ದಿರುವುದು ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ.

'ಸುರಂಗದಿಂದ ನೀರು ಹೊರಹಾಕುವ ಮತ್ತು ಮಣ್ಣು ಹಾಗೂ ಅವಶೇಷಗಳನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ. ಕಾರ್ಮಿಕರು ಸಿಲುಕಿರುವ ಜಾಗಕ್ಕೆ ತೆರಳಲು ಟಿಬಿಎಂನ ಭಾಗಗಳನ್ನು ಕತ್ತರಿಸಿ ತೆಗೆಯಲಾಗಿದೆ' ಎಂದು ನಾಗರ್‌ಕರ್ನೂಲ್ ಎಸ್‌ಪಿ ವೈಭವ್ ಗಾಯಕ್ವಾಡ್ ತಿಳಿಸಿದರು.

ಪಾಸ್‌ಪೋರ್ಟ್ ನಿಯಮಗಳಿಗೆ ತಿದ್ದುಪಡಿ

ಟಿಪ್ಪಣಿ ಅಧಿಕೃತವಾಗಿ ಗೆಜೆಟ್‌ನಲ್ಲಿ ಪ್ರಕಟವಾದ ಬಳಿಕ ಜಾರಿಗೆ ಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನನ ಪ್ರಮಾಣಪತ್ರವೇ ಆಧಾರ

ನವದೆಹಲಿ (ಪಿಟಿಐ): 2023ರ ಅಕ್ಟೋಬರ್ 1ರಂದು ಅಥವಾ ಆ ನಂತರ ಜನಿಸಿದವರು ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸುವಾಗ ಹುಟ್ಟಿದ ದಿನಾಂಕ ದೃಢಪಡಿಸಲು ಜನನ ಪ್ರಮಾಣಪತ್ರವನ್ನೇ ಏಕೈಕ ಆಧಾರವಾಗಿ ಪರಿಗಣಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಇದಕ್ಕಾಗಿ ಪಾಸ್‌ಪೋರ್ಟ್‌ಗೆ ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿ ತಂದಿದೆ. 1980ರ ಪಾಸ್‌ಪೋರ್ಟ್ ನಿಯಮಗಳಿಗೆ ತಿದ್ದುಪಡಿ ತಂದಿರುವ ಅಧಿಕೃತ ಟಿಪ್ಪಣಿಯನ್ನು ಸರ್ಕಾರ ಈ ವಾರ ಹೊರಡಿಸಿದೆ. ಟಿಪ್ಪಣಿಯನ್ನು ಅಧಿಕೃತವಾಗಿ ಗೆಜೆಟ್‌ನಲ್ಲಿ ಪ್ರಕಟಿಸಿದ ನಂತರ ಜಾರಿಗೆ ಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಜನನ -ಮರಣ ರಿಜಿಸ್ಟ್ರಾರ್, ಪಾಲಿಕೆ ಅಥವಾ ಜನನ ಮತ್ತು ಮರಣಗಳ ನೋಂದಣಿ ಕಾಯ್ದೆ–1969ರ ಅಡಿಯಲ್ಲಿ ಅಧಿಕಾರ ಹೊಂದಿರುವ ಯಾವುದೇ ಇತರ ಪ್ರಾಧಿಕಾರದಿಂದ ನೀಡಲಾದ ಜನನ ಪ್ರಮಾಣಪತ್ರಗಳನ್ನು ಜನ್ಮ ದಿನಾಂಕದ ಪುರಾವೆಯಾಗಿ ಸ್ವೀಕರಿಸಲಾಗುತ್ತದೆ ಎಂದು ಹೊಸ ನಿಯಮ ಹೇಳುತ್ತದೆ.

2023ರ ಅ.1ಕ್ಕೂ ಮುನ್ನ ಹುಟ್ಟಿದವರು ಚಾಲನಾ ಪರವಾನಗಿ ಅಥವಾ ಶಾಲಾ ವರ್ಗಾವಣೆ ಪತ್ರಗಳಂತಹ ಇತರ ದಾಖಲೆಗಳನ್ನು ಜನ್ಮ ದಿನದ ಪುರಾವೆಯಾಗಿ ಸಲ್ಲಿಸಬಹುದು.

ಭದ್ರತಾ ಪಡೆಗಳಿಗೆ ಸೂಚನೆ ನೀಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ

'ಮಣಿಪುರ: ಮುಕ್ತ ಓಡಾಟಕ್ಕೆ ಅನುವು'

ನವದೆಹಲಿ (ಪಿಟಿಐ/ಪ್ರಜಾವಾಣಿ ವಾರ್ತೆ): 'ಮಾರ್ಚ್ 8ರಿಂದ ಮಣಿಪುರದಾದ್ಯಂತ ಎಲ್ಲ ರಸ್ತೆಗಳಲ್ಲಿಯೂ ಜನರು ಮುಕ್ತವಾಗಿ ಓಡಾಟಕ್ಕೆ ಅನುವು ಮಾಡಿಕೊಡಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭದ್ರತಾ ಪಡೆಗಳಿಗೆ ಸೂಚನೆ ನೀಡಿದ್ದಾರೆ.

ಮಣಿಪುರದ ಭದ್ರತೆ ಹಾಗೂ ಕಾನೂನು ಸುವ್ಯವಸ್ಥೆ ಕುರಿತಂತೆ ಶನಿವಾರ ನವದೆಹಲಿಯಲ್ಲಿ ಭದ್ರತಾ ಪಡೆಗಳ ಅಧಿಕಾರಿಗಳ ಸಭೆ ನಡೆಸಿದ ಅವರು, ರಸ್ತೆಗಳಲ್ಲಿ ಜನ–ವಾಹನ ಸಂಚಾರಕ್ಕೆ ಅಡಚಣೆ ಉಂಟುಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಮಣಿಪುರದಲ್ಲಿ ಕಳೆದ ಫೆ.13ರಂದು ರಾಷ್ಟ್ರಪತಿ ಆಳ್ವಿಕೆ ಜಾರಿಗೊಳಿಸಿದ ಬಳಿಕ ಮೊದಲ ಬಾರಿಗೆ ಅಮಿತ್ ಶಾ ಈ ಸಭೆ ನಡೆಸಿದ್ದಾರೆ. 2023ರ ಮೇ ತಿಂಗಳಿನಿಂದ ಮಣಿಪುರದಲ್ಲಿ ಸಂಭವಿಸಿದ ಜನಾಂಗೀಯ ಹಿಂಸಾಚಾರದಿಂದ 250 ಮಂದಿ ಮೃತಪಟ್ಟಿದ್ದು, ಸಾವಿರಾರು ಮಂದಿ ನಿರ್ವಸಿತರಾಗಿದ್ದಾರೆ.

'ಸುಲಿಗೆ ಮಾಡುವ ಎಲ್ಲ ಪ್ರಕರಣಗಳಲ್ಲಿ ಕಠಿಣ ಕ್ರಮ ಮುಂದುವರಿಸಲಾಗುವುದು. ಮಣಿಪುರಕ್ಕೆ ಹೊಂದಿಕೊಂಡಿರುವ ಅಂತರರಾಷ್ಟ್ರೀಯ ಗಡಿಗಳಲ್ಲಿ ಬೇಲಿ ಹಾಕುವ ಕೆಲಸ ತ್ವರಿತಗೊಳಿಸಲಾಗುವುದು. ರಾಜ್ಯದಲ್ಲಿ ಹಬ್ಬಿರುವ ಡ್ರಗ್ಸ್ ಮಾಫಿಯಾವನ್ನು ಸಂಪೂರ್ಣವಾಗಿ ಮಟ್ಟಹಾಕುವಂತೆ ಸೂಚನೆ ನೀಡಲಾಗಿದೆ' ಎಂದು ಗೃಹ ಸಚಿವಾಲಯ ಬಿಡುಗಡೆಗೊಳಿಸಿದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಣಿಪುರ ರಾಜ್ಯಪಾಲ ಅಜಯ್ ಕುಮಾರ್ ಭಲ್ಲಾ, ಕೇಂದ್ರ ಗೃಹ ಇಲಾಖೆ ಕಾರ್ಯದರ್ಶಿ ಗೋವಿಂದ್ ಮೋಹನ್, ಗುಪ್ತಚರ ಇಲಾಖೆ ನಿರ್ದೇಶಕ ತಪನ್ ದೇಖ, ಸೇನೆಯ ಉಪಮುಖ್ಯಸ್ಥ, ಸೇನಾ ಪೂರ್ವ ವಲಯ ಕಮಾಂಡರ್, ಬಿಎಸ್‌ಎಫ್, ಸಿಆರ್‌ಪಿಎಫ್, ಅಸ್ಸಾಂ ರೈಫಲ್ಸ್‌ನ ನಿರ್ದೇಶಕರು, ಭದ್ರತಾ ಸಲಹೆಗಾರರು ಸಭೆಯಲ್ಲಿದ್ದರು.

ಅವಧಿ ವಿಸ್ತರಣೆ: ರಾಜ್ಯದ ವಿವಿಧೆಡೆಯಲ್ಲಿ ಅಕ್ರಮವಾಗಿ ಲೂಟಿ ಮಾಡಿದ್ದ ಶಸ್ತ್ರಾಸ್ತ್ರಗಳನ್ನು ಮರಳಿ ಸರ್ಕಾರಕ್ಕೆ ಒಪ್ಪಿಸುವಂತೆ ರಾಜ್ಯಪಾಲರು ಫೆ. 20ರವರೆಗೆ ಜನರಿಗೆ ಅವಕಾಶ ನೀಡಿದ್ದರು. ಈ ವೇಳೆ 300 ಶಸ್ತ್ರಾಸ್ತ್ರಗಳನ್ನು ಮರಳಿಸಲಾಗಿತ್ತು. ಶುಕ್ರವಾರ ಈ ಅವಧಿಯನ್ನು ಮಾ.6ರ ಸಂಜೆ 4ರವರೆಗೆ ವಿಸ್ತರಿಸಿದ್ದಾರೆ.

ಐವರ ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ಕಾಂಗ್‌ಪೋಕ್ಪಿ ಮತ್ತು ಕಾಮ್‌ಜೋಂಗ್ ಜಿಲ್ಲೆಗಳಲ್ಲಿ ಉಗ್ರಗಾಮಿ ಸೇರಿದಂತೆ ಐವರನ್ನು ಭದ್ರತಾ ಪಡೆಗಳು ಬಂಧಿಸಿವೆ.

ಕಾಂಗ್‌ಪೋಕ್ಪಿಯ ಬಿಂಪರಾವೊದಲ್ಲಿ ಬಂಧಿತರಾದ ನಾಲ್ವರು, ನಿಷೇಧಿತ ಕುಕಿ ನ್ಯಾಷನಲ್ ಫ್ರಂಟ್‌ನಲ್ಲಿ (ಪಿ) ಸಕ್ರಿಯರಾಗಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು ಶನಿವಾರ ತಿಳಿಸಿದರು.

ಭಾರತ- ಮ್ಯಾನ್ಮಾರ್ ಗಡಿಯ ಕಾಮ್‌ಜೋಂಗ್ ಜಿಲ್ಲೆಯ ಕುಲ್ತುಹ್ ಗ್ರಾಮದಲ್ಲಿ ನಿಷೇಧಿತ ಪೀಪಲ್ಸ್ ಲಿಬರೇಷನ್ ಆರ್ಮಿಯ ಸದಸ್ಯನೊಬ್ಬನನ್ನು ಭದ್ರತಾ ಪಡೆಗಳು ಶುಕ್ರವಾರ ಬಂಧಿಸಿವೆ ಎಂದು ಹೇಳಿದರು.

ಬಂಧಿತರಿಂದ ಪಿಸ್ತೂಲ್, ಗ್ರೆನೇಡ್ ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ಟೆಂಗ್‌ನೌಪಾಲ್, ಇಂಫಾಲ್ ಪೂರ್ವ, ಇಂಫಾಲ್ ಪಶ್ಚಿಮ, ಕಾಂಗ್‌ಪೋಕ್ಪಿ, ಥೌಬಾಲ್ ಜಿಲ್ಲೆಗಳಲ್ಲಿ ಹಲವರು ತಮ್ಮ ಬಳಿಯಿದ್ದ ರೈಫಲ್, ಗ್ರೆನೇಡ್, ಕಚ್ಚಾ ಬಾಂಬ್ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ಸ್ವಯಂ ಪ್ರೇರಿತವಾಗಿ ಮರಳಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆ... ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಹಿಂಸಾಚಾರವನ್ನು ಖಂಡಿಸಿ ಕುಕಿ ವಿದ್ಯಾರ್ಥಿಗಳ ಸಂಘಟನೆ ಮತ್ತು ಕುಕಿ ಜೊ ಮಹಿಳಾ ವೇದಿಕೆ ದೆಹಲಿ–ಎನ್‌ಸಿಆರ್ ಘಟಕದ ಸದಸ್ಯರು ನವದೆಹಲಿಯ ಜಂತರ್ ಮಂತರ್‌ನಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಆಂಧ್ರಪ್ರದೇಶ 'ಆಶಾ'ಗೆ ಗ್ರ್ಯಾಚುಟಿ, ಹೆರಿಗೆ ರಜೆ

ಅಮರಾವತಿ (ಪಿಟಿಐ): ಆಶಾ ಕಾರ್ಯಕರ್ತೆಯರಿಗೆ ಗ್ರ್ಯಾಚುಟಿ, ವೇತನ ಸಹಿತ ಹೆರಿಗೆ ರಜೆ ಹಾಗೂ ನಿವೃತ್ತಿ ವಯಸ್ಸನ್ನು ಹೆಚ್ಚಿಸಲು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಒಪ್ಪಿಗೆ ನೀಡಿದ್ದಾರೆ.

ಜನರು ಮತ್ತು ಆರೋಗ್ಯ ವ್ಯವಸ್ಥೆಯ ನಡುವಿನ ಕೊಂಡಿಯಾಗಿ ಕಾರ್ಯ ನಿರ್ವಹಿಸುವ ಆಶಾ ಕಾರ್ಯಕರ್ತೆಯರಿಗೆ ಗ್ರ್ಯಾಚುಟಿ ನೀಡಿ ಎಂದು ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

'30 ವರ್ಷ ಸೇವೆ ಸಲ್ಲಿಸಿದ ಆಶಾ ಕಾರ್ಯಕರ್ತೆಯು ನಿವೃತ್ತಿಯಾದಾಗ ₹1.50 ಲಕ್ಷ ಗ್ರ್ಯಾಚುಟಿ ಪಡೆಯಲಿದ್ದಾರೆ. 42,752 ಮಂದಿ ಆಶಾ ಕಾರ್ಯಕರ್ತರು ಇದರ ಪ್ರಯೋಜನ ಪಡೆಯಲಿದ್ದಾರೆ. ಮೊದಲ ಎರಡು ಹೆರಿಗೆಗೆ ಸಂಬಳ ಸಹಿತ 180 ದಿನ ರಜೆ ನೀಡಲಾಗುತ್ತದೆ. ನಿವೃತ್ತಿ ವಯಸ್ಸನ್ನು 60ರಿಂದ 62 ವರ್ಷಕ್ಕೆ ಹೆಚ್ಚಿಸಲು ಅನುಮೋದನೆ ನೀಡಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

'ಜಗತ್ತಿನ ಕಾರ್ಖಾನೆಯಾಗಿ ಬೆಳೆಯುತ್ತಿದೆ ಭಾರತ'

ನವದೆಹಲಿ (ಪಿಟಿಐ): ಸ್ಥಳೀಯ ಉತ್ಪನ್ನಗಳ ಬಳಕೆಗೆ ಆದ್ಯತೆ ನೀಡಬೇಕು ಎನ್ನುವ 'ವೋಕಲ್ ಫಾರ್ ಲೋಕಲ್' ಅಭಿಯಾನವು ಫಲ ನೀಡಲು ಆರಂಭಿಸಿದ್ದು, ಭಾರತದಲ್ಲಿ ತಯಾರಾದ ಉತ್ಪನ್ನಗಳು ಜಾಗತಿಕ ಮಾರುಕಟ್ಟೆಗಳನ್ನು ತಲುಪಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

'ಎನ್‌ಎಕ್ಸ್‌ಟಿ ಸಮಾವೇಶ'ದಲ್ಲಿ ಮಾತನಾಡಿದ ಮೋದಿ ಅವರು, ಅಗಣಿತ ಸಂಶೋಧನೆಗಳ ನಾಡಾಗಿ ಭಾರತ ಬದಲಾಗುತ್ತಿದೆ, ವಿವಿಧ ಸಮಸ್ಯೆಗಳಿಗೆ ಕೈಗೆಟಕುವ ಬಗೆಯಲ್ಲಿ ಜಗತ್ತಿಗೆ ಪರಿಹಾರೋಪಾಯಗಳನ್ನು ಭಾರತ ಒದಗಿಸುತ್ತಿದೆ ಎಂದರು. '21ನೆಯ ಶತಮಾನದ ಭಾರತವನ್ನು ವಿಶ್ವವು ಸೂಕ್ಷ್ಮವಾಗಿ ಗಮನಿಸುತ್ತಿದೆ. ಜಗತ್ತಿನ ಎಲ್ಲೆಡೆಯಿಂದ ಜನ ಭಾರತಕ್ಕೆ ಭೇಟಿ ನೀಡಿ, ನಾಡನ್ನು ಅರ್ಥ ಮಾಡಿಕೊಳ್ಳಲು ಬಯಸುತ್ತಿದ್ದಾರೆ' ಎಂದರು. ಭಾರತವು ಈಗ 'ವಿಶ್ವದ ಕಾರ್ಖಾನೆಯಾಗಿ' ಪ್ರವರ್ಧಮಾನಕ್ಕೆ ಬರುತ್ತಿದೆ ಎಂದು ಹೇಳಿದರು.

'ಜಗತ್ತಿಗೆ ಕಡಿಮೆ ವೆಚ್ಚದ, ಸುರಕ್ಷಿತವಾದ ಪಾವತಿ ವ್ಯವಸ್ಥೆಯ ಅಗತ್ಯ ಇದ್ದಾಗ ಭಾರತವು ಯುಪಿಐ ವ್ಯವಸ್ಥೆಯನ್ನು ರೂಪಿಸಿತು. ಇಂದು ಫ್ರಾನ್ಸ್, ಯುಎಇ ಮತ್ತು ಸಿಂಗಪುರದಂತಹ ದೇಶಗಳು ತಮ್ಮ ಹಣಕಾಸಿನ ವ್ಯವಸ್ಥೆಯಲ್ಲಿ ಯುಪಿಐ ಅಳವಡಿಸುತ್ತಿವೆ' ಎಂದರು.

'ನ್ಯೂಸ್‌ಎಕ್ಸ್ ವರ್ಲ್ಡ್' ಹೆಸರಿನ ಅಂತರರಾಷ್ಟ್ರೀಯ ಮಟ್ಟದ ಸುದ್ದಿವಾಹಿನಿಯನ್ನು ಇದೇ ವೇಳೆ ಆರಂಭಿಸಲಾಯಿತು. ಹೊಸ ವಾಹಿನಿಯು ಭಾರತದ ಸಾಧನೆಗಳನ್ನು ಎಲ್ಲೆಡೆ ಪಸರಿಸುತ್ತದೆ ಎಂಬ ಭರವಸೆಯನ್ನು ಮೋದಿ ವ್ಯಕ್ತಪಡಿಸಿದರು.

ಪ್ಲಾಸ್ಟಿಕ್ ಬಳಕೆ: ತನಿಖೆಗೆ ನಿರ್ದೇಶನ

ಒಂದನೇ ಪುಟದಿಂದ...

'ಪ್ಲಾಸ್ಟಿಕ್‌ನಿಂದ ಹಾನಿಕಾರಕ ರಾಸಾಯನಿಕಗಳು ಆಹಾರಕ್ಕೆ ಸೇರುತ್ತವೆ. ಆದ್ದರಿಂದ, ಪ್ಲಾಸ್ಟಿಕ್ ಹಾಳೆಗಳನ್ನು ಬಳಸುವುದು ಆಹಾರದ ಸುರಕ್ಷತೆಯ ಬಗ್ಗೆ ಗಂಭೀರ ಕಳವಳಕ್ಕೆ ಕಾರಣವಾಗಿದೆ' ಎಂದು ಹೇಳಿದೆ.

'ಕಡಿಮೆ ಗುಣಮಟ್ಟದ ಅಥವಾ ಫುಡ್ ಗ್ರೇಡ್ ಹೊಂದಿಲ್ಲದ ಪ್ಲಾಸ್ಟಿಕ್ ಅನ್ನು ಹೆಚ್ಚಿನ ಶಾಖಕ್ಕೆ ಒಡ್ಡಿದಾಗ ಬಿಸ್ಫೆನಾಲ್ ಎ (ಬಿಪಿಎ) ಮತ್ತು ಥಾಲೇಟ್ ಒಳಗೊಂಡಂತೆ ಇತರ ವಿಷಕಾರಿ ರಾಸಾಯನಿಕಗಳು ಬಿಡುಗಡೆಯಾಗಬಹುದು. ಅವು ಆಹಾರಕ್ಕೆ ಸೇರಿಕೊಂಡರೆ, ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡಬಹುದು' ಎಂದು ಎಫ್‌ಎಸ್‌ಎಸ್‌ಎಐ ಸಿಇಒ ಜಿ.ಕಮಲಾ ವರ್ಧನ್ ರಾವ್ ಹೇಳಿದ್ದಾರೆ.

'ಸುಪ್ರೀಂ' ಅಸಮಾಧಾನ • ಅಲಹಾಬಾದ್ ಹೈಕೋರ್ಟ್ ಆದೇಶ ರದ್ದು

ವ್ಯಾಪ್ತಿ ಮೀರುತ್ತಿರುವ ನ್ಯಾಯಾಲಯ

ನವದೆಹಲಿ (ಪಿಟಿಐ): ನ್ಯಾಯಾಲಯಗಳು ತಮ್ಮ ವ್ಯಾಪ್ತಿಯನ್ನು ಮೀರುತ್ತಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ವ್ಯಕ್ತಿಯೊಬ್ಬನನ್ನು ತಪ್ಪಾಗಿ ಬಂಧಿಸಿದ್ದರ ಆರೋಪದ ಅಡಿಯಲ್ಲಿ ಅವರಿಗೆ ಪರಿಹಾರ ರೂಪದಲ್ಲಿ ₹5 ಲಕ್ಷ ನೀಡುವಂತೆ ಮಾದಕ ವಸ್ತುಗಳ ನಿಯಂತ್ರಣ ಬ್ಯೂರೊದ (ಎನ್‌ಸಿಬಿ) ನಿರ್ದೇಶಕರಿಗೆ ಸೂಚಿಸಿದ್ದ ಅಲಹಾಬಾದ್ ಹೈಕೋರ್ಟ್ ಆದೇಶವನ್ನು ರದ್ದುಪಡಿಸಿದೆ.

ಕಾನೂನಿನ ಅಡಿಯಲ್ಲಿ ಅಧಿಕಾರ ಇಲ್ಲದಿದ್ದರೂ ಈ ಪರಿಹಾರಕ್ಕೆ ಆದೇಶ ನೀಡಲಾಗಿದೆ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಮನಮೋಹನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ಆದೇಶವನ್ನು ಪ್ರಶ್ನಿಸಿ ಎನ್‌ಸಿಬಿ, ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಮಾನ್ ಸಿಂಗ್ ವರ್ಮ ಮತ್ತು ಅಮನ್ ಸಿಂಗ್ ಎನ್ನುವವರಿಂದ ಎನ್‌ಸಿಬಿ ಅಧಿಕಾರಿಗಳು 1,280 ಗ್ರಾಂ ಬ್ರೌನ್ ಪೌಡರ್ ವಶಪಡಿಸಿಕೊಂಡಿದ್ದರು. ವರ್ಮ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು.

ಪ್ರಯೋಗಾಲಯದ ವರದಿ ಬರುವುದು ಬಾಕಿ ಇದ್ದಾಗ ಆರೋಪಿ ವರ್ಮ ಅವರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ತಿರಸ್ಕೃತಗೊಂಡಿತು. ನಂತರ ಅವರು ಹೈಕೋರ್ಟ್ ಮೊರೆ ಹೋಗಿದ್ದರು. ವಶಪಡಿಸಿಕೊಂಡ ವಸ್ತು ಮಾದಕ ಪದಾರ್ಥ ಅಲ್ಲ ಎಂದು ಪ್ರಯೋಗಾಲಯದ ವರದಿ ಹೇಳಿತು.

ನಂತರ ಆ ಮಾದರಿಯನ್ನು ಹೆಚ್ಚಿನ ಪರಿಶೀಲನೆಗೆ ಕೇಂದ್ರೀಯ ಪ್ರಯೋಗಾಲಯಕ್ಕೆ ರವಾನಿಸಲಾಗಿತ್ತು. ಅದು ಕೂಡ, ವಶಪಡಿಸಿಕೊಂಡ ವಸ್ತು ಮಾದಕ ಪದಾರ್ಥ ಅಲ್ಲ ಎಂದು ಹೇಳಿತು. ಇದಾದ ನಂತರ ಎನ್‌ಸಿಬಿ ಪ್ರಕರಣವನ್ನು ಕೊನೆಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿತು, ವರ್ಮ ಅವರನ್ನು ಬಿಡುಗಡೆ ಮಾಡಲಾಯಿತು.

ವರ್ಮ ಅವರ ಬಿಡುಗಡೆ ಆಗಿದ್ದರೂ, ಎನ್‌ಸಿಬಿ ಅಧಿಕಾರಿಗಳು ಪ್ರಕರಣ ಕೊನೆಗೊಳಿಸಿದ್ದರೂ ಜಾಮೀನು ಅರ್ಜಿಯ ವಿಚಾರಣೆ ಮುಂದುವರಿಸಿದ ಹೈಕೋರ್ಟ್, ಪ್ರಯೋಗಾಲಯದ ಆರಂಭಿಕ ವರದಿ ಇದ್ದರೂ ವರ್ಮ ಅವರನ್ನು ತಪ್ಪಾಗಿ ಜೈಲುಪಾಲು ಮಾಡಲಾಗಿತ್ತು ಎಂದು ಹೇಳಿತು. ಹೀಗಾಗಿ ಎನ್‌ಸಿಬಿ ನಿರ್ದೇಶಕರು ಪರಿಹಾರ ನೀಡಬೇಕು ಎಂದು ಅದು ಹೇಳಿತು.

ಲಾಭಕ್ಕಾಗಿ ಸಾಲ : 'ಗ್ರಾಹಕ' ಅಲ್ಲ

ಉದ್ದೇಶ 'ಲಾಭ ಮಾಡಿಕೊಳ್ಳುವುದಕ್ಕೆ' ಆಗಿದ್ದರೆ ಸಾಲ ಪಡೆದವರನ್ನು ಗ್ರಾಹಕರ ರಕ್ಷಣಾ ಕಾಯ್ದೆಯ ಅಡಿಯಲ್ಲಿ 'ಗ್ರಾಹಕ' ಎಂದು ಪರಿಗಣಿಸಲು ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಾಷ್ಟ್ರೀಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ (ಎನ್‌ಸಿಡಿಆರ್‌ಸಿ) ನೀಡಿದ್ದ ಆದೇಶಕ್ಕೆ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಪಿ.ಕೆ. ಮಿಶ್ರಾ ಅವರು ಇರುವ ವಿಭಾಗೀಯ ಪೀಠವು ಈ ಮಾತು ಹೇಳಿದೆ.

ಆ್ಯಡ್ ಬ್ಯೂರೊ ಅಡ್ವರ್ಟೈಸಿಂಗ್ ಪ್ರೈ.ಲಿ. ಕಂಪನಿಯು ಸಾಲ ಪಾವತಿಯಲ್ಲಿ ವಿಫಲವಾಗಿದೆ ಎಂದು ಸಿಬಿಲ್ (ಕ್ರೆಡಿಟ್ ಇನ್‌ಫಾರ್ಮೇಷನ್ ಬ್ಯೂರೊ ಆಫ್ ಇಂಡಿಯಾ ಲಿಮಿಟೆಡ್) ಸಂಸ್ಥೆಗೆ ತಪ್ಪಾಗಿ ಮಾಹಿತಿ ನೀಡಲಾಗಿದೆ ಎಂಬ ಆರೋಪದ ಕಾರಣಕ್ಕೆ, ಆ ಕಂಪನಿಗೆ ಪರಿಹಾರ ರೂಪದಲ್ಲಿ ₹75 ಲಕ್ಷ ಪಾವತಿಸುವಂತೆ ಆಯೋಗವು ಬ್ಯಾಂಕ್‌ಗೆ ಆದೇಶಿಸಿತ್ತು. ಇದರ ಜೊತೆ ವ್ಯಾಜ್ಯದ ಖರ್ಚುಗಳನ್ನು ಕೂಡ ಪಾವತಿ ಮಾಡಬೇಕು ಎಂದು ಹೇಳಿತ್ತು.

ಶೆಹ್ಲಾ ವಿರುದ್ಧದ ಪ್ರಕರಣ ಹಿಂಪಡೆಯಲು ಅನುಮತಿ

ನವದೆಹಲಿ(ಪಿಟಿಐ): ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಒಕ್ಕೂಟದ ಮಾಜಿ ಉಪಾಧ್ಯಕ್ಷೆ ಶೆಹ್ಲಾ ರಶೀದ್ ಶೋರಾ ಅವರ ವಿರುದ್ಧ 2019ರಲ್ಲಿ ದಾಖಲಾಗಿದ್ದ ದೇಶದ್ರೋಹ ಪ್ರಕರಣವನ್ನು ಹಿಂಪಡೆಯಲು ಇಲ್ಲಿನ ನ್ಯಾಯಾಲಯವೊಂದು ದೆಹಲಿ ಪೊಲೀಸರಿಗೆ ಅನುಮತಿ ನೀಡಿದೆ ಎಂದು ಮೂಲಗಳು ತಿಳಿಸಿವೆ. ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಅನೂಜ್ ಕುಮಾರ್ ಸಿಂಗ್ ಅವರು, ಫೆ.27ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ಪ್ರಕಟಿಸಿದ್ದಾರೆ.

ಅನಿವಾಸಿ ಭಾರತೀಯನ ಹತ್ಯೆ: 10 ಮಂದಿಗೆ ಶಿಕ್ಷೆ

ಅಹಮದಾಬಾದ್ (ಪಿಟಿಐ): ಆಧ್ಯಾತ್ಮಿಕ ಸಂಸ್ಥೆಯೊಂದಕ್ಕೆ ದೊರೆತಿದ್ದ ವಿದೇಶಿ ದೇಣಿಗೆಯಲ್ಲಿನ ಅವ್ಯವಹಾರದ ಬಗ್ಗೆ ಪ್ರಶ್ನಿಸಿದ್ದ ಅನಿವಾಸಿ ಭಾರತೀಯನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ 10 ಮಂದಿಗೆ ಇಲ್ಲಿನ ಸೆಷನ್ಸ್ ಕೋರ್ಟ್ ಕಠಿಣ ಜೀವಾವಧಿ ಶಿಕ್ಷೆ ವಿಧಿಸಿದೆ.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಭರತ್ ಯಾದವ್ ಅವರು, 'ಸ್ವಾಧ್ಯಾಯ ಪರಿವಾರ'ದ 10 ಸದಸ್ಯರು ಹತ್ಯೆ ಮತ್ತು ಇತರ ಪ್ರಕರಣದಲ್ಲಿ ತಪ್ಪಿತಸ್ಥರು ಎಂದು ತೀರ್ಪು ನೀಡಿದ್ದಾರೆ. 'ಸ್ವಾಧ್ಯಾಯ ಪರಿವಾರ'ದೊಂದಿಗೆ ಸಂಪರ್ಕದಲ್ಲಿದ್ದ ಅನಿವಾಸಿ ಭಾರತೀಯ ಪಂಕಜ್ ತ್ರಿವೇದಿ ಅವರ ಮೇಲೆ 2006ರ ಜೂನ್ 15ರಂದು ಹಲ್ಲೆ ನಡೆಸಿ ಹತ್ಯೆ ಮಾಡಲಾಗಿತ್ತು.

ಮತಪತ್ರ: ಜಂಟಿ ಸಂಸದೀಯ ಸಮಿತಿ ವ್ಯಾಪ್ತಿಯಲ್ಲಿಲ್ಲ–ಕೇಂದ್ರ

ನವದೆಹಲಿ (ಪಿಟಿಐ): ಮತಪತ್ರಗಳ ಮೂಲಕ ಚುನಾವಣೆ ನಡೆಸುವ ವಿಚಾರವು 'ಒಂದು ದೇಶ, ಒಂದು ಚುನಾವಣೆ'ಗೆ ಸಂಬಂಧಿಸಿದಂತೆ ರಚಿಸಲಾಗಿರುವ ಜಂಟಿ ಸಂಸದೀಯ ಸಮಿತಿಯ ವ್ಯಾಪ್ತಿಗೆ ಬರುವುದಿಲ್ಲ ಎಂದು ಕೇಂದ್ರ ಕಾನೂನು ಸಚಿವಾಲಯ ತಿಳಿಸಿದೆ.

ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದ ಎರಡು ಮಸೂದೆಗಳನ್ನು ಪರಿಶೀಲಿಸುವ ಜಂಟಿ ಸಂಸದೀಯ ಸಮಿತಿಯ ಕೆಲವು ಸದಸ್ಯರು, ಮತಪತ್ರಗಳ ಮೂಲಕ ಚುನಾವಣೆ ನಡೆಸುವ ಹಳೆಯ ವ್ಯವಸ್ಥೆಗೆ ಮರಳಬೇಕು ಎಂಬ ಸಲಹೆ ಮಾಡಿದ್ದರು. ಕಾನೂನು ಸಚಿವಾಲಯವು ಆ ಸಲಹೆಗೆ ಲಿಖಿತ ಉತ್ತರ ನೀಡಬೇಕಿತ್ತು.

ಸಮಿತಿಯ ಸದಸ್ಯರು ಕೇಳಿರುವ ವಿವಿಧ ಪ್ರಶ್ನೆಗಳಿಗೆ ಕಾನೂನು ಸಚಿವಾಲಯದ ಶಾಸನ ರಚನಾ ವಿಭಾಗವು ವಿವರವಾದ ಪ್ರತಿಕ್ರಿಯೆ ನೀಡಿದರೆ, ಮತಪತ್ರ ವ್ಯವಸ್ಥೆಗೆ ಮರಳುವುದಕ್ಕೆ ಸಂಬಂಧಿಸಿದ ಸಲಹೆಗೆ ನೇರ ಉತ್ತರವನ್ನು ನೀಡಲಿಲ್ಲ.

ಮತಪತ್ರ ಬಳಕೆ ಕುರಿತ ಸಲಹೆಯು ಜಂಟಿ ಸಂಸದೀಯ ಸಮಿತಿಯ 'ವ್ಯಾಪ್ತಿಯಿಂದ ಹೊರಗಿದೆ' ಎಂದು ಸಚಿವಾಲಯವು ಹೇಳಿರುವುದಾಗಿ ತಿಳಿದುಬಂದಿದೆ.

'ಮತದಾನದ ವೇಳೆ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಬಳಸಬೇಕೇ ಅಥವಾ ಮತಪತ್ರಗಳನ್ನು ಬಳಸಬೇಕೇ ಎಂಬುದು ಸಮಿತಿಯು ಪರಿಶೀಲಿಸುವಂತಹ ವಿಷಯ ಅಲ್ಲ' ಎಂದು ಹೇಳಿದೆ.

ಹೊಸ ಗ್ರಾಹಕರಿಗೆ 'ಅರ್ಧ ಜ್ಯೋತಿ'

ಒಂದನೇ ಪುಟದಿಂದ...

'ಗೃಹ ಜ್ಯೋತಿ' ಯೋಜನೆಯನ್ನು ಜಾರಿ ಮಾಡಿದಾಗ ಕೆಲವು ನಿಯಮಗಳನ್ನು ಸರ್ಕಾರ ರೂಪಿಸಿತ್ತು.

'ಆರ್ಥಿಕ ವರ್ಷದ ವಿದ್ಯುತ್ ಬಳಕೆ ಆಧಾರದಲ್ಲಿ ಪ್ರತಿ ವರ್ಷ ಸರಾಸರಿ ಯೂನಿಟ್ ಬಳಕೆಯನ್ನು ನಿರ್ಣಯಿಸಿ, ಹೊಸತಾಗಿ ಸಂಪರ್ಕ ಪಡೆದವರಿಗೂ 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಸೌಲಭ್ಯವನ್ನು ವಿಸ್ತರಿಸಬೇಕಿತ್ತು. ಸರಾಸರಿ ಬಳಕೆ ಪ್ರಮಾಣವನ್ನು ಪರಿಷ್ಕರಿಸದ ಕಾರಣ, ಹೊಸ ಮನೆ ಕಟ್ಟಿದ ಗ್ರಾಹಕರು 200 ಯೂನಿಟ್ ಒಳಗೆ ವಿದ್ಯುತ್ ಬಳಕೆ ಮಾಡುತ್ತಿದ್ದರೂ ಕೇವಲ ರಾಜ್ಯ ಸರ್ಕಾರ ಸರಾಸರಿಯ 58 ಯೂನಿಟ್ ವಿದ್ಯುತ್‌ನ ಉಚಿತ ಪಡೆಯುತ್ತಾರೆಯೇ ಹೊರತು, 'ಉಚಿತ 200 ಯೂನಿಟ್ ವಿದ್ಯುತ್' ಯೋಜನೆಯ ಲಾಭ ಪಡೆಯಲು ಸಾಧ್ಯವಾಗುತ್ತಿಲ್ಲ' ಎಂದು ಇಂಧನ ಇಲಾಖೆಯ ಮೂಲಗಳು ತಿಳಿಸಿವೆ. 'ಬಾಡಿಗೆದಾರರಿಗೆ ಸೌಲಭ್ಯದ ಪ್ರಯೋಜನ ತಲುಪಿಸಲು 'ಡಿ' ಲಿಂಕ್ ವ್ಯವಸ್ಥೆ ಕಲ್ಪಿಸಿದ್ದರಿಂದ ಬಾಡಿಗೆ ಮನೆಯಲ್ಲಿ ಇರುವವರಿಗೆ ಹಿಂದಿನ ಸರಾಸರಿ ಬಳಕೆ ಪ್ರಮಾಣ ಮುಂದುವರಿಸಲು ಅವಕಾಶ ಸಿಕ್ಕಿದೆ. ಬಳಕೆ ಪ್ರಮಾಣವನ್ನು ಪರಿಷ್ಕರಿಸಿದರೆ ₹500ಕೋಟಿ–₹600 ಕೋಟಿಯಷ್ಟು ಆರ್ಥಿಕ ಹೊರೆ ಆಗಲಿದೆ. ಹೀಗಾಗಿ, ಸರಾಸರಿ ವಿದ್ಯುತ್ ಬಳಕೆ ಪ್ರಮಾಣವನ್ನು ಪರಿಷ್ಕರಿಸುವ ಪ್ರಸ್ತಾವ ಸದ್ಯಕ್ಕೆ ಇಲ್ಲ. ಈ ಬಗ್ಗೆಯೂ ಚರ್ಚೆಯೂ ಆಗಿಲ್ಲ' ಎಂದೂ ಮೂಲ ಗಳು ಹೇಳಿವೆ.

ಮನೆಮನೆಗೆ ಸಂಗಮದ ಜಲ

ಲಖನೌ: ಸಂಗಮದ (ಗಂಗಾ, ಯುಮುನಾ ಮತ್ತು ಸರಸ್ವತಿ ನದಿಗಳು ಸೇರುವ ಸ್ಥಳ) ಪುಣ್ಯ ಜಲವನ್ನು ರಾಜ್ಯದಾದ್ಯಂತ ಮನೆಮನೆಗೆ ತಲುಪಿಸಲು ಉತ್ತರ ಪ್ರದೇಶ ಸರ್ಕಾರ ನಿರ್ಧರಿಸಿದೆ.

ಮಹಾ ಕುಂಭಮೇಳಕ್ಕಾಗಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಅಗ್ನಿಶಾಮಕ ವಾಹನಗಳನ್ನು ಕರೆಸಲಾಗಿತ್ತು. ಈ ವಾಹನಗಳು ವಾಪಸ್ ತಮ್ಮ ಜಿಲ್ಲೆಗಳಿಗೆ ಮರಳುವ ಸಂದರ್ಭದಲ್ಲಿ ಸಂಗಮ ಜಲವನ್ನು ತುಂಬಿಸಿ ಕಳುಹಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಹಲವು ಅಗ್ನಿಶಾಮಕ ವಾಹನಗಳು ಶನಿವಾರ ಪವಿತ್ರ ನೀರಿನೊಂದಿಗೆ ತಮ್ಮ ಜಿಲ್ಲೆಗಳಿಗೆ ಮರಳಿವೆ ಎಂದು ವರದಿಯಾಗಿದೆ. 'ಮುಂದಿನ ಕೆಲವು ದಿನಗಳಲ್ಲಿ 5 ಲಕ್ಷ ಲೀಟರ್ ಪುಣ್ಯ ಜಲವನ್ನು ರಾಜ್ಯದಾದ್ಯಂತ ಜನರಿಗೆ ವಿತರಿಸಲಾಗುತ್ತದೆ. ಧಾರ್ಮಿಕ ಸಂಘಟನೆಗಳು ಮತ್ತು ಸ್ಥಳೀಯ ಆಡಳಿತದ ಮೂಲಕ ತೀರ್ಥವನ್ನು ವಿತರಿಸಲಾಗುತ್ತದೆ ಎಂದು ವರದಿಯಾಗಿದೆ ಎಂದು ಪ್ರಯಾಗರಾಜ್‌ನ ಅಧಿಕಾರಿಯೊಬ್ಬರು ತಿಳಿಸಿದರು.

ಮಾಲಿನ್ಯ ನಿಯಂತ್ರಣಕ್ಕೆ ದೆಹಲಿ ಸರ್ಕಾರದಿಂದ ಕಟ್ಟುನಿಟ್ಟಿನ ಕ್ರಮ

15 ವರ್ಷದ ವಾಹನಗಳಿಗೆ ಇಂಧನ ಇಲ್ಲ

ನವದೆಹಲಿ(ಪಿಟಿಐ): 15 ವರ್ಷದ ಹಳೆಯ ವಾಹನಗಳಿಗೆ ಮಾರ್ಚ್ 31ರ ನಂತರ ಬಂಕ್‌ಗಳಲ್ಲಿ ಇಂಧನ ಪೂರೈಸುವುದನ್ನು ದೆಹಲಿ ಸರ್ಕಾರವು ನಿಲ್ಲಿಸಲಿದೆ ಎಂದು ಪರಿಸರ ಸಚಿವ ಮನ್‌ಜಿಂದರ್ ಸಿಂಗ್ ಸಿರ್ಸಾ ಅವರು ಶನಿವಾರ ತಿಳಿಸಿದರು.

ರಾಷ್ಟ್ರ ರಾಜಧಾನಿಯಲ್ಲಿ ಮಾಲಿನ್ಯ ನಿಯಂತ್ರಣ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದ ಬಳಿಕ ಮಾತನಾಡಿದ ಅವರು, 'ವಾಹನಗಳಿಂದ ಉಂಟಾಗುವ ಹೊಗೆ ಮತ್ತು ಮಾಲಿನ್ಯ ನಿಯಂತ್ರಣಕ್ಕೆ ಸರ್ಕಾರವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ' ಎಂದು ಹೇಳಿದರು.

ಹಳೆಯ ವಾಹನಗಳಿಗೆ ನಿರ್ಬಂಧ, ಸಾರ್ವಜನಿಕ ಸಾರಿಗೆಯಾಗಿ ವಿದ್ಯುತ್ ಚಾಲಿತ ವಾಹನ ಬಳಕೆ ಸೇರಿದಂತೆ ಹಲವು ಅಂಶಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

'ಪೆಟ್ರೋಲ್ ಬಂಕ್‌ಗಳಲ್ಲಿ ಸಾಧನವೊಂದನ್ನು ಅಳವಡಿಸುತ್ತೇವೆ. ಅದು 15 ವರ್ಷದ ಹಳೆಯ ವಾಹನಗಳನ್ನು ಗುರುತಿಸಲಿದೆ. ಅಂಥ ವಾಹನಗಳಿಗೆ ಇಂಧನ ನೀಡುವುದಿಲ್ಲ. ಈ ನಿರ್ಧಾರದ ಬಗ್ಗೆ ಕೇಂದ್ರ ಪೆಟ್ರೋಲಿಯಂ ಸಚಿವಾಲಯಕ್ಕೂ ಮಾಹಿತಿ ನೀಡುತ್ತೇವೆ ಎಂದು ಅವರು ತಿಳಿಸಿದರು.

ದೆಹಲಿಯಲ್ಲಿ ಮಾಲಿನ್ಯ ನಿಯಂತ್ರಣಕ್ಕಾಗಿ ಅತಿ ಎತ್ತರದ ಕಟ್ಟಡಗಳು, ಹೋಟೆಲ್‌ಗಳು, ವಾಣಿಜ್ಯ ಸಂಕೀರ್ಣಗಳು ಕಡ್ಡಾಯವಾಗಿ 'ಆ್ಯಂಟಿ ಸ್ಮಾಗ್ ಗನ್' (ನೀರು ಸಿಂಪಡಣೆ ಮಾಡುವ ಸಾಧನ) ಯಂತ್ರಗಳನ್ನು ಅಳವಡಿಸಬೇಕು ಎಂದು ಅವರು ತಿಳಿಸಿದರು.

ಈ ವರ್ಷಾಂತ್ಯದ ವೇಳೆಗೆ ಅಸ್ತಿತ್ವದಲ್ಲಿರುವ ಶೇ 90ರಷ್ಟು ಸಿಎನ್‌ಜಿ ಆಧಾರಿತ ಸಾರ್ವಜನಿಕ ಬಸ್‌ಗಳ ಬದಲಾಗಿ ಎಲೆಕ್ಟ್ರಿಕ್ ಬಸ್‌ಗಳು ರಸ್ತೆಗೆ ಇಳಿಯಲಿವೆ ಎಂದರು.

ಮುಖ್ಯಾಂಶಗಳು

- ಪರಿಸರ ಸಚಿವ ಮನ್‌ಜಿಂದರ್ ಸಿಂಗ್ ಸಿರ್ಸಾ ಹೇಳಿಕೆ
- ಹಳೆಯ ವಾಹನ ಗುರುತಿಸಲು ಬಂಕ್‌ಗಳಲ್ಲಿ ಸಾಧನ ಅಳವಡಿಕೆ

'ಎನ್‌ಡಿಎ ಸರ್ಕಾರ ಬಿಹಾರ ಜನರಿಗೆ ಹೊರೆ'

ಪಟ್ನಾ (ಪಿಟಿಐ): ಬಿಹಾರದಲ್ಲಿ 15 ವರ್ಷ ಮೀರಿದ ವಾಹನಗಳನ್ನು ನಿಷೇಧಿಸಲಾಗಿದೆ. ಅದೇ ರೀತಿ ಎರಡು ದಶಕಗಳ ಕಾಲ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವನ್ನು ಬದಲಾಯಿಸಲು ಇದು ಸಕಾಲ ಎಂದು ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಶನಿವಾರ ಹೇಳಿದರು.

ತೇಜಸ್ವಿ ಯಾದವ್

ರಾಜ್ಯ ಸರ್ಕಾರವು ಬಿಹಾರದ ಜನತೆಗೆ ಹೊರೆಯಾಗಿ ಪರಿಣಮಿಸಿದೆ ಎಂದು ಅವರು ಹೇಳಿದರು.

'ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ, 20 ವರ್ಷಗಳಿಂದ ಅಧಿಕಾರದಲ್ಲಿರುವ ಎನ್‌ಡಿಎ ಸರ್ಕಾರವು ತುಕ್ಕುಹಿಡಿದ ವಾಹನದಂತಾಗಿದೆ. ಈ ಸರ್ಕಾರವನ್ನು ಬದಲಾಯಿಸಬೇಕಿದೆ' ಎಂದು ಅವರು 'ಎಕ್ಸ್' ಮೂಲಕ ಹೇಳಿದರು.

'ಈ ಸರ್ಕಾರವು 20 ವರ್ಷಗಳಲ್ಲಿ ಎರಡು ಪೀಳಿಗೆಯ ಬದುಕನ್ನು ಹಾಳು ಮಾಡಿದೆ. ಬಿಹಾರದ ಯುವಕರು ಈ ಶಿಥಿಲವಾದ, ಅನಾರೋಗ್ಯಕರ ಮತ್ತು ಅವಿಶ್ವಾಸನೀಯ ಸರ್ಕಾರವನ್ನು ತೆಗೆದುಹಾಕಲು ಸಂಕಲ್ಪ ಮಾಡಿದ್ದಾರೆ. ಹೊಸ ಚಿಂತನೆ, ಹೊಸ ದೃಷ್ಟಿಕೋನ, ಹೊಸ ಹುರುಪು ಮತ್ತು ಹೊಸ ದಿಕ್ಕನ್ನು ತೋರುವ, ಉದ್ಯೋಗ ಮತ್ತು ಅಭಿವೃದ್ಧಿಯನ್ನು ಆದ್ಯತೆಯಾಗಿ ಪರಿಗಣಿಸುವ ಸರ್ಕಾರ ಸ್ಥಾಪನೆಗೆ ಸಜ್ಜಾಗಿದ್ದಾರೆ' ಎಂದು ಅವರು ತಿಳಿಸಿದರು.

ಬಳ್ಳಾರಿ: 8,000 ಕೋಳಿ ಸಾವು

ಒಂದನೇ ಪುಟದಿಂದ...

'ಜಿಲ್ಲೆಯಲ್ಲಿ ಹಕ್ಕಿ ಜ್ವರ ತಡೆಯಲು ಮತ್ತು ಪರಿಶೀಲಿಸಲು ಪಶು ಸಂಗೋಪನಾ ಇಲಾಖೆಯು 10 ತಂಡಗಳನ್ನು ರಚಿಸಿದೆ. ಈ ತಂಡಗಳು ನಿತ್ಯ ಇಲಾಖೆಗೆ ವರದಿ ನೀಡಲಿವೆ. ಜಿಲ್ಲೆಯು ಆಂಧ್ರ ಪ್ರದೇಶದೊಂದಿಗೆ ಗಡಿ ಹಂಚಿಕೊಂಡಿದ್ದು, ಚೆಕ್‌ಪೋಸ್ಟ್‌ಗಳಲ್ಲೂ ಪರಿಶೀಲನೆ ನಡೆದಿದೆ. ಬಳ್ಳಾರಿಯಲ್ಲಿ ಒಟ್ಟು 74 ಕೋಳಿ ಫಾರಂಗಳಿವೆ. 14 ಮೊಟ್ಟೆ ಸಂವರ್ಧನಾ ಕೇಂದ್ರಗಳಿವೆ. ಇವುಗಳ ಮೇಲೆ ನಿಗಾ ವಹಿಸಲಾಗಿದೆ' ಎಂದರು.

ಕೋಳಿ ಮಾರಾಟ, ಆಹಾರ ನಿಷೇಧ: ಸಂಡೂರು ತಾಲ್ಲೂಕಿನ ಕುರೇಕುಪ್ಪದ ಜಾನುವಾರು ಸಂವರ್ಧನಾ ಕೇಂದ್ರದಲ್ಲಿ ಹಕ್ಕಿಜ್ವರದಿಂದ 2,400 ಕೋಳಿಗಳು ಸಾವಿಗೀಡಾಗಿದ್ದರಿಂದ ಕುರೇಕುಪ್ಪ ಪುರಸಭೆ ಮತ್ತು ತೋರಣಗಲ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೋಳಿ ಮತ್ತು ಮೊಟ್ಟೆ ಮಾರಾಟ ನಿಷೇಧಿಸಲಾಗಿದೆ. ಹೋಟೆಲ್ ಮತ್ತು ಡಾಬಾಗಳಲ್ಲಿ, ರಸ್ತೆ ಬದಿಯ ತಳ್ಳುವ ಬಂಡಿಗಳಲ್ಲಿ ಕೋಳಿ ಮಾಂಸ ಮತ್ತು ಮೊಟ್ಟೆ ಬಳಸಿ, ಆಹಾರ ಪದಾರ್ಥ ಸಿದ್ಧಪಡಿಸದಂತೆ ಸೂಚಿಸಲಾಗಿದೆ.

ಸೆರೆಸಿಕ್ಕ ಮೂರು ನಾಟಿ ಕೋಳಿ: ನಿಟ್ಟುಸಿರು ಬಿಟ್ಟ ಅಧಿಕಾರಿಗಳು

ಚಿಕ್ಕಬಳ್ಳಾಪುರ: ವರದಹಳ್ಳಿಯಲ್ಲಿ ಶನಿವಾರವೂ ಮೂರು ನಾಟಿ ಕೋಳಿ ಹಿಡಿಯುವ ಮೂಲಕ 'ಆಪರೇಷನ್ ಕೋಳಿ' ಕಾರ್ಯಾಚರಣೆಗೆ ತೆರೆಬಿದ್ದಿದೆ.

ಹಕ್ಕಿಜ್ವರದ ಭೀತಿ ಕಾರಣ ಗ್ರಾಮದ ರೈತರ ಮನೆಗಳಲ್ಲಿ ಸಾಕಿದ್ದ ಎಲ್ಲ ಕೋಳಿಗಳ ಹತ್ಯೆಗೆ ಪಶುಸಂಗೋಪನಾ ಇಲಾಖೆ ಮುಂದಾಗಿತ್ತು. ಶುಕ್ರವಾರ ರಾತ್ರಿಯೇ ಗ್ರಾಮದ ಎಲ್ಲ ಕೋಳಿಗಳನ್ನು ಸಾಮೂಹಿಕವಾಗಿ ಕೊಂದು ಗುಂಡಿ ತೋಡಿ ಹೂಳಲಾಗಿತ್ತು. ಎಲ್ಲ ಕೋಳಿಗಳನ್ನು ಹತ್ಯೆ ಮಾಡಲಾಗಿದೆ ಎಂದು ಅಧಿಕಾರಿಗಳು ಬಗೆದಿದ್ದರು.

ಆದರೆ, ಶನಿವಾರ ಬೆಳಿಗ್ಗೆ ಗ್ರಾಮದಲ್ಲಿ ಮೂರು ಕೋಳಿ ಪ್ರತ್ಯಕ್ಷವಾದವು. ತಕ್ಷಣವೇ ಗ್ರಾಮದ ಕೆಲವರು ಈ ಕೋಳಿಗಳನ್ನು ಹಿಡಿದು ಸಾಯಿಸಲು ಮುಂದಾದರು. ಆದರೆ, ಅವು ಕೈಗೆ ಸಿಗದೆ ತಪ್ಪಿಸಿಕೊಂಡಿದ್ದವು. ಕೊನೆಗೆ ಮೂರು ಕೋಳಿಗಳನ್ನು ಹಿಡಿದು ಕೊಲ್ಲಲಾಯಿತು.

ಇದರೊಂದಿಗೆ ಗ್ರಾಮದ ಎಲ್ಲ 440 ಕೋಳಿಗಳನ್ನೂ ಹತ್ಯೆ ಮಾಡಿದಂತಾಗಿದೆ. ಗ್ರಾಮದಲ್ಲಿ ಔಷಧ ಸಿಂಪಡಣೆ ಮಾಡಲಾಗುತ್ತಿದೆ.

'ಒಂದು ಕೋಳಿಗೆ ₹90 ಪರಿಹಾರ ನೀಡುವುದಾಗಿ ಅಧಿಕಾರಿಗಳು ಹೇಳುತ್ತಿದ್ದಾರೆ. ಕೆ.ಜಿ. ನಾಟಿ ಕೋಳಿ ಮಾಂಸಕ್ಕೆ ₹500–₹600 ಬೆಲೆ ಇದೆ. ಎರಡರಿಂದ ಮೂರು ಕೆ.ಜಿ. ತೂಗುವ ಒಂದು ನಾಟಿ ಕೋಳಿ ಮಾರುಕಟ್ಟೆಯಲ್ಲಿ ಸಾವಿರ ರೂಪಾಯಿಗೂ ಹೆಚ್ಚು ಬೆಲೆಗೆ ಮಾರಾಟವಾಗುತ್ತದೆ. ಅದಕ್ಕೆ ಸರ್ಕಾರ ಇಷ್ಟು ಕಡಿಮೆ ಪರಿಹಾರ ಕೊಟ್ಟರೆ ಹೇಗೆ' ಎಂದು ಗ್ರಾಮಸ್ಥರು ಪ್ರಶ್ನಿಸಿದರು.

ಎ ಗುಂಪಿನಲ್ಲಿ ಅಗ್ರಸ್ಥಾನಕ್ಕಾಗಿ ಭಾರತ–ಕಿವೀಸ್ ಪೈಪೋಟಿ ಇಂದು • ಶಮಿ, ರಾಹುಲ್‌ಗೆ ವಿಶ್ರಾಂತಿ ಸಾಧ್ಯತೆ

‘ಬೆಂಚ್ ಶಕ್ತಿ’ಗೆ ಅವಕಾಶದ ನಿರೀಕ್ಷೆ

ನಾಯಕ ರೋಹಿತ್ ಶರ್ಮಾ

ದುಬೈ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿರುವ ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಭಾನುವಾರ ಎ ಗುಂಪಿನ ಕೊನೆಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕಾಗಿ ಪೈಪೋಟಿ ನಡೆಸಲಿವೆ.

ನಾಲ್ಕರ ಘಟ್ಟದಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಅಥವಾ ದಕ್ಷಿಣ ಆಫ್ರಿಕಾ ವಿರುದ್ಧ ಆಡಲಿದೆ. ಎರಡೂ ತಂಡಗಳು ಬಲಾಢ್ಯವಾಗಿವೆ. ಆದ್ದರಿಂದ ನ್ಯೂಜಿಲೆಂಡ್ ಎದುರಿನ ಈ ಪಂದ್ಯವು ರೋಹಿತ್ ಶರ್ಮಾ ಬಳಗಕ್ಕೆ ಪೂರ್ವಸಿದ್ಧತೆ ಪರೀಕ್ಷೆಯಾಗಲಿದೆ. ಸ್ಪಿನ್ ಬೌಲಿಂಗ್ ಎದುರು ಆಡುವ ಕೌಶಲಗಳನ್ನು ಉತ್ತಮಪಡಿಸಿಕೊಳ್ಳಲು ಬ್ಯಾಟರ್‌ಗಳು ಒತ್ತು ನೀಡಲಿದ್ದಾರೆ.

ದುಬೈನಲ್ಲಿರುವ ಪಿಚ್‌ಗಳು ಸ್ಪಿನ್ ಬೌಲರ್‌ಗಳಿಗೆ ಹೆಚ್ಚು ನೆರವು ನೀಡು ವುದರಿಂದ ಭಾರತದ ಸ್ಪಿನ್ನರ್ ಗಳೂ ಬ್ಯಾಟರ್‌ಗಳಿಗೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ. ವಿರಾಟ್ ಕೊಹ್ಲಿ ಅವರು ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಶತಕ ಹೊಡೆದು ಲಯಕ್ಕೆ ಮರಳಿದ್ದು ತಂಡ ದಲ್ಲಿ ನವಶಕ್ತಿ ತುಂಬಿದೆ. ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಅವರು ಯಥಾಪ್ರಕಾರ ಉತ್ತಮ ಆರಂಭ ನೀಡಿದರೆ, ಕೊಹ್ಲಿ , ಶ್ರೇಯಸ್ ಅಯ್ಯರ್ ಹಾಗೂ ಹಾರ್ದಿಕ್ ಪಾಂಡ್ಯ ಅವರು ಮೊತ್ತ ಹೆಚ್ಚಿಸುವ ಕಾರ್ಯ ಮಾಡಬಹುದು.

ಮುಖ್ಯಾಂಶಗಳು

- ಕುಲದೀಪ್ ಯಾದವ್ ಬದಲು ಚಕ್ರವರ್ತಿಗೆ ಅವಕಾಶ ಸಾಧ್ಯತೆ
- ರಿಷಭ್ ಪಂತ್ ಕಣಕ್ಕಿಳಿಯುವ ಸಾಧ್ಯತೆ
- ಮಾರ್ಚ್ 4ರಂದು ಸೆಮಿಫೈನಲ್

ಈ ಪಂದ್ಯದಲ್ಲಿ ಕೆ.ಎಲ್. ರಾಹುಲ್ ಅವರಿಗೆ ವಿಶ್ರಾಂತಿ ಕೊಟ್ಟು ರಿಷಭ್ ಪಂತ್‌ಗೆ ವಿಕೆಟ್‌ಕೀಪಿಂಗ್ ಹೊಣೆ ನೀಡಬಹುದು.

ಬೌಲಿಂಗ್ ವಿಭಾಗದಲ್ಲಿ ಶಮಿ ಅವರಿಗೆ ವಿಶ್ರಾಂತಿ ನೀಡಿ ಅರ್ಷದೀಪ್ ಸಿಂಗ್ ಮತ್ತು ಹರ್ಷಿತ್ ರಾಣಾ ವೇಗದ ವಿಭಾಗದ ಹೊಣೆ ನಿಭಾಯಿಸುವ ಸಾಧ್ಯತೆ ಇದೆ. ಕಳೆದ ಪಂದ್ಯದಲ್ಲಿ ಶಮಿ ಕಾಲುನೋವು ಅನುಭವಿಸಿದ್ದರು. ಸ್ಪಿನ್ ವಿಭಾಗದಲ್ಲಿ ಕುಲದೀಪ್ ಯಾದವ್ ಅಥವಾ ರವೀಂದ್ರ ಜಡೇಜ ಅವರನ್ನು ಬಿಟ್ಟು, ವರುಣ ಚಕ್ರವರ್ತಿಗೆ ಅವಕಾಶ ನೀಡುವ ಸಾಧ್ಯತೆ ಇದೆ.

ನ್ಯೂಜಿಲೆಂಡ್ ತಂಡವು ಉತ್ತಮ ಸಮತೋಲನ ಹೊಂದಿದೆ. ಮಿಚೆಲ್ ಸ್ಯಾಂಟನರ್ ನಾಯಕತ್ವದ ತಂಡದಲ್ಲಿ ವಿಲ್ ಯಂಗ್, ಟಾಮ್ ಲೇಥಮ್ ಮತ್ತು ರಚಿನ್ ರವೀಂದ್ರ ಈಗಾಗಲೇ ಶತಕ ಹೊಡೆದು ಉತ್ತಮ ಲಯದಲ್ಲಿದ್ದಾರೆ.


ನ್ಯೂಜಿಲೆಂಡ್ ತಂಡದ ಆಲ್‌ರೌಂಡರ್ ರಚಿನ್ ರವೀಂದ್ರ

ಲಿಯಾಮ್ ಲಿವಿಂಗ್‌ಸ್ಟೋನ್, ಗ್ಲೆನ್ ಫಿಲಿಪ್ಸ್ ಮತ್ತು ಡ್ಯಾರಿಲ್ ಮಿಚೆಲ್ ಅಬ್ಬರದ ಆಟದ ಮೂಲಕ ತಂಡದ ಸ್ಕೋರ್ ಹೆಚ್ಚಿಸುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಅನುಭವಿ ಕೇನ್ ವಿಲಿಯಮ್ಸನ್ ಮಾತ್ರ ಲಯಕ್ಕೆ ಮರಳಿಲ್ಲ. ಅದರಿಂದ ಬೆಂಚ್‌ನಲ್ಲಿರುವ ಯುವ ಆಟಗಾರರಿಗೆ ಅವಕಾಶ ನೀಡುವ ಸಾಧ್ಯತೆ ಹೆಚ್ಚಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ನೆಟ್ ಬೌಲರ್‌ಗೆ ಶ್ರೇಯಸ್ ಕಾಣಿಕೆ

ಶ್ರೇಯಸ್ ಅಯ್ಯರ್

ದುಬೈ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಐಸಿಸಿಯು ನಿಯೋಜಿಸಿರುವ ನೆಟ್ ಬೌಲರ್ ಜಸ್‌ಕಿರಣ್ ಸಿಂಗ್ ಅವರಿಗೆ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರು ಒಂದು ಜೊತೆ ಸ್ಪೈಕ್ಸ್ (ಬೂಟು) ಉಡುಗೊರೆ ನೀಡಿದರು.

ವೃತ್ತಿಯಿಂದ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಜಸ್‌ಕಿರಣ್ ಅವರಿಗೆ ಕ್ರಿಕೆಟ್ ಎಂದರೆ ಅಪಾರ ಪ್ರೀತಿ.

‘ಶ್ರೇಯಸ್ ಭಾಯ್ ನನ್ನ ಬಳಿ ಬಂದು ಬೂಟುಗಳ ಅಳತೆ ಎಷ್ಟು ಎಂದು ಪ್ರಶ್ನಿಸಿದರು. ನಾನು ಅದಕ್ಕೆ 10 ಎಂದು ಉತ್ತರಿಸಿದೆ. ಅದಕ್ಕವರು ನಿಮಗಾಗಿ ನನ್ನ ಬಳಿ ಏನೋ ವಿಶೇಷ ಇದೆ ಎಂದರು. ಸ್ಪೈಕ್ಸ್ ನೀಡಿದರು. ಇದು ನಿಜವಾಗಿಯೂ ನನಗೆ ಬಹಳ ಸಂತಸವಾಗಿದೆ’ ಎಂದು ಜಸ್‌ಕಿರಣ್ ಅವರು ಪಿಟಿಐ ವಿಡಿಯೊಸ್‌ಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಐಸಿಸಿಯ ನೆಟ್ ಬೌಲರ್‌ಗಳ ತಂಡದಲ್ಲಿ ಜಸ್‌ಕಿರಣ್ ಅವರು ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಬ್ಯಾಟರ್‌ಗಳಿಗೆ ಬೌಲಿಂಗ್ ಮಾಡಿದ್ದಾರೆ. ಆದರೆ ಭಾರತದ ಎದುರಿಗೆ ಬೌಲಿಂಗ್ ಮಾಡುವ ಅವಕಾಶ ಸಿಕ್ಕಿಲ್ಲವೆಂದು ಬೇಸರಗೊಂಡಿದ್ದರು. ಭಾರತ ತಂಡದಲ್ಲಿಯೇ ಹೆಚ್ಚು ಮಂದಿ ಆಫ್‌ಸ್ಪಿನ್ನರ್‌ಗಳು ಇದ್ದ ಕಾರಣ ಜಸ್‌ಕಿರಣ್ ಅವರಿಗೆ ಅವಕಾಶ ಸಿಕ್ಕಿರಲಿಲ್ಲ.

ವಿರಾಟ್ @300

ವಿರಾಟ್ ಕೊಹ್ಲಿ ಅವರು ಭಾನುವಾರ ನ್ಯೂಜಿಲೆಂಡ್ ವಿರುದ್ಧ ಕಣಕ್ಕಿಳಿದರೆ ‘ತ್ರಿಶತಕ’ ಪೂರೈಸಲಿದ್ದಾರೆ. ಈ ಪಂದ್ಯವು ಕೊಹ್ಲಿಗೆ 300ನೇ ಅಂತರರಾಷ್ಟ್ರೀಯ ಏಕದಿನ ಪಂದ್ಯವಾಗಿದೆ.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಈಚೆಗೆ ನಡೆದ ಪಾಕಿಸ್ತಾನದ ಎದುರಿನ ಪಂದ್ಯದಲ್ಲಿ ಅವರು ಶತಕ ಗಳಿಸಿದ್ದರು. ಅದರೊಂದಿಗೆ ಲಯಕ್ಕೆ ಮರಳಿದ್ದರು. 300ನೇ ಪಂದ್ಯದಲ್ಲಿಯೂ ಅವರು ಮತ್ತೊಂದು ಶತಕ ಸಿಡಿಸುವರೇ ಎಂಬ ಕುತೂಹಲ ಅಭಿಮಾನಿಗಳಲ್ಲಿ ಗರಿಗೆದರಿದೆ. 2008ರಲ್ಲಿ ದಂಬುಲಾದಲ್ಲಿ ಶ್ರೀಲಂಕಾ ಎದುರು ಕೊಹ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು.

ವಿರಾಟ್ ಏಕದಿನ ಕ್ರಿಕೆಟ್ ಸಾಧನೆ

ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಬೌಂಡರಿ
299	14,085	183	51	73	1,318

ಸಿಕ್ಸರ್	ಸರಾಸರಿ	ಸ್ಟ್ರೈಕ್‌ರೇಟ್	ವಯಸ್ಸು	ಕ್ಯಾಚ್
152	58.20	93.41	36	158

300ಕ್ಕಿಂತ ಹೆಚ್ಚು ಪಂದ್ಯ ಆಡಿದ ಭಾರತೀಯರು

ಆಟಗಾರ	ಅವಧಿ	ಪಂದ್ಯ	ರನ್
ಸಚಿನ್ ತೆಂಡೂಲ್ಕರ್	1989-2012	463	18426
ಮಹೇಂದ್ರಸಿಂಗ್ ಧೋನಿ	2004-19	347	10599
ರಾಹುಲ್ ದ್ರಾವಿಡ್	1996-2011	340	10768
ಮೊಹಮ್ಮದ್ ಅಜರುದ್ದೀನ್	1985-2000	334	9378
ಸೌರವ್ ಗಂಗೂಲಿ	1992-2007	308	11221
ಯುವರಾಜ್ ಸಿಂಗ್	2000-17	301	8609

ಕರುಣ್ ನಾಯರ್ ಅಜೇಯ ಶತಕ

ರಣಜಿ ಟ್ರೋಫಿ ಫೈನಲ್: ಕೇರಳ ವಿರುದ್ಧ ವಿದರ್ಭ ಹಿಡಿತ • ದಾನಿಶ್ ಅರ್ಧಶತಕ

ನಾಗ್ಪುರ (ಪಿಟಿಐ): ಆರಂಭದಲ್ಲಿ ದೊರೆತ ಜೀವದಾನದ ಲಾಭ ಪಡೆದ ಕರುಣ್ ನಾಯರ್ ಅಜೇಯ ಶತಕ ಬಾರಿಸಿ, ವಿದರ್ಭ ತಂಡದ ಸ್ಥಿತಿಯನ್ನು ಬಲಪಡಿಸಿದರು. ಕೇರಳ ವಿರುದ್ಧ ರಣಜಿ ಟ್ರೋಫಿ ಫೈನಲ್ ಪಂದ್ಯದ ನಾಲ್ಕನೇ ದಿನವಾದ ಶನಿವಾರ ವಿದರ್ಭ ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್‌ಗೆ 249 ರನ್ ಬಾರಿಸಿದ್ದು, ಒಟ್ಟಾರೆ 286 ರನ್ ಮುನ್ನಡೆ ಕಟ್ಟಿಕೊಂಡಿದೆ.

ರಣಜಿಯಲ್ಲಿ ನಾಯರ್ ಈ ಋತುವಿನಲ್ಲಿ ನಾಲ್ಕನೇ ಶತಕ ಬಾರಿಸಿದರು. ವಿಜಯ್ ಹಜಾರೆ ಟ್ರೋಫಿಯಲ್ಲಿ ಅವರು ಐದು ಶತಕ ಬಾರಿಸಿದ್ದರು. ದಿನದಾಟ ಮುಗಿದಾಗ ಅವರು 280 ಎಸೆತಗಳ ಇನಿಂಗ್ಸ್‌ನಲ್ಲಿ ಔಟಾಗದೇ 132 ರನ್ ಬಾರಿಸಿದ್ದಾರೆ. ಇದರಲ್ಲಿ ಎರಡು ಸಿಕ್ಸರ್, ಹತ್ತು ಬೌಂಡರಿಗಳಿವೆ. ವಿದರ್ಭ ಮೊದಲ ಇನಿಂಗ್ಸ್‌ನಲ್ಲಿ 37 ರನ್‌ಗಳ ಮುನ್ನಡೆ ಪಡೆದಿತ್ತು.

ಐದು ದಿನಗಳ ಪಂದ್ಯದಲ್ಲಿ ಒಂದು ದಿನವಷ್ಟೇ ಉಳಿದಿದ್ದು, ಸುಭದ್ರ ಸ್ಥಿತಿಯಲ್ಲಿರುವ ಆತಿಥೇಯರು ಮೂರನೇ ಬಾರಿ ಟ್ರೋಫಿ ಎತ್ತಿ ಹಿಡಿಯಲು ಸಜ್ಜಾಗಿದ್ದಾರೆ.

ಶತಕ ಪೂರೈಸಿದ ವಿದರ್ಭ ತಂಡದ ಕರುಣ್ ನಾಯರ್ ಅವರನ್ನು ಕೇರಳ ತಂಡದ ನಾಯಕ ಸಚಿನ್ ಬೇಬಿ ಅಭಿನಂದಿಸಿದ್ದು ಹೀಗೆ ಪಿಟಿಐ ಚಿತ್ರ

ಜಮ್ತಾದ ವಿಸಿಎ ಕ್ರೀಡಾಂಗಣದಲ್ಲಿ ಶನಿವಾರ ಎರಡನೇ ಇನಿಂಗ್ಸ್ ಆರಂಭಿಸಿದ ವಿದರ್ಭ ತಂಡವು ಪಾರ್ಥ ರೇಖಡೆ (1) ಮತ್ತು ಧ್ರುವ್ ಶೋರೆ (5) ಅವರನ್ನು ಬೇಗನೇ ಕಳೆದುಕೊಂಡಿತ್ತು. ಕ್ರಮವಾಗಿ ಜಲಜ್ ಸಕ್ಸೇನಾ ಮತ್ತು ನಿಧೀಶ್ ಈ ವಿಕೆಟ್ ಪಡೆದಿದ್ದರು. ಆದರೆ ಕರುಣ್ ನಾಯರ್ ಮತ್ತು ದಾನಿಶ್ ಮಾಲೇವರ್ (73, 162 ಎಸೆತ, 4x5) ಮತ್ತೊಮ್ಮೆ ವಿದರ್ಭ ಪಾಲಿಗೆ ಆಪತ್ಬಾಂಧವರಾದರು.

19ನೇ ಓವರಿನಲ್ಲಿ ನಾಯರ್ ಜೀವದಾನ ಪಡೆದರು. 31 ರನ್ ಗಳಿಸಿದ್ದಾಗ, ವೇಗಿ ಏಡನ್ ಆಪಲ್ ಟೋಮ್ ಬೌಲಿಂಗ್‌ನಲ್ಲಿ ಎಗರಿದ ಎಸೆತವನ್ನು ಆಡಲು ಹೋದಾಗ ಬ್ಯಾಟಿಗೆ ತಾಗಿದ ಚೆಂಡನ್ನು ಸ್ಲಿಪ್‌ನಲ್ಲಿದ್ದ ಅಕ್ಷಯ್ ಚಂದ್ರನ್ ಕ್ಯಾಚ್ ಬಿಟ್ಟರು. ಆದರೆ ಈ ಜೀವದಾನ ದುಬಾರಿಯಾಯಿತು. ಮರುಹೋರಾಟದ ಕೇರಳದ ಆಸೆ ದೂರವಾಯಿತು. ನಾಯರ್– ಮಾಲೇವರ್ ಜೋಡಿ 182 ರನ್ ಜೊತೆಯಾಟದಲ್ಲಿ ಭಾಗಿಯಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 379; ಕೇರಳ: 342; ಎರಡನೇ ಇನಿಂಗ್ಸ್: ವಿದರ್ಭ: 90 ಓವರುಗಳಲ್ಲಿ 4 ವಿಕೆಟ್‌ಗೆ 249 (ದಾನಿಶ್ ಮಾಲೇವರ್ 73, ಕರುಣ್ ನಾಯರ್ ಬ್ಯಾಟಿಂಗ್ 132, ಯಶ್ ರಾಥೋಡ್ 24; ನಿಧೀಶ್ 37ಕ್ಕೆ1, ಅಕ್ಷಯ್ ಚಂದ್ರನ್ 29ಕ್ಕೆ1).

ವಾನ್‌ಡರ್ ಡಸೆ, ಕ್ಲಾಸೆನ್ ಅರ್ಧ ಶತಕ • ಇಂಗ್ಲೆಂಡ್ ತಂಡಕ್ಕೆ ಸತತ ಮೂರನೇ ಸೋಲು

ಗೆಲುವಿನೊಡನೆ ಸೆಮಿಗೆ ದಕ್ಷಿಣ ಆಫ್ರಿಕಾ

ಕರಾಚಿ (ಪಿಟಿಐ): ಇಂಗ್ಲೆಂಡ್ ತಂಡದ ಪರದಾಟ ಮುಂದುವರಿಯಿತು. ಜೋಸ್ ಬಟ್ಲರ್ ಬಳಗದ ಮೇಲೆ ಶನಿವಾರ ನಡೆದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಏಳು ವಿಕೆಟ್‌ಗಳ ಸುಲಭ ಗೆಲುವು ಪಡೆದ ದಕ್ಷಿಣ ಆಫ್ರಿಕಾ ತಂಡ ‘ಬಿ’ ಗುಂಪಿನಲ್ಲಿ ಅಗ್ರಸ್ಥಾನದೊಡನೆ ಸೆಮಿಫೈನಲ್ ತಲುಪಿತು.

ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಇಂಗ್ಲೆಂಡ್ ತಂಡವನ್ನು ಕೇವಲ 179 ರನ್‌ಗಳಿಗೆ ಆಲೌಟ್ ಮಾಡಿದ ಹರಿಣಗಳ ಪಡೆ, ನಂತರ 20.5 ಓವರುಗಳು ಬಾಕಿಯಿರುವಂತೆ 3 ವಿಕೆಟ್‌ಗೆ 181 ರನ್ ಹೊಡೆಯಿತು. ಈ ಮೊದಲೇ ಹೊರಬಿದ್ದಿದ್ದ ಇಂಗ್ಲೆಂಡ್ ಟೂರ್ನಿಯಲ್ಲಿ ಆಡಿದ ಮೂರೂ ಪಂದ್ಯಗಳಲ್ಲಿ ಮುಖಭಂಗ ಅನುಭವಿಸಿತು.

ದಕ್ಷಿಣ ಆಫ್ರಿಕಾ 3 ಪಂದ್ಯಗಳಲ್ಲಿ ಎರಡು ಗೆದ್ದುಕೊಂಡಿತು. ಒಂದು ಪಂದ್ಯ ಮಳೆಯ ಪಾಲಾಗಿದ್ದು, 5 ಪಾಯಿಂಟ್‌ಗಳೊಡನೆ ಅಗ್ರಸ್ಥಾನ ಪಡೆಯಿತು. ಆಸ್ಟ್ರೇಲಿಯಾ (4 ಪಾಯಿಂಟ್) ಎರಡನೇ ಸ್ಥಾನ ಗಳಿಸಿತು. ಅಫ್ಗಾನಿಸ್ತಾನ (3 ಪಾಯಿಂಟ್) ಮೂರನೇ ಸ್ಥಾನ ಪಡೆಯಿತು.

ಮಾರ್ಕೊ ಯಾನ್ಸನ್ (39ಕ್ಕೆ3), ವಿಯಾನ್ ಮುಲ್ಡರ್ (25ಕ್ಕೆ3) ದಾಳಿಗೆ ಸಿಲುಕಿದ ಇಂಗ್ಲೆಂಡ್ ಕೇವಲ 179 ರನ್‌ಗಳಿಗೆ ಉರುಳಿತು. 180 ರನ್‌ಗಳ ಗುರಿ ಬೆಂಬತ್ತಿದ ದಕ್ಷಿಣ ಆಫ್ರಿಕಾ ತಂಡ, ಟ್ರಿಸ್ಟನ್ ಸ್ಟಬ್ಸ್ (0) ಮತ್ತು ರಯಾನ್ ರಿಕೆಲ್ಟನ್ (27) ಅವರನ್ನು 41 ರನ್‌ಗಳಾಗುಷ್ಟರಲ್ಲಿ ಕಳೆದುಕೊಂಡಿತು. ಆದರೆ ರಸಿ ವಾನ್‌ಡರ್ ಡಸೆ (ಔಟಾಗದೇ 72, 87 ಎಸೆತ, 4x6, 6x3) ಮತ್ತು ಹೆನ್ರಿಚ್ ಕ್ಲಾಸೆನ್ (64, 56 ಎಸೆತ, 4x11) ಅವರು ಮೂರನೇ ವಿಕೆಟ್‌ಗೆ 127 ರನ್ ಸೇರಿಸಿ ತಂಡವನ್ನು ಗೆಲುವಿನ ಹಾದಿಗೆ ಒಯ್ದರು.

ಮಾರ್ಕೊ ಯಾನ್ಸನ್ ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 38.2 ಓವರುಗಳಲ್ಲಿ 179 (ಬೆನ್ ಡಕೆಟ್ 24, ಜೋ ರೂಟ್ 37, ಜೋಫ್ರಾ ಆರ್ಚರ್ 25; ಮಾರ್ಕೊ ಯಾನ್ಸನ್ 39ಕ್ಕೆ3, ವಿಯಾನ್ ಮುಲ್ಡರ್ 25ಕ್ಕೆ3, ಕೇಶವ ಮಹಾರಾಜ್ 35ಕ್ಕೆ2); **ದಕ್ಷಿಣ ಆಫ್ರಿಕಾ:** 29.1 ಓವರುಗಳಲ್ಲಿ 3 ವಿಕೆಟ್‌ಗೆ 181 (ರಯಾನ್ ರಿಕೆಲ್ಟನ್ 27, ರಸಿ ವಾನ್‌ಡರ್ ಡಸೆ ಔಟಾಗದೇ 72, ಹೆನ್ರಿಚ್ ಕ್ಲಾಸೆನ್ 64; ಆರ್ಚರ್ 55ಕ್ಕೆ2); **ಪಂದ್ಯದ ಆಟಗಾರ:** ಮಾರ್ಕೊ ಯಾನ್ಸನ್

ಡಬ್ಲ್ಯುಪಿಎಲ್: ಬೆಂಗಳೂರಿನಲ್ಲಿ ಡೆಲ್ಲಿ ದರಬಾರು

• ಗಿರೀಶ ದೊಡ್ಡಮನಿ

ಬೆಂಗಳೂರು: ವಾರಾಂತ್ಯದ ರಜೆಯ ಮಜಾ ಸವಿಯಲು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸೇರಿದ್ದ ಕ್ರಿಕೆಟ್‌ಪ್ರೇಮಿಗಳು ಎಲಿಸ್ ಪೆರಿಯ ಚೆಂದದ ಅರ್ಧಶತಕ ಕಣ್ತುಂಬಿಕೊಂಡರು. ಆದರೆ ಅವರಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಜಯವನ್ನು ಸಂಭ್ರಮಿಸುವ ಅವಕಾಶ ಸಿಗಲಿಲ್ಲ.

ಶನಿವಾರ ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಡೆಲ್ಲಿ ಕ್ಯಾಪಿಟಲ್ಸ್ ಎದುರು 9 ವಿಕೆಟ್‌ಗಳಿಂದ ಪರಾಭವಗೊಂಡಿತು. ತವರಿನಂಗಳದಲ್ಲಿ ಸ್ಮೃತಿ ಮಂದಾನ ಬಳಗವು ಸತತ ನಾಲ್ಕನೇ ಪಂದ್ಯ ಸೋತಿತು.

ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬೆಂಗಳೂರು ತಂಡವು ಪೆರಿ (ಔಟಾಗದೇ 60; 47ಎ, 4X3, 6X3) ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 5ಕ್ಕೆ147 ರನ್ ಗಳಿಸಿತು. ಅದಕ್ಕುತ್ತರವಾಗಿ ಡೆಲ್ಲಿ ತಂಡವು 15.3 ಓವರ್‌ಗಳಲ್ಲಿ 1 ವಿಕೆಟ್‌ಗೆ 151 ರನ್ ಗಳಿಸಿತು. ಡೆಲ್ಲಿ ತಂಡದ ಶಫಾಲಿ ವರ್ಮಾ (ಔಟಾಗದೇ 80; 43ಎ, 4X8, 6X4) ಮತ್ತು ಜೆಸ್ ಜೊನಾಸೆನ್ (ಔಟಾಗದೇ 61; 38ಎ; 4X9,6X1) ಅವರು ಅಬ್ಬರಿಸಿದರು. ಡೆಲ್ಲಿ ತಂಡವು ಶುಕ್ರವಾರದ ಪಂದ್ಯದಲ್ಲಿ ಮುಂಬೈ ಎದುರು ಜಯಿಸಿತ್ತು.

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಶಫಾಲಿ ವರ್ಮಾ
ಪ್ರಜಾವಾಣಿ ಚಿತ್ರ:ಎಸ್ .ಕೆ ದಿನೇಶ್

ಆದರೆ, ಹಾಲಿ ಚಾಂಪಿಯನ್ ಆರ್‌ಸಿಬಿ ತಂಡವು ತವರಿನಲ್ಲಿ ಆಡಿದ ಈ ಟೂರ್ನಿಯ ಕೊನೆಯ ಪಂದ್ಯವನ್ನೂ ಸೋತಿತು. ನಾಯಕಿ ಸ್ಮೃತಿ ಮಂದಾನ ವೈಫಲ್ಯ ಈ ಪಂದ್ಯದಲ್ಲಿಯೂ ಮುಂದುವರಿಯಿತು. 2ನೇ ಓವರ್‌ನಲ್ಲಿ ಶಿಖಾ ಪಾಂಡೆ ಎಸೆತವನ್ನು ಬೀಸಿ ಹೊಡೆಯುವ ಯತ್ನದಲ್ಲಿ ಮೆಗ್ ಲ್ಯಾನಿಂಗ್‌ಗೆ ಕ್ಯಾಚ್ ಆದರು. ಸ್ಮೃತಿ ಅವರು ಈ ಟೂರ್ನಿಯಲ್ಲಿ ಇದುವರೆಗೆ ಆಡಿರುವ 6 ಪಂದ್ಯಗಳಲ್ಲಿ (9,81,26,6,10 ಮತ್ತು 8) ಕೇವಲ ಒಂದು ಅರ್ಧಶತಕ ಗಳಿಸಿದ್ದಾರೆ. ತವರಿನಂಗಳದಲ್ಲಿ ಆಡಿದ ನಾಲ್ಕು ಪಂದ್ಯಗಳಲ್ಲಿಯೂ ಅವರ ಬ್ಯಾಟ್‌ನಿಂದ ರನ್ ಹರಿದಿಲ್ಲ.

ಅವರ ಆಟದ ಕೊರತೆಯನ್ನು ಎಲಿಸ್ ಪೆರಿ ತುಂಬಿದರು. ಈ ಟೂರ್ನಿಯಲ್ಲಿ ಆಸ್ಟ್ರೇಲಿಯಾದ ಪೆರಿ ಗಳಿಸಿದ 4ನೇ ಅರ್ಧಶತಕ ಇದು. ಈ ಪೈಕಿ 3 ಬೆಂಗಳೂರಿನಲ್ಲಿಯೇ ದಾಖಲಾಗಿವೆ. ಆರಂಭಿಕ ಆಟಗಾರ್ತಿ ಡೇನಿಯಲ್ ವೈಟ್ ಜಾಜ್ (21; 18ಎ) ಮತ್ತು ಪೆರಿ ಎರಡನೇ ವಿಕೆಟ್ ಜೊತೆಯಾಟದಲ್ಲಿ 45 ರನ್ ಸೇರಿಸಿದರು. ಪೆರಿ ಮತ್ತು ರಾಘವಿ ಬಿಷ್ಟ್ (33; 32ಎ) 3ನೇ ವಿಕೆಟ್ ಜೊತೆಯಾಟದಲ್ಲಿ 66 ರನ್ ಸೇರಿಸಿದರು. ರಾಘವಿಗೆ 10ನೇ ಓವರ್‌ನಲ್ಲಿ ಬೌಂಡರಿ ಲೈನ್‌ನಲ್ಲಿದ್ದ ಫೀಲ್ಡರ್ ನಿಕಿ ಪ್ರಸಾದ್ ಅವರು ಕ್ಯಾಚ್ ಕೈಚೆಲ್ಲಿ ಜೀವದಾನ ನೀಡಿದ್ದರು. ರಾಘವಿ ಎರಡು ಸಿಕ್ಸರ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 5ಕ್ಕೆ147 ಎಲಿಸ್ ಪೆರಿ ಔಟಾಗದೇ 60, ರಾಘವಿ ಬಿಷ್ಟ್ 33, ಜಾರ್ಜಿಯಾ ವೇರ್‌ಹ್ಯಾಮ್ ಔಟಾಗದೇ 12, ಶಿಖಾ ಪಾಂಡೆ 24ಕ್ಕೆ2, ಎನ್. ಚಾರಿಣಿ 28ಕ್ಕೆ2) ಡೆಲ್ಲಿ ಕ್ಯಾಪಿಟಲ್ಸ್: 15.3 ಓವರ್‌ಗಳಲ್ಲಿ 1 ವಿಕೆಟ್‌ಗೆ 151 (ಶಫಾಲಿ ವರ್ಮಾ ಔಟಾಗದೇ 80, ಜೆಸ್ ಜೊನಾಸೆನ್ 61)
ಫಲಿತಾಂಶ: ಡೆಲ್ಲಿ ಕ್ಯಾಪಿಟಲ್‌ಗೆ 9 ವಿಕೆಟ್ ಜಯ.

ಟೆನಿಸ್:ಫೈನಲ್‌ಗೆ ಶಿಂಟಾರೊ, ಹೋಲ್ಟ್

ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡ ಅಗ್ರ ಶ್ರೇಯಾಂಕದ ಅನಿರುದ್ಧ ಚಂದ್ರಶೇಖರ್ (ಬಲಗಡೆ) ಮತ್ತು ತೈವಾನ್‌ನ ರೇ ಹೊ(ಎಡ) ಪ್ರಜಾವಾಣಿ ಚಿತ್ರ:ಎಸ್.ಕೆ.ದಿನೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳನೇ ಶ್ರೇಯಾಂಕದ ಶಿಂಟಾರೊ ಮೊಚಿಝುಕಿ ಅವರು 6-1, 3-6, 6-4 ರಿಂದ ಶ್ರೇಯಾಂಕರಹಿತ ಆಟಗಾರ ಜೇಮ್ಸ್ ಮೆಕ್‌ಕ್ಯಾಬ್ (ಆಸ್ಟ್ರೇಲಿಯಾ) ಅವರನ್ನು ಸೋಲಿಸಿ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದರು.

ಜಪಾನ್‌ನ ಶಿಂಟಾರೊ ಫೈನಲ್‌ನಲ್ಲಿ ಮೂರನೇ ಶ್ರೇಯಾಂಕದ ಬ್ರಾಂಡನ್ ಹೋಲ್ಟ್ ಅವರನ್ನು ಎದುರಿಸಲಿದ್ದಾರೆ.

ಕಬ್ಬನ್ ಪಾರ್ಕ್‌ನ ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಹೋಲ್ಟ್ 6-2, 7-6 (4) ರಿಂದ ಬ್ರಿಟನ್‌ನ ಬಿಲಿ ಹ್ಯಾರಿಸ್ ಅವರನ್ನು ಸೋಲಿಸಿದರು.

ಡಬಲ್ಸ್: ಅಗ್ರ ಶ್ರೇಯಾಂಕದ ಅನಿರುದ್ಧ ಚಂದ್ರಶೇಖರ್ (ಭಾರತ) ಮತ್ತು ರೇ ಹೊ (ತೈವಾನ್) ಅವರು ಡಬಲ್ಸ್‌ನ ಪ್ರಶಸ್ತಿ ಗೆದ್ದುಕೊಂಡರು. ಭಾರತ ತೈವಾನ್ ಆಟಗಾರರ ಜೋಡಿ ಫೈನಲ್‌ನಲ್ಲಿ 6-2, 6-4 ರಿಂದ ಬ್ಲೇಕ್ ಬೇಲ್ಡನ್– ಮ್ಯಾಥ್ಯೂ ಕ್ರಿಸ್ಟೋಫರ್ ರೊಮಿಯೊಸ್ (ಆಸ್ಟ್ರೇಲಿಯಾ) ಅವರನ್ನು ಸೋಲಿಸಿದರು.

ಬಿಎಫ್‌ಸಿಗೆ ಇಂದು ಈಸ್ಟ್ ಬೆಂಗಾಲ್ ಸವಾಲು

ಐಎಸ್‌ಎಲ್: ಕೋಲ್ಕತ್ತದ ತಂಡಕ್ಕೆ ಪ್ಲೇಆಫ್ ಗುರಿ

ಕೋಲ್ಕತ್ತ (ಪಿಟಿಐ): ಪ್ಲೇ ಆಫ್ ಸ್ಥಾನ ಖಚಿತಪಡಿಸಿಕೊಳ್ಳುವ ಪ್ರಯತ್ನದಲ್ಲಿರುವ ಈಸ್ಟ್ ಬೆಂಗಾಲ್ ತಂಡ, ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಪಂದ್ಯ ದಲ್ಲಿ ಭಾನುವಾರ ಮಾಜಿ ಚಾಂಪಿಯನ್ ಬೆಂಗಳೂರು ಎಫ್‌ಸಿ ತಂಡವನ್ನು ಎದುರಿಸಲಿದೆ.

ಚೆಟ್ರಿ ಪಡೆ ಈಗಾಗಲೇ ಪ್ಲೇ ಆಫ್ ಅವಕಾಶ ಗಿಟ್ಟಿಸಿಕೊಂಡಿದೆ. 22 ಪಂದ್ಯಗಳಿಂದ 27 ಪಾಯಿಂಟ್ಸ್ ಸಂಗ್ರಹಿಸಿರುವ ಕೋಲ್ಕತ್ತದ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ ಪ್ರಸ್ತುತ ಎಂಟನೇ ಸ್ಥಾನದಲ್ಲಿದೆ. ಈ ತಂಡ ಸತತ ಮೂರು ಪಂದ್ಯಗಳನ್ನು ಗೆದ್ದುಕೊಂಡಿದ್ದು,ಬಾಕಿ ಉಳಿದ ಎರಡೂ ಪಂದ್ಯಗಳನ್ನು ಗೆದ್ದುಕೊಂಡರೆ ಪ್ಲೇ ಆಫ್ ಅವಕಾಶ ಜೀವಂತವಾಗಿ ಉಳಿಯಲಿದೆ.

‘ಬ್ಲೂಸ್’ ತಂಡ ಪ್ಲೇಆಫ್ ಟಿಕೆಟ್ ಪಡೆದಿರುವ ಕಾರಣ ಈಸ್ಟ್ ಬೆಂಗಾಲ್ ಮೇಲೆ ಹೆಚ್ಚುವರಿ ಒತ್ತಡ ಇದೆ.

ಸ್ಪೇನ್‌ನ ಆಸ್ಕರದ ಬ್ರುಝೋನ್ ಗರಡಿಯಲ್ಲಿರುವ ಈಸ್ಟ್ ಬೆಂಗಾಲ್ ತವರಿನಲ್ಲಿ ಆಡಿದ ನಾಲ್ಕನೇ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ವಿರುದ್ಧ 2-0 ಗೋಲುಗಳ ಜಯಪಡೆದಿತ್ತು.

ಈ ಹಿಂದೆ ಈಸ್ಟ್ ಬೆಂಗಾಲ್ ಮತ್ತು ಬೆಂಗಳೂರು ಎಫ್‌ಸಿ ತಂಡಗಳು ಒಂಬತ್ತು ಬಾರಿ ಮುಖಾಮುಖಿ ಆಗಿವೆ. ಎರಡೂ ತಂಡಗಳು ತಲಾ ನಾಲ್ಕು ಬಾರಿ ಜಯಗಳಿಸಿವೆ. ಉಳಿದೊಂದು ಪಂದ್ಯ ಡ್ರಾ ಆಗಿದೆ.

ಈಸ್ಟ್ ಬೆಂಗಾಲ್ ರೀತಿ ಬೆಂಗಳೂರು ಎಫ್‌ಸಿ ಕೂಡ ಗೆಲುವಿನ ಹಳಿಗೆ ಮರಳಿದ್ದು ಹುರುಪಿನಲ್ಲಿದೆ. ಸುನಿಲ್ ಚೆಟ್ರಿ ಮತ್ತು ಆಲ್ಬರ್ಟೊ ನೊಗುಯೆರಾ ಅವರು ಉತ್ತಮವಾಗಿ ಆಟ ವಾಡುತ್ತಿದ್ದಾರೆ. ‘ಸಾಧ್ಯವಾದಷ್ಟು ಉತ್ತಮವಾಗಿ ಲೀಗ್ ಪಂದ್ಯಗಳನ್ನು ಮುಗಿಸುವುದು ನಮ್ಮ ಗುರಿ. ಮುಂದಿನ ಎರಡು ಪಂದ್ಯಗಳನ್ನು ಗೆಲ್ಲುವುದು ನಮ್ಮ ಗುರಿ’ ಎಂದು ಬಿಎಫ್‌ಸಿ ಕೋಚ್ ಜೆರಾರ್ಡ್ ಜಾರ್ಗೋಝಾ ಹೇಳಿದರು.

ಚೆಸ್: ಅಗ್ರಸ್ಥಾನಕ್ಕೇರಿದ ಅರವಿಂದ್

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಝೆಕ್ ರಿಪಬ್ಲಿಕ್‌ನ ಗುಯೆನ್ ಥಾಯ್ ವಾನ್ ಅವರನ್ನು ಸೋಲಿಸಿ ಮೊದಲ ಗೆಲುವು ದಾಖಲಿಸಿದರು. ಸ್ವದೇಶದ ಅರವಿಂದ ಚಿದಂಬರಮ್, ಅಗ್ರ ಶ್ರೇಯಾಂಕದ ವೀ ಯಿ ಅವರಿಗೆ ಆಘಾತ ನೀಡಿ ಏಕಾಂಗಿಯಾಗಿ ಅಗ್ರಸ್ಥಾನಕ್ಕೇರಿದರು.

ಈ ಟೂರ್ನಿಯನ್ನು ಗೆಲ್ಲುವ ನೆಚ್ಚಿನ ಆಟಗಾರ ಎನಿಸಿದರುವ ಪ್ರಜ್ಞಾನಂದ (2 ಅಂಕ) ಅವರು ಗೆಲುವು ಅಧಿಕಾರಯುತವಾಗಿತ್ತು. ಗುಯೆನ್ ಥಾಯ್ ಒಂದು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

PATANJALI® wellness
Yoga, Ayurveda & Naturopathy
Yoggram and Niramayam

ಅಲೋಪತಿ ವೈದ್ಯರಿಗೆ ವಿಶೇಷವಾದ ಆರೋಗ್ಯ ಉಡುಗೊರೆ
ಈ ಹೋಳಿಯಲ್ಲಿ ಸ್ವಾಸ್ಥ್ಯವನ್ನು ಆಚರಿಸಿ

ಅಲೋಪತಿ ವೈದ್ಯ ಶಾಸ್ತ್ರವನ್ನು ಅನುಸರಿಸುತ್ತಿರುವ ಎಂಡಿ, ಎಂಬಿಬಿಎಸ್ ವೈದ್ಯರು, ಶಸ್ತ್ರಚಿಕಿತ್ಸಕರು, ದಂತವೈದ್ಯರು, ಚರ್ಮರೋಗ ತಜ್ಞರು, ಇಎನ್‌ಟಿ ತಜ್ಞರು, ನೇತ್ರಶಾಸ್ತ್ರಜ್ಞರು, ಮೂಳೆ ತಜ್ಞರು, ಸ್ತ್ರೀರೋಗತಜ್ಞರು, ಹೃದ್ರೋಗ ತಜ್ಞರು ಮುಂತಾದವರಿಗೆ ಪತಂಜಲಿ ಸ್ವಾಸ್ಥ್ಯ, ನಿರಾಮಯಂ ಮತ್ತು ಯೋಗ್‌ಗ್ರಾಮ್ ವಿಶೇಷ ರಿಯಾಯಿತಿಗಳನ್ನು ನೀಡುತ್ತಿದೆ.

ವೃತ್ತಿನಿರತ ವೈದ್ಯರಿಗೆ 50% ರಿಯಾಯಿತಿ | ನಿವೃತ್ತ ವೈದ್ಯರಿಗೆ 100% ರಿಯಾಯಿತಿ

ಮಾನವೀಯತೆಯನ್ನು ಉನ್ನತಿಗೆ ತರುವಂತೆ ಯಾರು ಸೇವೆ ಮಾಡುತ್ತಾರೋ ಅವರಿಗೆ ನಾವು ನಮ್ಮನ್ನು ಅರ್ಪಿಸಿಕೊಳ್ಳುತ್ತೇವೆ

ಸನಾತನ ಸಂಸ್ಕೃತಿಯು ವೈದ್ಯಕೀಯ ವೃತ್ತಿಯಲ್ಲಿರುವವರನ್ನು ಮಾನವೀಯ ಸೇವೆಯಲ್ಲಿ ತೊಡಗಿರುವ ದೇವರೆಂದು ಪರಿಗಣಿಸುತ್ತದೆ. ಆದರೆ, ನೋವಿನ ಸಂಗತಿ ಎಂದರೆ ರೋಗಿಗಳಿಗೆ ಸೇವೆ ಸಲ್ಲಿಸುವ ಭರದಲ್ಲಿ ವೈದ್ಯರೇ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ವೈದ್ಯ ಶಾಸ್ತ್ರ ಅಭ್ಯಾಸಿಗಳ ಅತಿಯಾದ ಕಾರ್ಯ ಒತ್ತಡವು ಆರೋಗ್ಯಕರ ಜೀವನಶೈಲಿ, ಯೋಗ ಮತ್ತು ಆರೋಗ್ಯಕರ ಆಹಾರ ಪದ್ಧತಿಗಳನ್ನು ಅನುಸರಿಸಲು ಅವಕಾಶ ನೀಡುತ್ತಿಲ್ಲ. ಹೀಗಾಗಿ, ಅವರು ಕೂಡ ಬಿಪಿ, ಥೈರಾಯ್ಡ್, ಶುಗರ್, ಅಸ್ತಮಾ, ಯಕೃತ್ತಿನ ಕಾಯಿಲೆ, ಕಿಡ್ನಿ ಸಮಸ್ಯೆ ಮತ್ತು ಹೃದಯ ಕಾಯಿಲೆಗಳ ಜೊತೆಗೆ ಗರ್ಭಕಂಠದ ನೋವು ಮತ್ತು ಬೊಜ್ಜು ಮುಂತಾದ ಗಂಭೀರ ಕಾಯಿಲೆಗಳನ್ನು ಎದುರಿಸುತ್ತಾರೆ.

ಅತ್ಯಂತ ಪ್ರೀತಿ, ಗೌರವ ಮತ್ತು ಸಹಾನುಭೂತಿಯಿಂದ
ಎಲ್ಲಾ ವೈದ್ಯರನ್ನು ಪತಂಜಲಿ ವೆಲ್ನೆಸ್, ಯೋಗಗ್ರಾಮ್ ಮತ್ತು ನಿರಾಮಯಮ್‌ಗೆ ನಾವು ಆಹ್ವಾನಿಸುತ್ತೇವೆ

ನಾವು ಅವರ ಜೀವನಶೈಲಿ ಸಂಬಂಧಿತ ಮತ್ತು ಗುಣಪಡಿಸಲಾಗದ ಎಲ್ಲಾ ಕಾಯಿಲೆಗಳನ್ನು ವೈಜ್ಞಾನಿಕ ವಿಧಾನದೊಂದಿಗೆ ನಿರ್ವಹಿಸುತ್ತೇವೆ, ಹಿಮ್ಮೆಟ್ಟಿಸುತ್ತೇವೆ ಮತ್ತು ಬೇರುಸಮೇತ ನಿರ್ಮೂಲನೆ ಮಾಡುತ್ತೇವೆ ಹಾಗೂ ಪಂಚಕರ್ಮ ಮತ್ತು ಷಟ್ಕರ್ಮದ ಮೂಲಕ ಅವರ ದೇಹವನ್ನು ಶುದ್ಧೀಕರಿಸುತ್ತೇವೆ ಎಂಬ ಭರವಸೆ ನೀಡುತ್ತೇವೆ. ಚಿಕಿತ್ಸೆಗಳಿಗೆ ಪಾವತಿಸುವ ಸಾಮರ್ಥ್ಯವಿರುವವರಿಗೂ 50% ರಿಯಾಯಿತಿ ಲಭ್ಯವಿದೆ. ಪ್ರತಿ ವ್ಯಕ್ತಿಗೆ ದಿನಕ್ಕೆ 10 ಥೆರಪಿಗಳನ್ನು ನೀಡಲಾಗುತ್ತದೆ, ಇದಕ್ಕೆ ಸಾಮಾನ್ಯವಾಗಿ 5,000 ರಿಂದ 10,000 ವೆಚ್ಚವಾಗುತ್ತದೆ. ಈ ವೈದ್ಯರು ಶಿರೋಧರ, ಅಭ್ಯಂಗ, ಬಾಹ್ಯ ಮತ್ತು ಆಂತರಿಕ ವಸ್ತಿ, ಹೈಡ್ರೋಥೆರಪಿ, ಕೊಲೊನ್ ಥೆರಪಿ, ಶೃಂಗಿ ಥೆರಪಿ, ವಾತ ಮೋಕ್ಷನ್, ರಕ್ತ ಮೋಕ್ಷನ್, ಅಕ್ಯುಪಂಕ್ಚರ್, ಆಕ್ಯುಪ್ರೆಶರ್, ಓಝೋನ್ ಥೆರಪಿ, ಯಜ್ಞ ಥೆರಪಿ ಮತ್ತು ಇತರ ಅನೇಕ ಚಿಕಿತ್ಸೆಗಳೊಂದಿಗೆ ದೈನಂದಿನ ನಿರ್ವಿಶೀಕರಣದ ಕಟ್ಟುಪಾಡುಗಳಿಗೆ ಒಳಗಾಗುತ್ತಾರೆ. ಅವರು ನಮ್ಮ ಪ್ರಾಚೀನ ಋಷಿಗಳ ಯೋಗ ಮತ್ತು ಆಯುರ್ವೇದದ ಪರಂಪರೆಯ ಪ್ರಭಾವವನ್ನು ಇಲ್ಲಿ ಅನುಭವಿಸುತ್ತಾರೆ.

ವಿಶೇಷ– ಸರ್ಕಾರಿ ಅಥವಾ ಖಾಸಗಿ ಉದ್ಯೋಗಗಳಿಂದ ನಿವೃತ್ತರಾದ ಮತ್ತು ಯಾವುದೇ ಆದಾಯದ ಮೂಲವಿಲ್ಲದ ವೈದ್ಯರಿಗೆ 100% ಉಚಿತ ಯೋಗ, ಆಯುರ್ವೇದ, ಪಂಚಕರ್ಮ ಮತ್ತು ಷಟ್ಕರ್ಮ ಚಿಕಿತ್ಸೆಯನ್ನು ಒದಗಿಸಲಾಗುವುದು.
ಈ ಮೂಲಕ ಅವರ ಸೇವೆ ಮಾಡಲು ಬಯಸುತ್ತೇವೆ.

*T&C apply

ಗಮನಿಸಿ – ಟೈಪ್–1 ಡಯಾಬಿಟಿಸ್, ಲಿವರ್, ಕಿಡ್ನಿ ವೈಫಲ್ಯ, ಕ್ಯಾನ್ಸರ್, ಆಟೋ ಇಮ್ಯೂನ್ ಡಿಸೀಸ್ ರೋಗಿಗಳಿಗೆ 25% ರಿಯಾಯಿತಿ ಮಾರ್ಚ್ ತಿಂಗಳಲ್ಲಿ ಮಾತ್ರ ಲಭ್ಯವಿರುತ್ತದೆ.

ಒಂದು ವಾರದ ಅವಧಿಯ ಚಿಕಿತ್ಸೆ ಮತ್ತು ನೋಂದಣಿಗಾಗಿ ಪತಂಜಲಿ ವೆಲ್ನೆಸ್ ಅನ್ನು ಸಂಪರ್ಕಿಸಿ
8954666111, 8954666222, 8954666333 (Working hours - 6 am to 10 pm),
or visit: www.patanjaliwellness.com | booking@patanjaliwellness.com
ನಿಮಗೆ ಆನ್‌ಲೈನ್ ಪಾವತಿ ಮಾಡಲು ಸಾಧ್ಯವಾಗದಿದ್ದರೆ, ನೀವು ಇಲ್ಲಿ ಬಂದು ನೇರವಾಗಿ ನೋಂದಾಯಿಸಿಕೊಳ್ಳಬಹುದು.